'ನೆನಪಿನದೋಣಿಯಲ್ಲಿ' ಬರುವ ಪದ್ಯಗಳು - ಒಂದು ಅಧ್ಯಯನ

೨೦೦೮-೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಮಹೇಂದ್ರ
ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಬಿ.ನಂ.ಚಂದ್ರಯ್ಯ
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮-೦೯

‘ನೆನಪಿನದೋಣಿಯಲ್ಲಿ’ ಬರುವ ಪದ್ಯಗಳು - ಒಂದು ಅಧ್ಯಯನ

೨೦೦೮-೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಮಹೇಂದ್ರ
ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಬಿ.ನಂ.ಚಂದ್ರಯ್ಯ
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮-೦೯

ದೃಢೀಕರಣಪತ್ರ

೨೦೦೮–೦೯ನೇ ಸಾಲಿನಲ್ಲಿ ಕ್ರಮ ಸಂಖ್ಯೆ KVTMKS - 00325ರ ಹಂಪಿ ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ ಮಹೇಂದ್ರ ಅವರು ನನ್ನ ಮಾರ್ಗದರ್ಶನದಲ್ಲಿ 'ನೆನಪಿನದೋಣಿಯಲ್ಲಿ' ಬರುವ ಪದ್ಯಗಳು – ಒಂದು ಅಧ್ಯಯನ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಬಿ.ನಂ.ಚಂದ್ರಯ್ಯ)
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಮೈಸೂರು
ದಿನಾಂಕ: 15-09-09

ಅಭ್ಯರ್ಥಿಯ ಘೋಷಣಾಪತ್ರ

"'ನೆನಪಿನದೋಣಿಯಲ್ಲಿ' ಬರುವ ಪದ್ಯಗಳು – ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ KVTMKS - 00325ರ ವಿದ್ಯಾರ್ಥಿಯಾದ ನಾನು ೨೦೦೮–೦೯ನೇ ಸಾಲಿನ ಪರೀಕ್ಷೆಗಾಗಿ **ಡಾ. ಬಿ.ನಂ.ಚಂದ್ರಯ್ಯನವರ** ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

C. Mahendra

(ಮಹೇಂದ್ರ)

ಮೈಸೂರು

ದಿನಾಂಕ : 15-09-09

೨೦೦೮–೦೯ನೇ ಸಾಲಿನ ಎಂ.ಫಿಲ್. ವಿದ್ಯಾರ್ಥಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಪ ರಿ ವಿ ಡಿ

*****

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಮನುಷ್ಯ ತನ್ನ ಅನುಭವಗಳನ್ನು ಅಭಿವ್ಯಕ್ತಿಸಲು ಬರವಣಿಗೆಯನ್ನು ಕಂಡುಕೊಂಡ. ತನ್ನ ಜೀವನದಲ್ಲಿ ನಡೆದ ಘಟನೆಗಳನ್ನು ತನ್ನ ಕಲ್ಪನಾಶಕ್ತಿಯಿಂದ ಪುನರ್‌ಸೃಷ್ಟಿಮಾಡಿದ. ಅನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ. ಸಾಹಿತಿ ತನ್ನ ಸಮಕಾಲೀನ ಸಂದರ್ಭದ ಸಂಗತಿಗಳನ್ನು ತಾನು ಬದುಕುತ್ತಿರುವ ಸಾಮಾಜಿಕ ಹಿನ್ನೆಲೆಯಲ್ಲಿ ಮೂಡಿದ ಅನುಭವವನ್ನು ಸಾಹಿತ್ಯಕೃತಿಯ ಮೂಲಕ ಅಭಿವ್ಯಕ್ತಿಸುತ್ತಾನೆ. ವ್ಯಕ್ತಿಯು ಸಮಾಜದಲ್ಲಿರುವಾಗ ಸಂಘಜೀವಿಯಾಗಿರುತ್ತಾನೆ. ತಾನು ಕಂಡ ಚೆಲುವು ನಲಿವು ಇವುಗಳು ಇತರರಿಗೂ ದೊರೆಯಲಿ, ಮುಂದೆಯೂ ಉಳಿಯಲಿ ಎಂಬ ಆಂತರಿಕ ಆಕಾಂಕ್ಷೆಯಿಂದ ಅವನು ಮತ್ತೊಬ್ಬರಲ್ಲಿ ಹೇಳಿಕೊಳ್ಳುತ್ತಾನೆ. ಸಮಾಜ ವಿಕಾಸಗೊಂಡಂತೆ ಅವನ ಅನುಭವದ ಅಭಿವ್ಯಕ್ತಿ ವಿಕಾಸಗೊಳ್ಳುತ್ತಾ ಹೋಗುತ್ತದೆ.

ಕುವೆಂಪು ೨೦ನೇ ಶತಮಾನದ ಕನ್ನಡದ ಪ್ರಮುಖ ಲೇಖಕರು. ಆಧುನಿಕ ಕನ್ನಡ ಸಾಹಿತ್ಯದ ಮೇರುಕವಿ. ಅವರು ಕತೆ, ಕಾದಂಬರಿ, ಕಾವ್ಯ, ಮಹಾಕಾವ್ಯ, ನಾಟಕ, ವಿಮರ್ಶೆ ಮೊದಲಾದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೈಯಾಡಿಸಿದ್ದಾರೆ. ಬೊಮ್ಮನಹಳ್ಳಿ ಕಿಂದರಿಜೋಗಿ ಕವನದಿಂದ ಹಿಡಿದು 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದವರೆಗಿನ ಅವರ ಕಾವ್ಯದ ಹಾದಿ ಸುದೀರ್ಘವಾದುದು. ಒಬ್ಬ ಕವಿಯ ಬಗ್ಗೆ ಅಧ್ಯಯನ ಮಾಡುವಾಗ ಅವನ ಸಾಹಿತ್ಯದಂತೆ ಸಾಹಿತ್ಯೇತರ ಚಟುವಟಿಕೆಗಳು ಮುಖ್ಯವಾಗುತ್ತವೆ. ಕವಿಯ ಕಾವ್ಯವನ್ನು ಅಭ್ಯಸಿಸುವಾಗ ಆತನ ಪರಿಸರ, ಬಾಲ್ಯ, ಪ್ರಭಾವ ಹಾಗೂ ಸಾಂಸ್ಕೃತಿಕ ಘಟನೆಗಳು ಎಲ್ಲವೂ ಅಧ್ಯಯನಕ್ಕೆ ಒಳಪಡುತ್ತವೆ. ಕವಿಯ ಕಾವ್ಯ ಕೇವಲ ಕಾವ್ಯವಾಗಿರದೆ ಅವನ ಜೀವನ ವೃತ್ತಾಂತವೂ ಆಗಿರುತ್ತದೆ. ಕುವೆಂಪು ಅವರ ಸಮಗ್ರಕಾವ್ಯದ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ. ಕವಿಯ ನೆನಪಿನ ದೋಣಿಯಲ್ಲಿ ಆತ್ಮಕಥೆಯಲ್ಲಿನ ಪದ್ಯಗಳನ್ನು ಒಟ್ಟಾರೆಯಾಗಿ ಅಭ್ಯಸಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶ.

ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಕೃತಿ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ವಿವರಗಳನ್ನು ಒಳಗೊಂಡಿದೆ. ಕವಿ ತಮ್ಮ ಆತ್ಮಕಥೆಯಲ್ಲಿ ತಾನು ಬರೆದ ಕವಿತೆಗಳೊಂದಿಗೆ ಟಿಪ್ಪಣಿ ಸಹಿತವಾದ ವಿವರಣೆಯನ್ನು ನೀಡಿರುವುದು ಅಧ್ಯಯನಕ್ಕೆ ಉಪಯುಕ್ತ ಸಂಗತಿ. ಈ ಪದ್ಯಗಳ ಆಧಾರದಿಂದ ಕವಿಯ ಕಾವ್ಯವಿಕಾಸ ಹೇಗೆ ಆಗಿದೆ ಎಂಬುದನ್ನು ಗುರುತಿಸುವುದು ಅಧ್ಯಯನದ ಉದ್ದೇಶ.

ಕವಿಯ ಕವನಗಳು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ದಾಖಲೆಗಳಾಗುತ್ತವೆ. ಅವರ ಆರಂಭದ ರಚನೆಗಳು ಉತ್ತಮವಲ್ಲದಿದ್ದರೂ ಅವು ಚಾರಿತ್ರಿಕ ಹಿನ್ನೆಲೆಯಲ್ಲಿ ಮುಖ್ಯವಾಗುತ್ತವೆ ಎಂಬುದನ್ನು ತಿಳಿಸುವುದು ಅಧ್ಯಯನದ ಉದ್ದೇಶ.

ಪ್ರಕೃತಿಯ ಮಡಿಲಲ್ಲಿ ಕುಳಿತು ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ. ಕವಿ ಭಗವಂತನ ಬರುವಿಕೆಯನ್ನು ಪ್ರಕೃತಿಯಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ನಿಸರ್ಗೋಪಾಸನೆಯ ಮೂಲಕ ಅವರ ಅಧ್ಯಾತ್ಮ ಸಾಧನೆ ಹೇಗೆ ಸಾಗಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕುವೆಂಪು ಅವರ ಮಹಾಛಂದಸ್ಸಿನ ರಚನೆ ರೂಪುಗೊಂಡಿದ್ದರ ಹಿನ್ನೆಲೆಯ ವಿವರಗಳು ಕೃತಿಯಲ್ಲಿ ದೊರೆಯುತ್ತವೆ. ಕೃತಿಯಲ್ಲಿನ ಪದ್ಯಗಳನ್ನು ವಿಶ್ಲೇಷಣೆ ಮಾಡುತ್ತ ಅಧ್ಯಯನ ಮಾಡುವುದು ಪ್ರಮುಖ ಉದ್ದೇಶ. ಒಬ್ಬ ಪ್ರಮುಖ ಕವಿಯ ಉತ್ಕೃಷ್ಟ ಸಾಹಿತ್ಯ ಎಷ್ಟು ಮುಖ್ಯವೋ ಆರಂಭದ ರಚನೆಗಳೂ ಅಷ್ಟೇ ಮುಖ್ಯ. 'ನೆನಪಿನದೋಣಿಯಲ್ಲಿ' ಕೃತಿಯಲ್ಲಿನ ಪದ್ಯಗಳು ಕವಿಯ ಕಾವ್ಯ ಸಾಗಿದ ರೀತಿಯನ್ನು ತಿಳಿಸುತ್ತವೆ. ಜೊತೆಗೆ ಕವಿಯ ಚಾರಿತ್ರಿಕ ವಿವರಗಳೂ ದೊರೆಯುತ್ತವೆ. ಕೃತಿಯಲ್ಲಿನ ಪದ್ಯಗಳನ್ನು ಅಧ್ಯಯನ ಮಾಡುವಾಗ ಪ್ರಮುಖ ಧಾರೆಗಳಾಗಿ ಕವಿಯ ನಿಸರ್ಗಪ್ರೇಮ, ಹೆಣ್ಣಿನ ಬಗೆಗಿನ ಭಾವನೆ, ಹಾಗೂ ಅಧ್ಯಾತ್ಮದ ವಿಚಾರ ಮೊದಲಾದ ವಿಷಯಗಳು ಬರುತ್ತವೆ.

ಈ ಅಧ್ಯಯನದಲ್ಲಿ ೮ ಅಧ್ಯಾಯಗಳಿವೆ. ಅಧ್ಯಯನದ ಅನುಕೂಲಕ್ಕಾಗಿಯೇ ವಿಭಾಗಗಳನ್ನಾಗಿ ಮಾಡಿಕೊಂಡು ವಸ್ತುಸ್ಥಿತಿಯ ಅಧ್ಯಯನ ಮಾಡಲಾಗಿದೆ. ಮೊದಲ ಎರಡು ಅಧ್ಯಾಯಗಳಲ್ಲಿ ಕವಿಯ ವ್ಯಕ್ತಿಪರಿಚಯ ಹಾಗೂ ಕೃತಿಯ ಸ್ವರೂಪವನ್ನು ವಿವರಿಸಲಾಗಿದೆ. ಹಾಗೆಯೇ ಮುಂದಿನ ಅಧ್ಯಾಯಗಳಲ್ಲಿ ಕುವೆಂಪು ಅವರ ನಿಸರ್ಗದರ್ಶನ, ಸ್ತ್ರೀಕೇಂದ್ರಿತ ನೆಲೆ, ದಾರ್ಶನಿಕರ ಬಗೆಗಿನ ಕವಿತೆಗಳ ವಿವರಣೆ, ದೇವರು ಅಧ್ಯಾತ್ಮದ ಬಗೆಗಿನ ವಿವರಗಳು ಕುರಿತಂತೆ ನೇರವಾದ ಸಂಶೋಧನೆಯನ್ನು ಮಾಡಲಾಗಿದೆ. ಈ ಅಧ್ಯಯನದ ವ್ಯಾಪ್ತಿಯಲ್ಲಿ ವಿವಿಧ ಪಾತ್ರಗಳಲ್ಲಿ ನಿಸರ್ಗ ಅಭಿವ್ಯಕ್ತಗೊಂಡ ಬಗೆಯನ್ನು ಹೇಳಲಾಗಿದೆ. ಪ್ರಕೃತಿ ಎನ್ನುವುದು ಕುವೆಂಪುವಿಗೆ ಪರಮನಾರಾಧನೆ. ಪ್ರಕೃತಿಯ ಚೆಲುವಿನಲ್ಲೆ ದೈವದ ಸಾಕ್ಷಾತ್ಕಾರವಾಗುತ್ತದೆ. ಕವಿಯ ಪ್ರಕೃತಿಯ ಅನುಭವದ ಸ್ವರೂಪವನ್ನು ಕುರಿತು ಮಹತ್ವದ ಚರ್ಚೆ ಪ್ರಾರಂಭವಾಗುತ್ತದೆ. ನಮ್ಮ ಸುತ್ತಣ ನಿಸರ್ಗವನ್ನು ಪ್ರೀತಿಸುವುದು ನಮಗೆ ಕೇವಲ ಭೌತಿಕವಾದ ಅಗತ್ಯಮಾತ್ರವಲ್ಲ. ಒಂದು ಆಧ್ಯಾತ್ಮಿಕ ಅವಶ್ಯಕತೆಯೂ ಹೌದು ಎನ್ನುವುದನ್ನು ಒಂದು ಮೌಲ್ಯದಂತೆ ಪ್ರತಿಪಾದಿಸುವ ಕುವೆಂಪು ಅವರ ನಿಲವು ಎಷ್ಟು ಸಮಂಜಸ ಎಂಬುದನ್ನು

ಅಧ್ಯಯನ ಮಾಡುವುದು ಈ ಪ್ರಬಂಧದ ಉದ್ದೇಶ. ಕುವೆಂಪು ಅವರ 'ಹೆಣ್ಣಿನ ಬಗೆಗಿನ ಭಾವನೆ' ಅವರ ಬಾಳಸಂಗಾತಿ ಹಾಗೂ ತಾಯಿ ಕುರಿತಾದ ಭಾವನೆ ಹೇಗೆ ಪಡಿಮೂಡಿದೆ ಎಂಬುದು ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿದೆ. ಹಾಗೆಯೇ ಕುವೆಂಪು ಅವರು ಒಂದು ಸ್ವತಂತ್ರವಾದ ವ್ಯಕ್ತಿತ್ವ ರೂಪಿಸಿಕೊಳ್ಳಲು ಕಾರಣರಾದವರ ಬಗ್ಗೆ ಕೆಲವು ಕವಿತೆಗಳನ್ನು ರಚಿಸಿರುವುದನ್ನು ಅಧ್ಯಯನ ಮಾಡಲಾಗಿದೆ. ಅಧ್ಯಾತ್ಮವೇ ಕುವೆಂಪು ಅವರ ಕಾವ್ಯದ ಪ್ರಮುಖ ಧೋರಣೆ. ಕುವೆಂಪು ಅವರ ದೇವರ ಕಲ್ಪನೆ ಅತ್ಯಂತ ವಿಶಿಷ್ಟವಾದದ್ದು.

ಅಧ್ಯಾಯ ೨

ಕುವೆಂಪು : ಪರಿಚಯ ಹಾಗೂ ಸಾಧನೆ

ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ ಕುವೆಂಪು ಅವರ ಸಾಹಿತ್ಯಕ ಬೆಳವಣಿಗೆ, ಸಾಧನೆ, ಸಿದ್ಧಿಗಳಿಂದ, ಅವರು ಇತರ ಕವಿಗಳ ಮೇಲೆ ಬೀರಿದ ಪ್ರಭಾವದಿಂದ ಕಂಗೊಳಿಸುತ್ತದೆ. ಕಾವ್ಯ-ನಾಟಕ, ಸಣ್ಣಕಥೆ, ಕಾದಂಬರಿ, ಕಥನಕವನ, ಮಹಾಕಾವ್ಯ, ಸಾಹಿತ್ಯವಿಮರ್ಶೆ – ಈ ಒಂದೊಂದು ಪ್ರಕಾರದಲ್ಲೂ ಗಣನೀಯವಾದ ಕೊಡುಗೆಯನ್ನು ನೀಡಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಯಾವುದೇ ಪ್ರಕಾರವನ್ನು ಕುರಿತು ಅಧ್ಯಯನ ನಡೆಸುವಾಗ ಕುವೆಂಪುರವರ ಕೃತಿಗಳನ್ನು ಹೊರತುಗೊಳಿಸಿದರೆ ಆ ಅಧ್ಯಯನ ಅಪೂರ್ಣ ಎನ್ನುವಷ್ಟರಮಟ್ಟಿಗೆ ಪ್ರತಿಯೊಂದು ವಿಭಾಗದಲ್ಲೂ ಗಟ್ಟಿಕೃತಿಗಳನ್ನು ಅವರು ರಚಿಸಿದ್ದಾರೆ. ಕನ್ನಡಕ್ಕೆ ರಾಷ್ಟ್ರಮಟ್ಟದ ಖ್ಯಾತಿಯನ್ನು ತಂದುಕೊಟ್ಟ ಮೊದಲಿಗರಲ್ಲಿ ಅವರೂ ಒಬ್ಬರು.

ಕುವೆಂಪು ಅವರ ಪೂರ್ಣ ಹೆಸರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಬಳಿ ಹರಿಯುತ್ತಿರುವ ತುಂಗಾನದಿಯನ್ನು ದಾಟಿ ಒಂಭತ್ತು ಮೈಲಿ ಹೋದರೆ ಕಾಡಿನ ನಡುವೆ ಬೆಟ್ಟಕ್ಕೆ ಅಂಟಿಕೊಂಡಂತೆ ಇರುವ ಮನೆ ಕುಪ್ಪಳ್ಳಿ. ಅದೇ ಅವರ ಊರು. ಅವರು ಹುಟ್ಟಿದ್ದು ಮಾತ್ರ ಕೊಪ್ಪಕ್ಕೆ ಸಮೀಪದ ಹಿರೇಕೊಡಿಗೆಯಲ್ಲಿ, ತಮ್ಮ ತಾಯಿಯ ತವರುಮನೆಯಲ್ಲಿ ೧೯೦೪ನೇ ಇಸವಿ ಡಿಸೆಂಬರ್ ೨೯ನೇ ತಾರೀಖು. ಕುವೆಂಪು ಬೆಳೆದದ್ದು ಕುಪ್ಪಳ್ಳಿಯಲ್ಲಿ. ಸುತ್ತ ದಟ್ಟವಾದ ಕಾಡು, ಮುಗಿಲುಮುಟ್ಟುತ್ತಿರುವ ಪರ್ವತ ಪಂಕ್ತಿಗಳು. ಕವಿ ಬಾಲಕನಿಗೆ ಚಿಕ್ಕಂದಿನಿಂದಲೇ ಸಾಹಿತ್ಯ ಸಂಸ್ಕಾರವೂ ದೊರಕಿತು. ತೀರ್ಥಹಳ್ಳಿಯಲ್ಲಿ ತಮ್ಮ ಬಾಲ್ಯದ ವಿದ್ಯಾಭ್ಯಾಸ ಪಡೆಯುತ್ತಾರೆ. ನಂತರ ಪುಟ್ಟಪ್ಪನವರ ವಿದ್ಯಾಭ್ಯಾಸ ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಮುಂದುವರೆಯಿತು. ಷೆಲ್ಲಿ, ವರ್ಡ್ಸ್‌ವರ್ತ್, ಕೀಟ್ಸ್ ಮೊದಲಾದ ಆಂಗ್ಲ ಕವಿಗಳ ಕವನಗಳನ್ನು ಸ್ವತಂತ್ರವಾಗಿ ಓದುವ ಶಕ್ತಿ ಅವರಿಗೆ ಬಂದಿತ್ತು. ಟಾಲ್‌ಸ್ಟಾಯ್ ಮುಂತಾದವರ ಕಾದಂಬರಿಗಳು, ಪೌರ್ವಾತ್ಯ, ಪಾಶ್ಚಾತ್ಯ, ತತ್ವಜ್ಞರ ಚಿಂತನಶೀಲ ಬರವಣಿಗೆಗಳು ಅವರ ಭಾವ ಬುದ್ಧಿಗಳಿಗೆ ಪುಷ್ಟಿ ನೀಡಿದವು. ಸರ್ವಧರ್ಮ ಸಮನ್ವಯ ಆಚಾರ್ಯರಾದ ಶ್ರೀರಾಮಕೃಷ್ಣರೂ ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರೂ ಪುಟ್ಟಪ್ಪನವರಿಗೆ ಆದರ್ಶವ್ಯಕ್ತಿಗಳಾದರು. ಹದಿನೆಂಟರ ಹರೆಯದ ಪುಟ್ಟಪ್ಪ ೧೯೨೨ರಲ್ಲಿ ತಮ್ಮ ಇಂಗ್ಲಿಷ್ ಕವನಗಳ ಪುಟ್ಟ ಸಂಕಲನವೊಂದನ್ನು 'ಬಿಗಿನರ್ಸ್‌ಮ್ಯೂಸ್' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಆಗಿನ್ನೂ ಅವರು ಹೈಸ್ಕೂಲು ಮೂರನೆಯ ತರಗತಿ ವಿದ್ಯಾರ್ಥಿ. ಕವನಗಳನ್ನು ಓದಿದ ಮಿತ್ರರು, ಹಿರಿಯರೂ

ಕವನಗಳ ಭಾಷೆಗೆ, ಉಪಮೆ ರೂಪಕಗಳಿಗೆ, ವಸ್ತು ವೈವಿಧ್ಯಕ್ಕೆ, ಕಲ್ಪನಾ ಚಾತುರ್ಯಕ್ಕೆ ಮಾರುಹೋದರು.

ಆಕಸ್ಮಿಕ ಎಂಬಂತೆ ಮೈಸೂರಿಗೆ ಬಂದಿದ್ದ ಐರಿಷ್ ಕವಿ ಜೇಮ್ಸ್ ಕಸಿನ್ಸ್ ಅವರಿಗೆ ಪುಟ್ಟಪ್ಪನವರು ತಮ್ಮ ಕವನಗಳನ್ನು ತೋರಿಸಿದರು. ಕವನಗಳನ್ನು ಓದಿದ ಜೇಮ್ಸ್ ಕಸಿನ್ಸ್ ಮೆಚ್ಚಿ ಪ್ರೋತ್ಸಾಹಿಸುವುದರ ಬದಲು "ರವೀಂದ್ರರು ತಮ್ಮ ತಾಯಿನುಡಿಯಾದ ಬಂಗಾಳಿಯಲ್ಲಿ ಬರೆದಂತೆ, ನೀನು ನಿನ್ನ ತಾಯಿನುಡಿಯಾದ ಕನ್ನಡದಲ್ಲಿ ಬರೆ, ಉತಮ ಕವಿಯಾಗುತ್ತೀಯ" ಎಂದರು. ಪುಟ್ಟಪನವರ ಕನ್ನಡ ಕವನಗಳು ಜನಪ್ರಿಯವಾದವು. ವಿದ್ಯಾರ್ಥಿಗಳು ಮಾತ್ರವಲ್ಲದೆ ಅವರ ಅಧ್ಯಾಪಕ ವರ್ಗದವರೂ ವಿದ್ಯಾರ್ಥಿ ಕವಿಯನ್ನು ಮೆಚ್ಚಿ ಪ್ರಶಂಸಿದರು. ಹಾಗೆ ಹೃದಯ ಶ್ರೀಮಂತಿಕೆಯನ್ನು ತೋರಿದ ಮಹನೀಯರಲ್ಲಿ ಪ್ರಾಧ್ಯಾಪಕರುಗಳಾದ ಪ್ರೊ. ಟಿ.ಎಸ್.ವೆಂಕಣ್ಣಯ್ಯನವರು, ಪ್ರೊ. ಎ.ಆರ್.ಕೃಷ್ಣಶಾಸ್ತ್ರಿಗಳು, ಪ್ರೊ. ಬಿ.ಎಂ.ಶ್ರೀಕಂಠಯ್ಯ ಪ್ರಮುಖರು. ಎಂ.ಎ. ತರಗತಿಗೆ ಸೇರಿದ ಮೊದಲಲ್ಲಿ 'ಜಲಗಾರ', ಅನಂತರ 'ಯಮನಸೋಲು' ನಾಟಕಗಳನ್ನು ಪುಟ್ಟಪ್ಪನವರು ರಚಿಸಿದರು. 'ಸರಳ ರಗಳೆ'ಯನ್ನು ಮೊತ್ತಮೊದಲ ಬಾರಿಗೆ ಯಶಸ್ವಿಯಾಗಿ ನಾಟಕದ ರಚನೆಗೆ ಬಳಸಿಕೊಂಡ ಕೀರ್ತಿ ಅವರದು.

೧೯೨೨ ಪುಟ್ಟಪ್ಪನವರ ಬದುಕಿನಲ್ಲಿ ಅತ್ಯಂತ ಮಹತ್ವದ ವರ್ಷ. ಆಧ್ಯಾತ್ಮಿಕ ದೃಷ್ಟಿಯಿಂದಲೂ ಅದು ಅವರಿಗೆ ಮಹತ್ವದ ವರ್ಷ. ಸ್ವಾಮಿ ಸಿದ್ಧೇಶ್ವರಾನಂದರು ಪುಟ್ಟಪ್ಪನವರನ್ನು ದೂರದ ಬಂಗಾಳದ ಬೇಲೂರು ಮಠಕ್ಕೆ ಕರೆದೊಯ್ದು ಶ್ರೀರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರೂ, ಶ್ರೀರಾಮಕೃಷ್ಣ ಮಹಾಸಂಘದ ಮಹಾಧ್ಯಕ್ಷರು ಆದ ಶ್ರೀ ಸ್ವಾಮಿ ಶಿವಾನಂದರಿಂದ ಮಂತ್ರದೀಕ್ಷೆ ಕೊಡಿಸಿದರು.

೧೯೩೦ರಲ್ಲಿ ಕುವೆಂಪುರವರ ಮೊತ್ತಮೊದಲ ಕವನ ಸಂಕಲನ 'ಕೊಳಲು' ಪ್ರಕಟವಾಯತು. ೧೯೩೩ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಸಮ್ಮೇಳನಕ್ಕೆ ಪುಟ್ಟಪ್ಪನವರು ಅಧ್ಯಕ್ಷರಾದರು. ೧೯೩೬ರಲ್ಲಿ ಅವರ ಖಂಡಕಾವ್ಯ 'ಚಿತ್ರಾಂಗದಾ' ಪ್ರಕಟವಾಯಿತು. 'ಚಿತ್ರಾಂಗದಾ' ಕನ್ನಡದ ಮೊದಲ ಖಂಡಕಾವ್ಯ. ೧೯೩೭ರಲ್ಲಿ ಕುವೆಂಪು ದೇವಂಗಿಯ ರಾಮಣ್ಣಗೌಡರ ಪುತ್ರಿ ಹೇಮಾವತಿಯವರನ್ನು ಮದುವೆಯಾದರು. ೧೯೩೩ರಿಂದ ೩೬ರವರೆಗೆ ಅವರು ಕಾದಂಬರಿಯ ರಚನೆಯಲ್ಲಿ ತೊಡಗಿದರು. ೧೯೩೬ರಲ್ಲಿ 'ಕಾನೂರು ಹೆಗ್ಗಡಿತಿ' ಪ್ರಕಟವಾಯಿತು. ಕನ್ನಡದಲ್ಲಿ ಆ ಪ್ರಮಾಣದಲ್ಲಿ ರಚಿತವಾದ ಪ್ರಪ್ರಥಮ ಸಾಮಾಜಿಕ ಕಾದಂಬರಿ ಅದೇ. ಇದೇ ಸಂದರ್ಭದಲ್ಲಿ ಕುವೆಂಪು ಅವರ ಇನ್ನೊಂದು ಕಾದಂಬರಿಯನ್ನೂ 'ಮಲೆಗಳಲ್ಲಿ ಮದುಮಗಳು' ಪ್ರಸ್ತಾಪಿಸಬಹುದು. ಕಾನೂರು ಹೆಗ್ಗಡತಿ ಪ್ರಕಟವಾದ ಸುಮಾರು

ಮೂವತ್ತು ವರ್ಷಗಳ ಬಳಿಕ ಪ್ರಕಟವಾದದ್ದು. ೧೯೪೬ರಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಬಡ್ತಿ ಪಡೆದ ಕುವೆಂಪು ೧೯೫೫ರಲ್ಲಿ ಕನ್ನಡ ಪ್ರಾಧ್ಯಾಪಕರೂ ಇಲಾಖೆಯ ಮುಖ್ಯಸ್ಥರೂ ಆಗಿ ನೇಮಕಗೊಂಡರು. ೧೯೪೯ರಲ್ಲಿ ಅವರ ಮೇರುಕೃತಿ 'ಶ್ರೀರಾಮಾಯಣದರ್ಶನಂ' ಪ್ರಕಟವಾಯಿತು.

ಕುವೆಂಪು ಷೇಕ್ಸ್‌ಪಿಯರನ ಎರಡು ನಾಟಕಗಳನ್ನು ರೂಪಾಂತರಗೊಳಿಸಿ ಕನ್ನಡಿಗರಿಗೆ ನೀಡಿದ್ದಾರೆ. 'ದಿ ಟೆಂಪೆಸ್ಟ್' ನಾಟಕವನ್ನು 'ಬಿರುಗಾಳಿ' ಎಂಬ ಹೆಸರಿನಿಂದ, 'ಹ್ಯಾಮ್ಲೆಟ್' ನಾಟಕವನ್ನು 'ರಕ್ತಾಕ್ಷಿ' ಎಂಬ ಹೆಸರಿನಿಂದ. ಅವರ ನಾಟಕಗಳ ಪಂಕ್ತಿಯಲ್ಲಿ ಕಲೆಯ ದೃಷ್ಟಿಯಿಂದಲೂ, ದರ್ಶನದೃಷ್ಟಿಯಿಂದಲೂ ಅತ್ಯಂತ ಉತ್ತಮವಾದದ್ದು. 'ಬೆರಳ್‌ಗೆ ಕೊರಳ್' ಅಲ್ಲಿನ ಮೂರು ದೃಶ್ಯಗಳನ್ನು ಕವಿ 'ಗುರು', 'ಕರ್ಮ' ಮತ್ತು 'ಯಜ್ಞ' ಎಂದು ಕರೆದಿದ್ದಾರೆ.

ಕುವೆಂಪು ಸಾವಿರಾರು ಕವನಗಳನ್ನು ರಚಿಸಿದ್ದಾರೆ. ಕಾದಂಬರಿ, ಸಣ್ಣಕಥೆ, ವಿಚಾರ ಸಾಹಿತ್ಯ, ನಾಟಕಗಳು, ಆತ್ಮಕಥೆ ಈ ಎಲ್ಲ ಸೃಜನಶೀಲ ಸಾಹಿತ್ಯ ಪ್ರಕಾರಗಳಿಗೂ ಅವರ ಕೊಡುಗೆ ಮಹತ್ತರವಾಗಿದೆ. ಕಾವ್ಯಮೀಮಾಂಸೆಯ ಕ್ಷೇತ್ರಕ್ಕಂತೂ ಅವರು ನೀಡಿರುವ ಕೊಡುಗೆ ಅಪೂರ್ವವಾದುದು. ಅವರದು ದರ್ಶನ ವಿಮರ್ಶೆ. ಅವರದು ಪ್ರಧಾನತಃ ವಿಚಾರಶೀಲ ವ್ಯಕ್ತಿತ್ವ, ಕ್ರಾಂತಿಕಾರಕ ಮನೋಭಾವ. ಸಮಾಜದಲ್ಲಿ ಎಲ್ಲ ವಿಧವಾದ ಅಸಮಾನತೆಗಳೂ ಹೋಗಬೇಕು ಎಂದು ಉಗ್ರವಾಗಿ ಗದ್ಯದಲ್ಲಿ, ಹೃದಯಂಗಮವಾಗಿ ಪದ್ಯದಲ್ಲಿ ವಾದಿಸಿದ್ದಾರೆ. ಅವರು ಮೌಢ್ಯಕ್ಕೆ ಪರಮಶತ್ರು. ಜಾತಿಪದ್ಧತಿ ನಿರ್ಮೂಲಗೊಳ್ಳದೆ ಈ ದೇಶದ ಜನರ ಉದ್ದಾರ ಅಸಾಧ್ಯ ಎಂದು ಒತ್ತಿ ಹೇಳಿದ್ದಾರೆ. ಕುವೆಂಪು ತಮ್ಮ ೮೫ನೆಯ ವಯಸ್ಸಿನಲ್ಲೂ ಮುಂದಿನ ಜನಾಂಗವಾದರೂ 'ವಿಶ್ವಮಾನವ ಸಂದೇಶ'ವನ್ನು ಕೇಳಿ ಉದ್ಧಾರವಾಗುತ್ತಾರೆ ಎಂಬ ಅಚಲವಾದ ನಂಬಿಕೆ ಇಟ್ಟುಕೊಂಡಿದ್ದರು.

ಜಾತಿ, ದೇಶ, ಭಾಷೆ ಇವುಗಳ ಕಿರುಪ್ರಪಂಚದಿಂದ ಮನುಷ್ಯ ಒಂದಲ್ಲ ಒಂದು ದಿನ ಹೊರಬಂದು ವಿಶಾಲವಾದ ವಿಶ್ವಮಾನವನಾಗುತ್ತಾನೆ ಎಂಬ ವಿಶ್ವಾಸದಿಂದ ಬಾಳಿ ಬದುಕಿದರು. ಯಾವ ವ್ಯಕ್ತಿಯೂ ಯಾವುದೇ ಜಾತಿಯ ಶಿಶುವಲ್ಲ; ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲೂ ಅವನದೇ ಆದ ಧರ್ಮವಿದೆ. ಈ ಜಗತ್ತಿನಲ್ಲಿ ಎಷ್ಟು ಜನ ವ್ಯಕ್ತಿಗಳಿದ್ದಾರೆಯೋ ಅಷ್ಟು ಧರ್ಮಗಳಿರಲಿ ಎಂಬ ಸ್ವಾಮಿ ವಿವೇಕಾನಂದರ ವಾಣಿ ಮಾನವತೆಯ ಜೀವನ ಧರ್ಮವಾಗಲಿ ಎಂಬ ಹಾರೈಕೆ ಅವರದು. ಜಗದ ಕವಿಗೆ ಕನ್ನಡದ ಜನತೆ, ಸರ್ಕಾರ, ವಿಶ್ವವಿದ್ಯಾನಿಲಯಗಳು, ಕೇಂದ್ರಸರ್ಕಾರ, ರಾಜ್ಯಸಾಹಿತ್ಯ ಅಕಾಡೆಮಿ, ಕೇಂದ್ರ ಅಕಾಡೆಮಿ– ಎಲ್ಲ ಬಗೆಯ ಅತ್ಯುನ್ನತ ಗೌರವಗಳನ್ನು ನೀಡಿವೆ. ೧೯೫೬ರಲ್ಲಿ ಕುವೆಂಪು ತಾವು ಓದಿ, ಅಧ್ಯಾಪಕ, ಪ್ರಾಧ್ಯಾಪಕರಾಗಿದ್ದ ಮೈಸೂರು

ಮಹಾರಾಜಾ ಕಾಲೇಜಿನ ಪ್ರಾಂಶುಪಾಲರಾದರು. ಅದೇ ವರ್ಷ ಪ್ರಪ್ರಥಮ ಬಾರಿಗೆ ಕನ್ನಡದ ಕೃತಿ "ಶ್ರೀರಾಮಾಯಣದರ್ಶನಂ"ಗೆ ಆ ಪ್ರಶಸ್ತಿ ದೊರಕಿತು. ೧೯೫೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ೧೯೬೬ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ, ೧೯೬೯ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ, ೧೯೮೫ರಲ್ಲಿ ಗುಲ್ಬರ್ಗ ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್ ಪದವಿಯನ್ನು ನಿಡಿದವು. ೧೯೫೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಕಗೊಂಡರು. ೧೯೫೭ರಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ೧೯೬೪ರಲ್ಲಿ ರಾಜ್ಯ ಸರ್ಕಾರ 'ರಾಷ್ಟ್ರಕವಿ' ಎಂದು ಘೋಷಿಸಿತು. ಅವರ ಶಿಷ್ಯರೂ, ಅಭಿಮಾನಿಗಳೂ 'ಗಂಗೋತ್ರಿ', 'ಸಹ್ಯಾದ್ರಿ' ಎಂಬ ಗೌರವಗ್ರಂಥಗಳನ್ನು ಅರ್ಪಿಸಿದರು. ೧೯೬೮ರಲ್ಲಿ ಒಂದು ಸಾಹಿತ್ಯಕೃತಿಗೆ ದೊರಕಬಹುದಾದ ಅತ್ಯುನ್ನತ ಪ್ರಶಸ್ತಿ 'ಜ್ಞಾನಪೀಠ ಪ್ರಶಸ್ತಿ', 'ಶ್ರೀ ರಾಮಾಯಣದರ್ಶನಂ' ಕೃತಿಗೆ ದೊರಕಿತು.

ಹೀಗೆ ಜೀವನದ ಉದ್ದಕ್ಕೂ ಕುವೆಂಪು ಅವರು ತಮ್ಮ ಉದಾತ್ತವಾದ ನಿಲವಿನಿಂದ ಕೆಳಗಿಳಿಯಲಿಲ್ಲ. ಯಾರಿಗೂ ತಲೆಬಾಗದೆ, ಕೀರ್ತಿಗಳಿಗೆ ಆಶಿಸದೆ ಧೀರಚೇತನರಾಗಿ ಬಾಳಿದರು.

ಅಧ್ಯಾಯ ೩

ನೆನಪಿನ ದೋಣಿಯಲ್ಲಿ : ಸ್ವರೂಪ

'ನೆನಪಿನ ದೋಣಿಯಲ್ಲಿ' ಕುವೆಂಪು ಜೀವನದ ಸುಮಾರು ಮೊದಲ ಮೂರು ದಶಕಗಳ ಆತ್ಮಕಥೆ. ಕುವೆಂಪು ಹೇಳುವಂತೆ 'ನೆನಪು ಬಾಳಿನ ಬುತ್ತಿ; ಅನುಭವಗಳ ಅಕ್ಷಯನಿಧಿ' ಎಂಬ ಮಾತು ನಿಜ. ಆದರೆ ಜೀವನದ ಅನುಭವಗಳು ಹಚ್ಚ ಹಸಿರಾಗಿ ಕೊನೆಯ ತನಕ ಉಳಿಯಲಾರವು. ದಿನಚರಿ ಮತ್ತು ಪತ್ರಗಳು ಹಳೆಯ ನೆನಪುಗಳನ್ನು ಅಭಿವ್ಯಕ್ತಿಸಲು ಸಹಾಯಕಗಳಾಗುತ್ತವೆ. ಈ ಆತ್ಮಕಥೆಯ ಒಂದೊಂದು ನೆನಪಿಗೂ ವಾಸ್ತವತೆಯ ಆಧಾರವಿದೆಯೆಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಈ ಕೃತಿ ಪ್ರಕಟವಾದದ್ದು ೨೯-೧೨-೧೯೭೫ರಂದು "ನೆನಪಿನ ದೋಣಿಯಲ್ಲಿ' ನೆನಪುಗಳ ಗಣಿಯೂ ಹೌದು, ಹೃದಯ ಆಹ್ಲಾದಕಾರಿಯಾದ ಚಿತ್ರಶಾಲೆಯೂ ಹೌದು"[೧] ಎನ್ನುವ ದೇಜಗೌ ಅವರ ಮಾತು ಸಮಂಜಸವಾಗಿದೆ. ಕೃತಿಯಲ್ಲಿ ಕಾವ್ಯದ ರಮಣೀಯತೆಯಿದೆ, ಕಥೆಯ ಸುಕುಮಾರತೆಯಿದೆ. ಕಾದಂಬರಿಯ ವಿಲಾಸವಿದೆ. ಕುವೆಂಪು ಅವರ ಅನೇಕ ಆಂಗ್ಲ ಮತ್ತು ಕನ್ನಡ ಭಾಷೆಗಳ ಅಪ್ರಕಟಿತ ಕವನಗಳ ಸೌಂದರ್ಯವನ್ನು ಆಸ್ವಾದಿಸುವ ಅವಕಾಶ ಸಹೃದಯರಿಗೆ ಲಭಿಸುತ್ತದೆ.

ಒಂದು ಸಾವಿರದ ನೂರ ಮೂವತ್ತು ಮೂರು ಪುಟಗಳಲ್ಲಿ ಅರವತ್ತಾರು ವಿಭಾಗಗಳಲ್ಲಿ ಚಿತ್ರಿತವಾಗಿರುವ ಈ ಆತ್ಮಕಥೆ ಕಥನಕಾರನ ಪೂರ್ವವಯಸ್ಸಿನ ವಿವರಗಳನ್ನು ಒಳಗೊಂಡಿದೆ. ಬ್ರಾಹ್ಮಣರ ಮನೆಗೆ ಹಿರಿಯರೊಡನೆ ಹೋದಾಗ ಅವರು ಅನುಭವಿಸುತ್ತಿದ್ದ ಅವಮಾನದ ಪ್ರಸಂಗಗಳು ಗಾಯದ ಮಚ್ಚೆಗಳಂತೆ ಅವರ ನೆನಪಿನ ಬುತ್ತಿಯಲ್ಲಿ ಅಡಗಿವೆ. ೧೯೨೭ರಲ್ಲಿ ಬನುಮಯ್ಯ ಕಾಲೇಜಿನಲ್ಲಿ ನಡೆದ ಸ್ವಾಮಿವಿವೇಕಾನಂದರ ಜನ್ಮೋತ್ಸವದಿಂದಾಗಿ ಅವರಿಗೆ ಸ್ವಾಮಿಸಿದ್ಧೇಶ್ವರಾನಂದ ಮತ್ತು ನಾ.ಕಸ್ತೂರಿಯವರ ಪರಿಚಯವಾಗುತ್ತದೆ. ಆ ಪರಿಚಯ ಕಾಲಕ್ರಮೇಣ ಸ್ನೇಹವಾಗಿ, ಆಶೀರ್ವಾದವಾಗಿ, ರಕ್ಷೆಯಾಗಿ ಪ್ರಭಾವ ಬೀರಿದ ಸಂಗತಿಗಳು ಕೃತಿಯೊಳಗೆ ಹುದುಗಿವೆ.

ಈ ಕೃತಿಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ ಕವಿಯ ಚೇತನದ ವಿಕಾಸ ಹಾಗೂ ಅಧ್ಯಾತ್ಮ ಸಾಧನೆಯ ಪ್ರಗತಿಯೇ ಹೊರತು ಬಾಹ್ಯ ಘಟನೆಗಳಲ್ಲ. ಸಾರಸ್ವತ ಶಕ್ತಿಯೇ ನಾನಾ ರೂಪಗಳ ಮೂಲಕ ಅವರ ಕವಿಚೇತನವನ್ನು ರೂಪಿಸುವ ಸಂಗತಿ ಈ ಕೃತಿಯ ಪುಟಗಳಲ್ಲಿ ಅನಾವರಣಗೊಳ್ಳುತ್ತದೆ. ಅವರ ಕಾವ್ಯ ಹಾಗೂ ಅಧ್ಯಾತ್ಮಗಳ ಪ್ರಪ್ರಥಮ ಗುರು ನಿಸರ್ಗ, ತಮ್ಮ ಮನೆಯಲ್ಲಿ

---

೧. ಜವರೇಗೌಡ.ದೇ(ಸಂ), ನೆನಪಿನ ದೋಣಿಯಲ್ಲಿ ಯಾತ್ರೆ, ಪ್ರಕಾಶಕರು, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ಪುಟ. ೨.

ರಾಮಾಯಣ ಭಾರತಗಳ ವಾಚನವನ್ನು ಕೇಳಿ ಆನಂದಿಸಿದ್ದರೂ ಅವರು ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದ್ದು ಆಂಗ್ಲಭಾಷೆಯ ಮೂಲಕ ಎಂಬುದನ್ನು ಮರೆಯುವಂತಿಲ್ಲ. ೧೯೨೨ರಲ್ಲಿ ಪ್ರೌಢಶಾಲೆಯಲ್ಲಿದ್ದಾಗಲೇ 'ಬಿಗಿನರ್ಸ್ ಮ್ಯೂಸ್' ಎಂಬ ಹದಿನಾರು ಪುಟದ ಆಂಗ್ಲಕವಿತೆಗಳ ಪುಸ್ತಿಕೆಯನ್ನು ಪ್ರಕಟಿಸುತ್ತಾರೆ. ಅವುಗಳಲ್ಲಿ ಕೆಲವು ಆಂಗ್ಲ ಕವಿಗಳ ರಚನೆಯಿಂದ ಪ್ರೇರಣೆಯಾದವು, ಅವುಗಳ ಅನುಕರಣೆಗಳಾಗಿ ಕಾಣುತ್ತವೆ. ಆಂಗ್ಲಭಾಷೆಯಲ್ಲಿ ಅವರು ಮಾಡಿದ ಕಸರತ್ತಿನ ಪ್ರಯೋಜನ ಮುಂದೆ ಕನ್ನಡ ಕಾವ್ಯಕೃಷಿಗೆ ಅನುಕೂಲವಾಯಿತೆಂಬುದು ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ.

ಸಾನೆಟ್, ಪ್ರಗಾಥ ಮೊದಲಾದ ಕನ್ನಡದಲ್ಲಿ ಹಿಂದೆ ಕಂಡು ಕೇಳದ ಪ್ರಕಾರಗಳಲ್ಲಿ ಹಲವು ಬಗೆಯ ಛಂದಸ್ಸುಗಳ ಮೂಲಕ ಅವರ ಕವಿತಾಶಕ್ತಿ ಹೊರಹೊಮ್ಮುತ್ತದೆ. ಇಂಗ್ಲಿಷಿನ ಛಂದಸ್ಸಿನಲ್ಲಿ ಅವರು ಮಾಡಿದ ಪ್ರಯೋಗಗಳಿಗೆ ಲೆಕ್ಕವಿಲ್ಲ. ಕನ್ನಡದಲ್ಲಿ ಬರೆಯಲು ತೊಡಗಿದಾಗ ಇಂಗ್ಲಿಷಿನ ಛಂದೋವೈವಿಧ್ಯ ಸ್ಫೂರ್ತಿಯ ಸೆಲೆಯಾಗುತ್ತದೆ. ಅವರಿಗೆ ಆಂಗ್ಲಕವಿಗಳು ಆದರ್ಶವೇ ಹೊರತು ಕನ್ನಡದ ಆಚಾರ್ಯರಲ್ಲ. ನವೋದಯದ ಕವಿಗಳು ಹೊಸ ಛಂದಸ್ಸುಗಳಲ್ಲಿ ಪ್ರಯೋಗ ನಡೆಸುತ್ತಿರುವಾಗಲೇ, ಅವರಿಗೆ ಅದರ ಅರಿವಿಲ್ಲದೆಯೇ ಸಮಾನಾಂತರವಾಗಿ ಕುವೆಂಪು ಅವರು ನೂತನ ಪ್ರಯೋಗಗಳಲ್ಲಿ ತೊಡಗಿದ್ದರೆಂಬ ಅಂಶ ಗಮನೀಯವಾಗಿದೆ. ಕಾವ್ಯವೇ ಅವರ ಬದುಕಾಗಿ, ಬದುಕೆ ಅವರ ಕಾವ್ಯವಾಗಿತ್ತು ಎನ್ನುವುದಕ್ಕೆ ಇಲ್ಲಿಯ ಪ್ರತಿಯೊಂದು ಪುಟವೂ ಸಾಕ್ಷಿಯಾಗಿವೆ. ೧-೧-೧೯೨೪ರಂದು ಪ್ರಾರಂಭವಾದ ಅವರ ದಿನಚರಿಯ ಬಹುಭಾಗ ಆಂಗ್ಲಭಾಷೆಯಲ್ಲಿ ರಚನೆಗೊಂಡಿರುವುದನ್ನು ನೋಡಿದಾಗ ಅವರ ಆಂಗ್ಲಭಾಷೆಯ ತೀವ್ರತೆ ವ್ಯಕ್ತವಾಗುತ್ತದೆ. 'ಪೂವು' ಎಂಬ ಕವಿತೆಯನ್ನು ಮೊತ್ತಮೊದಲಿಗೆ ರಚಿಸಿದಾಗ ರೂಪಾಂಶದ ಕೊರತೆಯಿದೆ. ಆದ್ದರಿಂದ ಅದು ಬಡಕಲಾಗಿದೆ ಎಂದು ನಿರ್ಣಯಿಸುತ್ತಾರೆ. ೧೯೨೪ ಆಗಸ್ಟ್ ೬ನೆಯ ತಾರೀಖು 'ಬೆಳದಿಂಗಳ ರಾತ್ರಿ' ಎಂಬ ಕವನ ಬ್ಲಾಂಕ್‌ವರ್ಸ್‌ನಲ್ಲಿ ರಚನೆಯಾಗುತ್ತದೆ. ಅದರಲ್ಲಿ ಆದಿ ಅಂತ್ಯ ಪ್ರಾಸಗಳಿಲ್ಲ ಮುಂದೆ ಅವರ ಮಹಾಛಂದಸ್ಸಿಗೆ ಈ ಕವಿತೆ ಬುನಾದಿಯಾಗುತ್ತದೆ. ಮಾರನೆಯ ದಿವಸ 'ಸೊಬಗು' ಎಂಬ ಸಾನೆಟ್ಟನ್ನು ರಚಿಸಿದಾಗ ಇದರ ನೆರವಿನಿಂದ ಕವಿತಾ ಪ್ರಪಂಚವನ್ನೇ ಸೂರೆಗೊಳ್ಳುತ್ತೇನೆ ಎಂದು ಕವಿ ಆತ್ಮವಿಶ್ವಾಸವನ್ನು ವ್ಯಕ್ತಪಡಿಸುತ್ತಾರೆ. ಕುವೆಂಪು ತಮ್ಮ ಆರಂಭದ ರಚನೆಗಳ ಲೋಪದೋಷಗಳನ್ನು ಅವರೆ ಎತ್ತಿ ತೋರಿಸುತ್ತಾರೆ. ಕಸಿನ್ಸ್ ಅವರನ್ನು ಭೇಟಿಯಾದ ನಂತರವೂ ಕನ್ನಡ ರಚನೆಗಳ ಜತೆಗೆ ಇಂಗ್ಲಿಷ್ ಕವಿತೆಗಳೂ ಅವರ ಲೇಖನಿಯಿಂದ ಉದ್ಭವಿಸುತ್ತವೆ. ಮೊದಮೊದಲು ಕಾದಂಬರಿಯ ಬಗ್ಗೆ ಅವರಿಗಿದ್ದ ತಿರಸ್ಕಾರ

ಟಾಲ್‌ಸ್ಟಾಯ್, ಹಾರ್ಡಿ ಮೊದಲಾದವರ ಕಾದಂಬರಿಗಳನ್ನೋದಿದ ನಂತರ ಗೌರವವಾಗಿ ಆರಾಧನೆಯಾಗಿ ಪರಿವರ್ತನೆಗೊಳ್ಳುತ್ತದೆ. ತಾವು ಬರೆದ ಕವಿತೆಗಳನ್ನು ಗೆಳೆಯರ ಮುಂದೆ ವಾಚಿಸುವ ತನಕ ಕುವೆಂಪು ಅವರಿಗೆ ತೃಪ್ತಿ ಇರುತ್ತಿರಲಿಲ್ಲ. ಅವರ ಕವಿತಾವಾಚನವೆಂದರೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಶೋತೃಗಳು ನೆರೆಯುತ್ತಾರೆ. ಅವರ ಕವಿತೆಗಳ ವಾಚನವನ್ನು ಕೇಳಿದ ಕನ್ನಡದ ಮಾಸ್ತಿಯವರು 'ಕೊಳಲು' ಪ್ರಕಟಣೆಗೆ ಕಾರಣರಾಗುತ್ತಾರೆ.

ನಿಸರ್ಗೋಪಾಸನೆಯೇ ಕುವೆಂಪು ಅವರ ಅಧ್ಯಾತ್ಮಿಕ ವಿಕಾಸಕ್ಕೆ ನಾಂದಿಯಾಗುತ್ತದೆ. ನಿಸರ್ಗದ ಗರ್ಭದಲ್ಲಿ ಜನಿಸಿ, ಅದರ ಮಡಿಲಲ್ಲಿ ಬೆಳೆದ ಅವರು ನವಿಲು ನೋಡಿ ಕಲಿಯುತ್ತಾರೆ. ಕಾನನದ ರಮಣೀಯತೆಯಿಂದ, ಸೂರ್ಯಚಂದ್ರರ ಉದಯಾಸ್ತಗಳಿಂದ ಸ್ಫೂರ್ತಿಪಡೆಯುತ್ತಾರೆ. ಬಾಲ್ಯದಲ್ಲಿ ಆಳಿನ ಹೆಗಲ ಮೇಲೆ ಕುಳಿತು ಊರಿಂದೂರಿಗೆ ಕಾಡಿನ ಮಧ್ಯೆ ಹೋಗುವಾಗ, ಬಾಲ್ಯದಲ್ಲಿ ಭೀಕರ ಅರಣ್ಯದ ನಡುವೆ ಹಿರಿಯರ ಮತ್ತು ಗೆಳೆಯರ ಸಂಗದಲ್ಲಿ ಸುತ್ತಾಡುವಾಗ ಅವರಿಗೆ ನಿಸರ್ಗದ ಪ್ರೇಮಭಿಕ್ಷೆ ದೊರೆಯುವುದನ್ನು ಕಾಣಬಹುದು. ಅವರ ಜೀವನದಲ್ಲಿ ಸಂಘಟಿಸಿದ ಪ್ರತಿಯೊಂದು ಘಟನೆಯೂ ಅವ್ಯಕ್ತಶಕ್ತಿಯಿಂದ ಪೂರ್ವನಿಯೋಜಿತವಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಕುವೆಂಪು ಅವರ ಚೇತನ, ಆ ಚೇತನದ ಪ್ರತಿಯೊಂದು ವ್ಯಾಪಾರವೂ ಸದಾ ಸಾಹಿತ್ಯಕ ಹಾಗೂ ಆಧ್ಯಾತ್ಮಿಕ ಪಥಗಳಲ್ಲಿ ಮುಂದುವರಿದ ಸಂಗತಿಗಳು ಆತ್ಮಕಥನದ ಉದ್ದಕ್ಕೂ ಪ್ರತಿಧ್ವನಿಗೈಯುತ್ತದೆ.

೮.೧೦.೧೯೨೨ರಂದು ಶ್ರೀ ರಾಮಕೃಷ್ಣರ ಅಂತರಂಗದ ಶಿಷ್ಯರಲ್ಲೊಬ್ಬರಾದ ಸ್ವಾಮಿ ಶಿವಾನಂದರಿಂದ ದೀಕ್ಷೆಯಾಗುತ್ತದೆ. ಮುಂದೆ ಅವರ ಅಧ್ಯಾತ್ಮ ಸಿದ್ಧಿಗೆ ಆ ಪ್ರಸಂಗವೇ ಮೆಟ್ಟಿಲಾಗಿರುವುದನ್ನು ಗಮನಿಸಬೇಕು. ಕುವೆಂಪು ಅವರ ಆಧ್ಯಾತ್ಮಿಕ ವಿಚಾರಗಳನ್ನು ತಿಳಿಯದವರು ಮೌಢ್ಯವೆಂದು ಗ್ರಹಿಸಬಹುದಾದ ಸಾಧ್ಯತೆಯುಂಟು. ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ ಮನೋಭಾವಗಳು ಅವರ ಬಾಳಿನ ಹಾಗೂ ಸಕಲ ಸಾಧನೆಗಳ ನೆಲಗಟ್ಟು ಎಂಬುದನ್ನು ಮರೆಯಲಾಗದು. ಅವರಿಗೆ ಜಾತಿಮತಗಳ ಬಂಧನವಿಲ್ಲ. ಮೌಢ್ಯಕ್ಕೆ ಕಾರಣವಾದ ಪುರೋಹಿತಶಾಹಿಯ ಬಗ್ಗೆ ಅವರಿಗೆ ಕಟು ತಿರಸ್ಕಾರ, ಮಠ, ಪೂಜೆ, ಹೋಮ, ಯಜ್ಞ, ಸತ್ಯನಾರಾಯಣವ್ರತ ಇತ್ಯಾದಿ ಕೋಟೆಗಳಲ್ಲಿ ಪುರೋಹಿತರು ತಮ್ಮ ರಕ್ಷಣೆಯನ್ನು ಭದ್ರಪಡಿಸಿಕೊಂಡು ಶೂದ್ರರನ್ನು ಶೋಷಿಸುತ್ತಿದ್ದಾರೆಂದು ಅವರು ಮೇಲಿಂದ ಮೇಲೆ ಆರ್ಭಟಿಸುತ್ತಾರೆ.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರದ ಕೆಲವು ಚಿತ್ರಣಗಳು ಕೂಡ ಇಲ್ಲಿ ಆಕರ್ಷಕವಾಗಿ ಮೂಡಿಬಂದಿವೆ. ನವನಾಗರಿಕತೆಯ ಹರಿಕಾರರಾಗಿ ಕ್ರೈಸ್ತಪಾದ್ರಿಗಳು ಮಲೆನಾಡಿನ ದುರ್ಗಮ ಪ್ರದೇಶಗಳನ್ನು ಪ್ರವೇಶಿಸಿದಾಗ ಪರಂಪರಾಗತವಾಗಿ ಬಂದ

ಕೆಲವು ನಂಬಿಕೆಗಳಿಗೆ ಬಿದ್ದ ಆಘಾತ, ಅದರ ಫಲವಾಗಿ ಕಂಡುಬಂದ ಬದಲಾವಣೆಗಳು, ಅದುವರೆವಿಗೂ ಬ್ರಾಹ್ಮಣರ ಸೊತ್ತಾಗಿದ್ದ ಓದು, ಜ್ಞಾನಸಂಪಾದನೆ ಶೂದ್ರರ ಪಾಲಿಗೂ ಎಟುಕುವಂತಾಗಿ ಶೂದ್ರರಲ್ಲಿ 'ಅರಿವಿನ ಜಾಗೃತಿ ಸ್ಫೋಟ' ಉಂಟಾದ ಮೊದಲಾದ ಸಂಗತಿಗಳು ಬಹುಬೆಲೆಯುಳ್ಳಾಗಿವೆ. ನೆನಪಿನ ದೋಣಿಯಲ್ಲಿ ಕೃತಿ ನಮ್ಮ ಸಾಮಾಜಿಕ ಬದಲಾವಣೆಯನ್ನು ಅಧ್ಯಯನ ಮಾಡುವವರಿಗೆ ಒಳ್ಳೆಯ ಆಕರವಾಗಿದೆ.

ಇನ್ನೊಂದು ವಿಶಿಷ್ಟವಾದ ಮಹತ್ವ ಸಂಗತಿಯೆಂದರೆ 'ಸ್ವಾತಂತ್ರ್ಯಾಂದೋಲನದ ಆರಂಭದ ಚಟುವಟಿಕೆಗಳು ಈ ಕೃತಿಯಲ್ಲಿ ಸಾಕಷ್ಟು ದಾಖಲಾಗಿರುವುದು. ಆಗ ಜನರ ಮನಸ್ಸು ದೇಶ–ಭಾಷೆಗಳ ವಿಚಾರವಾಗಿ ಏಕಮುಖವಾಗಿ ದುಡಿಯುತ್ತಿದ್ದ ಕಾಲ. 'ಮಾತೃಭೂಮಿ' ಎಂಬುದರ ಮುಂದೆ ಎಲ್ಲ ವ್ಯಕ್ತಿತತ್ವಗಳೂ ಮಣಿಯುತ್ತಿದ್ದ ಕಾಲವಾಗಿತ್ತು. ಈ ಎಲ್ಲದರ ಚಾರಿತ್ರಿಕ ಸಂಗತಿಗಳು ಕೃತಿಯೊಳಗೆ ಆಧಾರಸಹಿತ ದೊರೆಯುತ್ತವೆ.

ಮಲೆನಾಡು, ಅಲ್ಲಿನ ಪರಿಸರ ಕುವೆಂಪು ಅವರ ಕವಿಚೇತನವನ್ನು ಉನ್ಮಾದಗೊಳಿಸಿದಂತೆ ಅವರಲ್ಲಿ ಬೀಜರೂಪವಾಗಿದ್ದ ಮಹಾವ್ಯಕ್ತಿತ್ವವೊಂದು ಹೆಮ್ಮರವಾಗಿ ಬೆಳೆಯಲು ನೀರೆರೆದು ಪೋಷಿಸಿದವರು, ಸಂಸ್ಕಾರಯುತ ಪರಿಸರವೊಂದನ್ನು ಒದಗಿಸಿಕೊಟ್ಟ ವ್ಯಕ್ತಿತ್ವಗಳು ಅನೇಕ. ಅಂತಹ ಒಡನಾಟದ ಚಿತ್ರಣ ಭಾವಪೂರ್ಣವಾಗಿ ನಿರೂಪಿತವಾಗಿದೆ. ಇವರಲ್ಲಿ ಹಿರಿಯರು ಕಿರಿಯರು ಸಾಮಾನ್ಯರು ಮಹಾನ್‌ವ್ಯಕ್ತಿಗಳು ಇದ್ದಾರೆ.

ಈ ಆತ್ಮಕಥೆಯ ಪರಿಧಿಯಿಂದ ಅನೇಕ ಸುಪ್ರಸಿದ್ಧ ಅಲ್ಪ ಪ್ರಸಿದ್ಧ ಸಿದ್ಧ ವ್ಯಕ್ತಿಗಳ ಚಿತ್ರಗಳು ಮೂಡಿನಿಲ್ಲುತ್ತವೆ. ಈ ಕಥೆಯ ವಾಹಿನಿಗೆ ಸಂಜೀವಿನಿಯಾಗಿ, ನಾಡಿನ ಸಾಂಸ್ಕೃತಿಕ ಜೀವನಕ್ಕೆ ಪರೋಕ್ಷ ಸ್ಫೂರ್ತಿಶಕ್ತಿಯಾಗಿ, ಇಡೀ ಚರಿತ್ರೆಯಲ್ಲೆಲ್ಲ ಆತ್ಮ ತೇಜಸ್ಸನ್ನು ತುಂಬಿರುವ ವ್ಯಕ್ತಿಗಳು ಇಬ್ಬರು. ಒಬ್ಬರು ಸ್ವಾಮಿಸಿದ್ಧೇಶ್ವರಾನಂದರು, ಮತ್ತೊಬ್ಬರು ತಾಯಿ ಸೀತಮ್ಮನವರು. ಇತರ ವ್ಯಕ್ತಿಗಳು ಸೂಕ್ತ ಸಂದರ್ಭಗಳಲ್ಲಿ ಕಥಾನಾಯಕರ ಜೀವನ ಜ್ಯೋತಿಗೆ ತೈಲವೆರೆದು ಹಿಂದಕ್ಕೆ ಸರಿಯುತ್ತಾರೆ. ವೆಂಕಟಪ್ಪಗೌಡರು, ಹೊಸಮನೆ ಮಂಜಪ್ಪಗೌಡರು, ನಾ.ಕಸ್ತೂರಿ, ಎಂ.ಎಚ್.ಕೃಷ್ಣಅಯ್ಯಂಗಾರ್, ಜೆ.ಎಫ್.ಕಸಿನ್ಸ್, ಬಿ.ಎಂ.ಶ್ರೀಕಂಠಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದೇವಂಗಿ ರಾಮಣ್ಣಗೌಡರು ಮತ್ತು ದೇವಂಗಿ ಮಾನಪ್ಪನವರು, ಅವರಿಗೆ ದೀಕ್ಷೆಕೊಟ್ಟ ಸ್ವಾಮಿ ಶಿವಾನಂದರನ್ನು ಮರೆಯುವಂತಿಲ್ಲ. ಶ್ರೀ ರಾಮಕೃಷ್ಣ, ಸ್ವಾಮಿವಿವೇಕಾನಂದ, ಟಾಲ್‌ಸ್ಟಾಯ್, ಟಾಗೂರ್‌ರವರು ಈ ಆತ್ಮಕಥೆಯಲ್ಲಿ ಪುನರ್ಜನ್ಮ ಪಡೆದಂತೆ ಇಡೀ ಕೃತಿಯೊಳಗೆ ಕಂಗೊಳಿಸುತ್ತಾರೆ. ಈ ವ್ಯಕ್ತಿಚಿತ್ರಗಳ ಜತೆಗೆ ಬರುವ ವರ್ಣನೆಗಳು ಆತ್ಮಕಥೆಗೆ

ಕಾದಂಬರಿಯ ಸ್ವರೂಪವನ್ನು ದಯಪಾಲಿಸುತ್ತವೆ. ಮೇಲಿಂದ ಮೇಲೆ ಬರುವ ವರ್ಣನೆಗಳಲ್ಲಿ ಪುನರಾವೃತ್ತಿಯಿರದೆ ಒಂದೊಂದು ರೋಚಕವಾಗಿ ಓದುಗರ ಮನವನ್ನು ಸೆರೆಹಿಡಿಯುತ್ತದೆ. ವರ್ಣನೆಗಳು ಬದುಕಿನ ಒಂದು ಭಾಗವಾಗಿ ಬರುತ್ತವೆಯೇ ಹೊರತು ಪ್ರತ್ಯೇಕವಾಗಿ ಕಾಣುವುದಿಲ್ಲ. ನಿಸರ್ಗ ಮಲೆನಾಡಿನ ಜೀವನದ ಹಾಗೂ ಕುವೆಂಪು ಅವರ ಬದುಕಿನ ಕೇಂದ್ರಶಕ್ತಿಯಾದ್ದರಿಂದ ಅದರ ವರ್ಣನೆ ಆತ್ಮಕಥೆಯ ಅನಿವಾರ್ಯದ ಅಂಶವಾಗಿದೆ.

ಕಥೆಯುದ್ದಕ್ಕೂ ಬರುವ ಹಾಸ್ಯಸನ್ನಿವೇಶಗಳು ಹೊಟ್ಟೆಹುಣ್ಣಾಗುವಂತೆ ಓದುಗರನ್ನು ನಗಿಸುತ್ತವೆ. ಪ್ರಾರಂಭದಲ್ಲಿಯೇ ಪ್ರತ್ಯಕ್ಷವಾಗುವ ಸೀಅಪ್ಪು ಬಯಕೆಯ ಪ್ರಸಂಗ ಓದುಗರ ಮನೋಭೂಮಿಕೆಯಲ್ಲಿ ನೀರೂರಿಸುತ್ತದೆ. ನಾಮಪ್ರಕರಣದಲ್ಲಿ ಹಾಸ್ಯವಿದೆ, ವಿಡಂಬನೆಯಿದೆ, ಅಪಹಾಸ್ಯವಿದೆ. ಈ ಕೃತಿಯಲ್ಲಿ ಕವಿಚೇತನದ ಮತ್ತು ಆಧ್ಯಾತ್ಮಿಕ ವ್ಯಕ್ತಿತ್ವದ ವಿಕಾಸಪಥದ ಹೆಜ್ಜೆ ಗುರುತುಗಳನ್ನಿಲ್ಲಿ ಕಾಣಬಹುದಾಗಿದೆ.

ಕುವೆಂಪು ಒಂದೆಡೆ ಹೇಳುತ್ತಾರೆ: "ಕವಿಯ ಜೀವನ ಚರಿತ್ರೆ ಎಂದರೆ ಅವನ ಕವನಗಳೆ; ಉಳಿದೆಲ್ಲವೂ ಅಡಿಟಿಪ್ಪಣಿ"[೧] 'ನೆನಪಿನ ದೋಣಿಯಲ್ಲಿ' ಗ್ರಂಥ ತನ್ನ ಕಲಾಗೌರವದಿಂದ ಅಧ್ಯಾತ್ಮ ಗೌರವದಿಂದ ಕೂಡ ಚಿರಂತನ ಮೌಲ್ಯವನ್ನು ಪಡೆದುಕೊಂಡಿರುವುದರ ಜೊತೆಗೆ ಗಣ್ಯವಾದ ಚಾರಿತ್ರಿಕ ಮೌಲ್ಯವನ್ನು ಒಳಗೊಂಡಿದೆ. ಭಾರತದ ಸ್ವಾತಂತ್ರ್ಯಸಂಗ್ರಾಮ, ಕನ್ನಡ ನವೋದಯ, ಅಂದಿನ ಮೈಸೂರು ನಗರ, ಅಂದಿನ ಕರ್ನಾಟಕ, ಮಲೆನಾಡು, ಜನಜೀವನ, ವೇಷಭೂಷಣ, ರೀತಿನೀತಿ ಮುಂತಾದುವುಗಳ ಮೇಲೆ ಇದು ಬೆಳಕು ಹಾಯಿಸುತ್ತದೆ.

"ಮಾನವನ ಪೂರ್ಣವಿಕಾಸಕ್ಕೆ ವಿಚಾರವಂತಿಕೆಯ ಅಗತ್ಯವಿದೆ. ಮಾನವೀಯತೆ, ಸೌಂದರ್ಯನುಭೂತಿ, ಆಧ್ಯಾತ್ಮಿಕ ಸತ್ಯಾನ್ವೇಷಣೆ ಇವೆಲ್ಲವೂ ಅವಶ್ಯಕ. ಇವು ಯಾವುವೂ ಪರಸ್ಪರ ವಿರುದ್ಧವಿಲ್ಲ. ಇವುಗಳ ಸಮ್ಮೀಳನವೇ ಸಮಗ್ರದೃಷ್ಟಿ. ಇಂಥ ದೃಷ್ಟಿಯನ್ನು ಕುವೆಂಪು ಜೀವನದಲ್ಲಿ ನೋಡಬಹುದಾಗಿದೆ".[೨] ಕುವೆಂಪು ಅವರಿಗೆ ಬದುಕಿನಲ್ಲಿ ಯಾವುದೂ ನಿರಾಸಕ್ತಿಯನ್ನು ಹುಟ್ಟಿಸುವುದೇ ಇಲ್ಲ. ಹಾಗಾಗಿ ಬದುಕಿನ ಯಾವುದೂ ಅವರ ರಸತಪಸ್ಯೆಗೆ ಹೊರತಾಗಲು ಸಾಧ್ಯವಾಗುವುದೇ ಇಲ್ಲ. ತಮ್ಮ ಅರವತ್ತು ವರ್ಷಗಳ ಸಾರ್ಥಕ ಬದುಕನ್ನು ಸಿಂಹಾವಲೋಕನ ಕ್ರಮದಿಂದ ನಿರೀಕ್ಷಿಸುತ್ತಿರುವ ಕುವೆಂಪು ಮತ್ತೊಂದು ವಿಸ್ಮಯಲೋಕವನ್ನು ಕಂಡು ಚಿತ್ರಿಸಿರುವಂತೆ

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ೧೯೭೩, ಪು. ೪೫೭.

೨. ಬೋರಲಿಂಗಯ್ಯ, ನೆನಪಿನ ದೋಣಿಯಲ್ಲಿ ಕಂಡುಬರುವ ಸಮಗ್ರದೃಷ್ಟಿ, ನೆನಪಿನ ದೋಣಿಯಲ್ಲಿ ಯಾತ್ರೆ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೧೯೮೧, ಪು. ೬೫.

ತೋರುತ್ತದೆ. ವ್ಯಕ್ತಿಯ ಅಹಂಕಾರ ಪ್ರಕೃತಿಯ ಔದಾರ್ಯದ ಮುಂದೆ ಎಷ್ಟು ನಿಕೃಷ್ಟವಾಗುತ್ತದೆ ಮತ್ತು ಗೌಣವಾಗುತ್ತದೆ ಎಂಬುದನ್ನು ವೈಯಕ್ತಿಕ ಬದುಕಿನ ಪರಿಶೀಲನೆಯ ಮೂಲಕವೆ ಕವಿ ಚೈತನ್ಯ ಇಲ್ಲಿ ಕಾಣುತ್ತದೆ. ಕೃತಿಯ ಉದ್ದಕ್ಕೂ ಅನುಭವಗಳನ್ನು ತಿದ್ದುತ್ತಾ, ಒರೆಹಚ್ಚಿ ಪರೀಕ್ಷಿಸುತ್ತಾ ಬದುಕಿಗೆ ಅಳವಡಿಸಿಕೊಳ್ಳುತ್ತಾ ಬೆಳೆದಿರುವ ಸಾರ್ಥಕ ವ್ಯಕ್ತಿಯನ್ನು ನೋಡಬಹುದು. ಕುವೆಂಪು ಅವರ ಆತ್ಮಕಥೆ ಸಾಹಿತ್ಯಕ ಹಾಗೂ ಚಾರಿತ್ರಿಕ ಘಟನೆಗಳನ್ನು ವಿವರಿಸುವ ಜತೆಗೆ ಕನ್ನಡನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯಲು ಸಹಾಯಕವಾಗಿದೆ.

ಅಧ್ಯಾಯ ೪

ಕುವೆಂಪು ಅವರ ನಿಸರ್ಗದರ್ಶನ

ಮಾನವ ಮತ್ತು ಪ್ರಕೃತಿಯ ಸಂಬಂಧ ಅನಾದಿಯೂ, ಅನನ್ಯವೂ ಆದದ್ದು. ಆ ಆದಿಮಾನವ ಹುಟ್ಟಿದ್ದು ಕಾಡಿನ ಒಡಲಲ್ಲಿ. ಅರಣ್ಯದ ಅಂಗಳದಲ್ಲಿ ತನ್ನ ವಿಕಾಸದ ಹೆಜ್ಜೆಗಳನ್ನು ಕಂಡುಕೊಂಡ. ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವ ಆಹಾರಕ್ಕಾಗಿ ಬೇಟೆಯನ್ನೂ, ಲಿಪಿಯನ್ನು ಕಲಿತುಕೊಂಡ. ನಂತರ ಬದುಕಿನಲ್ಲಿ ಸಾಮಾಜಿಕ, ನಾಗರಿಕ ನಡಾವಳಿಗಳನ್ನು ರೂಪಿಸಿಕೊಂಡ. ಅವನ ಈ ವಿಕಾಸದ ಹಂತದಲ್ಲಿ ಅವನಲ್ಲಿ ದೈಹಿಕ ಬದಲಾವಣೆಯಾಯಿತು. ನಾಲ್ಕು ಕಾಲಿನ ಮಂಗವಾಗಿದ್ದ ಅವನು ಎರಡು ಕಾಲುಗಳಲ್ಲಿ ನಡೆವ ಮಾನವನಾಗಿ ಸುಧಾರಣೆಗೊಂಡಿದ್ದ. ಹಾಗೆಯೇ ಅವನ ಪರಿಸರ ಪ್ರಜ್ಞೆಯೂ ವಿಕಾಸವಾಯಿತು. ಆಗ ಪ್ರಕೃತಿ ಅವನಿಗೆ ಜ್ಞಾನರೂಪಿಣಿಯಾಗಿ ಕಾಣುತ್ತದೆ. ಆದ್ದರಿಂದ ಮಾನವ ಮತ್ತು ಪ್ರಕೃತಿ ನಿಕಟವಾದ ಸಂಬಂಧ ಹೊಂದಿವೆ. ಪ್ರಕೃತಿ ಇಡೀ ಮಾನವ ಪ್ರಪಂಚದೊಂದಿಗೆ ನಿಕಟ ಸಂಬಂಧವುಳ್ಳದಾಗಿದೆ. ಸಮಾಜದ ವಾತಾವರಣ ನಮ್ಮ ನಡೆನುಡಿಗಳನ್ನು ನಿರ್ಣಯಿಸುವಂತೆಯೇ ಪ್ರಕೃತಿಮಾತೆ ನಮಗೆ ತಿಳಿದೊ ತಿಳಿಯದೆಯೊ ನಮ್ಮ ಮನೋಭಾವನೆಗಳನ್ನು ತಿದ್ದಿ ನಮ್ಮ ವ್ಯಕ್ತಿತ್ವಕ್ಕೆ ಒಂದು ಸ್ವರೂಪವನ್ನುಂಟು ಮಾಡುತ್ತದೆ. ಹುಟ್ಟಿದ ಮಗುವಿಗೆ ಮೊದಲನೆಯ ವಾತಾವರಣವೆ ಪ್ರಕೃತಿ. ಪ್ರಕೃತಿಯೇ ಪ್ರತಿಯೊಂದು ಮಗುವಿಗೂ ಗುರು. ಪ್ರಕೃತಿಯ ಭಾಗವಾಗಿರುವ ಮನುಷ್ಯನ ಮೇಲೆ ನಿಸರ್ಗ ಬೀರಿರುವ ಪ್ರಭಾವ ಅಪಾರ. ನಿಸರ್ಗಮಾನವನ ಬದುಕಿನಲ್ಲಿ ಜೀವವಾಹಿನಿಯಾಗಿದೆ. ಆದ್ದರಿಂದ ಪ್ರಕೃತಿಯೇ ಅವನ ನೆಲೆ, ಜತೆಗೆ ಜೀವನೋತ್ಸಾಹದ ಸೆಲೆಯಾಗಿದೆ. ನಿಸರ್ಗ ಮಾನವನಿಗೆ ಜೀವನಾವಶ್ಯಕವಷ್ಟೇ ಅಲ್ಲ, ಜೀವನದ ಉತ್ಸಾಹವೂ ಹೌದು. ಪ್ರಕೃತಿ ಸೌಂದರ್ಯಮಯವಾದುದಲ್ಲದೆ ಆಶ್ಚರ್ಯದಾಯಕವಾಗಿಯೂ ಇರುವುದು. ನಡುರಾತ್ರಿಯಲ್ಲಿ ಕೊಠಡಿಯಿಂದ ಹೊರಹೊರಟು ಮಹಡಿಯ ಮೇಲೆ ನಿಂತು ಗಂಭೀರವಾದ ನೀಲಗಗನವನ್ನು ತಲೆಯೆತ್ತಿ ನಮ್ರತೆಯಿಂದ ನೋಡಿದರೆ, ಅಸಂಖ್ಯವಾದ ನಕ್ಷತ್ರಗಳು ಸ್ನೇಹಭಾವದಿಂದ ನಮ್ಮ ಕಡೆಗೆ ನೋಡುವಂತೆ ವೇದ್ಯವಾಗುವುದು. ಅಲ್ಲದೆ ಕೋಟ್ಯಾನುಕೋಟಿ ಜೀವಜಂತುಗಳಿಂದ ತುಂಬಿದ ಧರೆ ನಿಶ್ಯಬ್ದವಾಗಿ ಮಲಗಿ ತಾರೆಗಳನ್ನು ಕನಸಿನಲ್ಲಿ ಚುಂಬಿಸುವಂಥ ಮನೋಭಾವನೆಯುಂಟಾಗುವುದು. ಪುಷ್ಪಗಳು, ತಂಬೆಲರು, ಕಡಲು, ಮಾಮರದ ಕೆಂದಳಿರು, ಕೋಗಿಲೆಯ ಕೂಗು, ನೀಲಾಕಾಶದಲ್ಲಿ ಕಾಣುವ ಬೆಳ್ಳನೆ ಮೋಡ, ಗಿರಿಶಿಖರಗಳ ಸಾಲು, ಸೂರ್ಯೋದಯ, ಬೆಳದಿಂಗಳು, ಬದಲಾಗುವ ಋತುಗಳು ಮೊದಲಾದವು ಪ್ರಕೃತಿಯ ನಾನಾರೂಪಗಳಲ್ಲಿ ಕಾಣುತ್ತವೆ. ಆದ್ದರಿಂದ ನಿಸರ್ಗದೇವಿ ಸೌಂದರ್ಯಧಾರಿಣಿಯಾಗಿ ಚೇತನಶಕ್ತಿಯಾಗಿ ಕಾಣುವಳು. ತಾನು

ಅರ್ಥೈಸಲಾಗದ ಪ್ರಕೃತಿಸೌಂದರ್ಯ ಮನುಷ್ಯನಿಗೆ ಬಿಡಿಸಲಾಗದ ಒಗಟಾಗುತ್ತದೆ. ಮಳೆ, ಗಾಳಿ, ಸಿಡಿಲು, ಮಿಂಚು, ಪ್ರವಾಹ ಮೊದಲಾದವುಗಳ ಹಿಂದೆ ಯಾವುದೋ ಒಂದು ವಿಶ್ವಶಕ್ತಿ ಕೆಲಸಮಾಡುತ್ತದೆ ಎಂದು ಭಾವಿಸಿ ದೇವರೆಂದು ಕರೆಯಲಾಯಿತು.

ಪ್ರಕೃತಿಯ ಸ್ಫೂರ್ತಿಯಿಂದ ಮನುಷ್ಯನ ಮನಸ್ಸು ಸಂತೋಷಗೊಂಡು ನಿಸರ್ಗದ ಆಂತರ್ಯದಾಳಕ್ಕೆ ಇಳಿದಾಗ ಅಲ್ಲಿದ್ದ ಕವಿ ಹೃದಯ ಎಚ್ಚರಗೊಳ್ಳುತ್ತದೆ. ಪ್ರಕೃತಿಯ ನೆಲ, ಮುಗಿಲು, ಕಡಲು, ಗಿಡ, ಮರ, ಪ್ರಾಣಿ, ಪಕ್ಷಿ ಇತ್ಯಾದಿ ಎಲ್ಲಾ ರೂಪಗಳ ಹಿಂದೆ ಒಬ್ಬ ಸೃಷ್ಟಿಕರ್ತನಿದ್ದಾನೆ. ಆದ್ದರಿಂದ ಆತ ಸರ್ವವ್ಯಾಪಿ ಎಂದು ತಿಳಿದ. ನಮ್ಮ ಪ್ರಾಚೀನ ಮುನಿಗಳನ್ನು ಮೊದಲು ಆಕರ್ಷಿಸಿದ್ದು ಪ್ರಕೃತಿ ಸೌಂದರ್ಯ ಮತ್ತು ಅದರ ಅದೃಶ್ಯಶಕ್ತಿ. ಅತೀಂದ್ರಿಯ ಅನುಭವದ ಕಡೆಗೆ ಆತನನ್ನು ಸೆಳೆದಿದ್ದು ಸೂರ್ಯ, ಚಂದ್ರ, ನಕ್ಷತ್ರ, ಗಾಳಿ, ನೀರು, ಮಳೆ, ಮಿಂಚು ಮೊದಲಾದವುಗಳು. ಆದ್ದರಿಂದ ಇವುಗಳನ್ನು ಕೇವಲ ಜಡವಸ್ತುಗಳೆಂದು ನೋಡಲಿಲ್ಲ. ಹೀಗೆ ಮಾನವ ಮತ್ತು ಪ್ರಕೃತಿ ನಡುವಿನ ಸಂಬಂಧ ಅವಿನಾಭಾವವಾದದ್ದು. ಆದಿಕವಿ ವಾಲ್ಮೀಕಿಗೆ ರಾಮಾಯಣ ಮಹಾಕಾವ್ಯವನ್ನು ಬರೆಯಲು ಪ್ರೇರಣೆ ನೀಡಿದ್ದು, ಕಾಡಿನ ನಡುವೆ ನಡೆದ ಕ್ರೌಂಚಪಕ್ಷಿಯ ದುರಂತ ಘಟನೆ. ಹಾಗೆಯೇ ವ್ಯಾಸ ಕವಿಯ ಕಾವ್ಯರಚನೆಗೆ ಸ್ಫೂರ್ತಿ ನೀಡಿದ್ದು ಸಹ ಅರಣ್ಯದ ಪ್ರಶಾಂತ ವಾತಾವರಣ. ಪ್ರಕೃತಿ ಜಗತ್ತಿನ ಪೋಷಕ ಹಾಗು ರಕ್ಷಕಸ್ಥಾನದಲ್ಲಿದೆ. ಈ ಪ್ರಕೃತಿ ಸಮೃದ್ಧತೆಯ ಸಂಕೇತವೂ ಹೌದು, ಸೃಜನಶೀಲತೆಗೆ ಪ್ರೇರಕಶಕ್ತಿಯೂ ಹೌದು. ಪ್ರಕೃತಿ ಸೌಂದರ್ಯದ ಆಸ್ವಾದನೆಯಲ್ಲಿ ಮುಳುಗಿದ ಕವಿ ಮನದಲ್ಲಿ ಸ್ಫೂರ್ತಿಗೊಂಡು ಪ್ರಕೃತಿಯನ್ನು ಬಣ್ಣಿಸುತ್ತಾನೆ. ಕವಿಯ ಪ್ರಕೃತಿ ವರ್ಣನೆ ಅವನ ಪ್ರತಿಭೆಯ ಅಳತೆಗೋಲಾಗಿ ಅವನ ಸಂಸ್ಕಾರ, ಸಂಸ್ಕೃತಿಗೂ ಹಿಡಿದ ಕನ್ನಡಿಯಾಗಿದೆ. ಈ ವಿಚಾರವನ್ನು ಕುರಿತಂತೆ ಸಿ.ಪಿ.ಕೃಷ್ಣಕುಮಾರ್ ಅವರ ಅಭಿಪ್ರಾಯ ಹೀಗಿದೆ.

"ಮಾನವ ಹೃದಯದ ಆಳ, ಎತ್ತರ, ಬಿತ್ತರಗಳು, ರಾಗದ್ವೇಷಗಳು – ಇವುಗಳ ಚಿತ್ರಣದಲ್ಲಿ ಮಹಾಕವಿ ಪ್ರತಿಭೆಯ ಒಂದು ಮುಖವಿದ್ದರೆ ಅದರ ಮತ್ತೊಂದು ಮುಖ ಪ್ರಕೃತಿಯ ಚಿತ್ರಣದಲ್ಲಿರುತ್ತದೆ"[೧] ಎಂದು ನಿಸರ್ಗದ ವಿಶಿಷ್ಟತೆಯನ್ನು ತಿಳಿಸುತ್ತಾರೆ. ಒಟ್ಟಿನಲ್ಲಿ ಮಾನವ ಮತ್ತು ಪ್ರಕೃತಿಯ ಸಂಬಂಧ ಅಪೂರ್ವವೂ, ಚಿರನೂತನವಾಗಿದೆ. ಪ್ರಕೃತಿ ನಿತ್ಯಪರಿವರ್ತನಶೀಲವಾದದ್ದು, ಅಂತೆಯೇ ಸಾಹಿತ್ಯಲೋಕದಲ್ಲಿಯೂ ಪರಿವರ್ತನೆ ಎನ್ನುವುದು ನಿರಂತರವಾಗಿರುತ್ತದೆ.

---

೧. ಸಿ.ಪಿ.ಕೃಷ್ಣಕುಮಾರ್ : ಕನ್ನಡ ಚತುರ್ಮುಖ, ಪುಟ. ೬೬.

ಆಧುನಿಕ ಕನ್ನಡ ಕಾವ್ಯಸಂದರ್ಭದಲ್ಲಿ ಪ್ರಕೃತಿಯನ್ನು ಪೂರ್ಣಪ್ರಮಾಣದಲ್ಲಿ ಕಾವ್ಯವಸ್ತುವನ್ನಾಗಿ ಮಾಡಿಕೊಂಡು ಅದರ ಅನಂತಮುಖಗಳನ್ನು ಚಿತ್ರಿಸಿದ ಕವಿಯೇ ಕುವೆಂಪು. ಅವರು ಕನ್ನಡದಲ್ಲಿ ಪ್ರಕೃತಿ ಗೀತೆಗಳನ್ನು ಬರೆಯುವ ಮೊದಲು ಕನ್ನಡದಲ್ಲಿ ಪ್ರಕೃತಿ ವರ್ಣನೆ ಮಾಡುವ ಕಾವ್ಯಗಳು ಇರಲಿಲ್ಲವೆಂದಲ್ಲ, ಇದ್ದವು. ಆದರೆ ಹಳಗನ್ನಡ ನಡುಗನ್ನಡದಲ್ಲಿದ್ದ ಈ ವರ್ಣನೆಗಳು ಬಹುಮಟ್ಟಿಗೆ ಅಷ್ಟಾದಶ ವರ್ಣನೆಗಳ ಚೌಕಟ್ಟಿನಲ್ಲಿಯೂ ಕವಿ ಸಮಯಗಳ ಪರಿಭಾಷೆಯಲ್ಲಿಯೂ ಇದ್ದವು. ಆದರೆ ರೊಮ್ಯಾಂಟಿಕ್ ಕಾವ್ಯದ ಪ್ರಭಾವದಿಂದ ಕನ್ನಡದಲ್ಲಿ ಪ್ರಕೃತಿ ಗೀತೆಗಳನ್ನು ಬರೆದ ಕುವೆಂಪು ಪ್ರಕೃತಿಯನ್ನು ನೋಡುವ ವಿಭಿನ್ನವಾದ ಹಾಗೂ ನವೀನವಾದ ದೃಷ್ಟಿಕೋನವನ್ನು ಒದಗಿಸಿಕೊಟ್ಟರು. ನವೋದಯ ಯುಗದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಕುವೆಂಪು ಅವರು ಪ್ರಧಾನವಾಗಿ ಪ್ರಕೃತಿ ಕವಿ. 'ಕಾಡಿನ ಕೊಳಲಿದು, ಕಾಡ ಕವಿಯು ನಾ ನಾಡಿನ ಜನರೊಲಿದಾಲಿಪುದು' ಎಂದು ತಮ್ಮನ್ನು ತಾವೇ ಗುರ್ತಿಸಿಕೊಂಡಿದ್ದಾರೆ.

"ಕುವೆಂಪು ಅವರನ್ನು 'ಪ್ರಕೃತಿಕವಿ' ಎಂದು ಕರೆಯುವುದು ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ ನಾವು ರೂಢಿಸಿಕೊಂಡ ಪರಿಕಲ್ಪನೆ. ವರ್ಡ್ಸ್‌ವರ್ತ್‌ನನ್ನು 'Nature poet' ಎಂದು ಗುರ್ತಿಸಿದಕ್ಕೆ ಸಂವಾದಿಯೆಂಬಂತೆ ನಾವು ಕುವೆಂಪು ಅವರನ್ನು 'ಪ್ರಕೃತಿಕವಿ' ಎಂದು ಕರೆದವು"[೧] ಎಂದು ನರಹಳ್ಳಿ ಬಾಲಸುಬ್ರಹ್ಮಣ್ಯ ಅಭಿಪ್ರಾಯ–ಪಡುತ್ತಾರೆ. ಕುವೆಂಪು ಹುಟ್ಟಿದ್ದು ನಿಸರ್ಗದ ಗರ್ಭದಲ್ಲಿ ನಿಸರ್ಗದ ಮಡಿಲೇ ನನ್ನ ಶೈಶವದ ತೊಟ್ಟಿಲು ಎಂದು ಸ್ವತಃ ಹೇಳಿದ್ದಾರೆ. ಪ್ರಕೃತಿಮಾತೆಯೇ ಹೆತ್ತು ಹೊತ್ತು ಮುದ್ದಿಸಿ, ಅವಳ ಜೀವದ ಜೀವವಾಗಿ ಬೆಳೆಸಿದ್ದಾಳೆ. ಆದ್ದರಿಂದ ಕುವೆಂಪು ಪ್ರಕೃತಿಕವಿ. ಕುವೆಂಪು ಪ್ರಕೃತಿಯ ಸಹಜವಾದ ವಾತಾವರಣದಲ್ಲಿ ಹುಟ್ಟಿ ಬೆಳೆದವರು. ಬನ, ಗಿರಿ, ಹೊಳೆ, ಸುಗ್ಗಿಯ ಬನದ ಹೂವು, ಕಾಮನಬಿಲ್ಲು, ಹಸಿರು, ತಾರೆ, ಮಲೆನಾಡು, ಕವಿಶೈಲ, ತೊರೆ, ಹೊಲ, ತೋಟ ಈ ಎಲ್ಲವುಗಳಿಂದ ನಿಸರ್ಗದ ಆತ್ಮೀಯ ಸ್ಪರ್ಶವನ್ನು ಪಡೆದಿದ್ದಾರೆ. ಕವಿ ಸುಂದರವಾದ ಹೂವು, ಮುಂಗಾರಿನ ಮೋಡ, ಮಿಂಚುಹುಳು, ಹೀಗೆ ಸೃಷ್ಟಿಯ ಒಂದೊಂದು ವಸ್ತುವನ್ನು ತನ್ಮಯತೆಯಿಂದ ನೋಡಿ ಆರಾಧಿಸುತ್ತಾರೆ. ಅವರಿಗೆ ರವಿವದನವೆ ಶಿವಸದನವಾಗಿ ಕಾಣುತ್ತದೆ. ಕುವೆಂಪು ಅವರ ಪ್ರಕೃತಿಗೀತೆಗಳಿಗೆ ಮಲೆನಾಡಿನ ಪ್ರಾಕೃತಿಕ ಸೌಂದರ್ಯದ ಜತೆಗೆ ಆಂಗ್ಲಕವಿಯಾದ ವರ್ಡ್ಸ್‌ವರ್ತ್‌ನ ಕಾವ್ಯವೂ ತಕ್ಕಮಟ್ಟಿಗೆ ಪ್ರೇರಣೆನೀಡಿದೆ.

---

೧. ನರಹಳ್ಳಿ ಬಾಲಸುಬ್ರಹ್ಮಣ್ಯ : ಕುವೆಂಪು ಕಾವ್ಯ, ಅಂಕಿತ ಪುಸ್ತಕ, ಪುಟ. ೯೧.

ನಿಸರ್ಗಕ್ಕೂ ತಮ್ಮ ಸಾಹಿತ್ಯಕ್ಕೂ ಇರುವ ಸಾವಯವ ಅಥವಾ ಹೊಕ್ಕುಳ ಬಳ್ಳಿಯ ಸಂಬಂಧವನ್ನು ಕುವೆಂಪು ಹೀಗೆ ವ್ಯಕ್ತಪಡಿಸಿದ್ದಾರೆ.

"ಸೃಷ್ಟಿಕರ್ತನ ಕಾವ್ಯ ನಿಸರ್ಗ. ನಿಸರ್ಗ ಮತ್ತು ಕುವೆಂಪು ಸಾಹಿತ್ಯ ಅಪ್ರತ್ಯೇಕ. ನಿಸರ್ಗದ ಜತೆಜತೆಗೆ ಕುವೆಂಪು ವ್ಯಕ್ತಿತ್ವ ಬೆಳೆದಿದೆ......... ಈಗ ಮೈಸೂರಿನಲ್ಲಿ ನನ್ನ ದೇಹವಿದ್ದರು ನನ್ನ ಆತ್ಮಮಾತ್ರ ಸದಾ ಮಲೆನಾಡಿನಲ್ಲಿಯೇ ನಿವಾಸಿಯಾಗಿರುತ್ತದೆ. ಕವಿಶೈಲದಲ್ಲಿ ಕುಳಿತು ಧ್ಯಾನವೆಸಗುತ್ತೇನೆ; ಸೂರ್ಯಾಸ್ತವನ್ನು ದರ್ಶಿಸುತ್ತೇನೆ; ನವಿಲುಕಲ್ಲಿನಲ್ಲಿ ಸೂರ್ಯೋದಯಕ್ಕಾಗಿ ಕಾದುಕುಳಿತಿರುತ್ತೇನೆ. ತುಂಗೆಯಲ್ಲಿ ಮೀಯುತ್ತೇನೆ, ನಮ್ಮ ಮನೆಯ ಉಪ್ಪರಿಗೆಯಿಂದ ಮೋಡಗಳ ದಿಬ್ಬಣವನ್ನು ನೋಡಿ ಪುಳಕಿತನಾಗುತ್ತೇನೆ; ಕಾಜಾಣ, ಕಾಮಳ್ಳಿ, ಮಡಿವಾಳಗಳ ಸಂಗದಲ್ಲಿ ಹಾರಾಡುತ್ತೇನೆ; ಸಿಬ್ಬಲುಗುಡ್ಡೆಯಲ್ಲಿ ವಿಹರಿಸುತ್ತೇನೆ. ನನ್ನ ಶರೀರದ ಕಣಕಣವೂ ನಿಸರ್ಗ ಸೌಂದರ್ಯದಲ್ಲಿ ಮಿಂದು ಪವಿತ್ರಗೊಳ್ಳುತ್ತದೆ. ಸಹ್ಯಾದ್ರಿಯ ಶಿಶುವಾಗಿ ಚಾಮುಂಡಿಯ ಸ್ತನ್ಯಪಾನ ಮಾಡಿದ ಪುಣ್ಯ ನನ್ನದು. ಆದ್ದರಿಂದ ನನ್ನ ಸಾಹಿತ್ಯವನ್ನು ನಿಸರ್ಗದಿಂದ ಬೇರ್ಪಡಿಸಲಾಗದು".[೧]

ಕವಿಯ ಮಾತುಗಳಿಂದ ತಿಳಿಯುವ ವಿಚಾರವೆಂದರೇ ಕುವೆಂಪುಗೆ ನಿಸರ್ಗವೇ ಉಸಿರು. ಅವರ ಕಾವ್ಯದ ಪ್ರಮುಖ ಧಾರೆಯೇ ಪ್ರಕೃತಿ ಎನ್ನುವ ಅಂಶ ತಿಳಿಯುತ್ತದೆ. ಕುವೆಂಪು ಬಯಲುಸೀಮೆಯಲ್ಲೆ ಬಹುಕಾಲ ವಾಸವಾಗಿದ್ದರೂ ಅವರ ಕವಿ ಚೇತನ ಮಲೆನಾಡನ್ನೆ ಸ್ಮರಿಸಿಕೊಳ್ಳುವುದನ್ನು ನೋಡಿದರೆ ನಿಸರ್ಗ ಅವರ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂಬುದು ತಿಳಿಯುತ್ತದೆ. ಕುವೆಂಪು ಅವರಲ್ಲಿ ವರ್ಣನ ಪ್ರಧಾನ ಕವನಗಳಿಂದ ಹಿಡಿದು ದರ್ಶನ ಪ್ರಧಾನವಾದ ಕವನಗಳವರೆಗೆ ನಿಸರ್ಗದೃಷ್ಟಿಯನ್ನು ಕಾಣಬಹುದು.

ಕುವೆಂಪು ಅವರು ಮಲೆನಾಡಿನ ಕವಿ. ಅಲ್ಲಿನ ಸಂಮೃದ್ಧವಾದ ಪ್ರಕೃತಿಯ ಪರಿಸರದಲ್ಲಿ ಅವರ ಬಾಲ್ಯ ಪ್ರಭಾವಿತವಾಗಿ ಪ್ರಕೃತಿಗೀತೆಗಳ ರಚನೆಗೆ ಸ್ಫೂರ್ತಿ ಪಡೆದುಕೊಂಡಿದೆ. ನಿಸರ್ಗದ ಚೆಲುವು ಅವರ ಕಾವ್ಯದಲ್ಲಿ ಸಂಪೂರ್ಣವಾಗಿ ಅನಾವರಣಗೊಂಡಿದೆ.

"ಕೇವಲ ಪ್ರಕೃತಿಯ ಚೆಲುವು ಮಾತ್ರವಲ್ಲ, ಅದನ್ನು ಸವಿದ ಕವಿಯೂ, ಕವಿಗಾದ ಸೌಂದರ್ಯಾನುಭವದ ಪರಿಯೂ ವಸ್ತು. ಇಲ್ಲಿ ಕಣ್ಣಿಗಾದ ಅನುಭವ, ಮನಸ್ಸಿಗಾದ ಅನುಭವ, ಅದನ್ನು ಬುದ್ಧಿ ವಿಭಜಿಸಿ ನೋಡಿದ ಅನುಭವ, ಕಡೆಗೆ

೧. ಹಂಪಿ ಕನ್ನಡ ವಿಶ್ವವಿದ್ಯಾಲಯ : ಕುವೆಂಪು ಸಮಗ್ರಗದ್ಯ, ಸಂಪುಟ ೨, ಪುಟ. ೯೦೮.

ಆತ್ಮಕ್ಕಾದ ಚೈತನ್ಯಾನುಭವ ಇವಿಷ್ಟೂ ಚಿತ್ರಿತವಾಗಿವೆ"[೧] ಎನ್ನುವ ಜಿ.ಎಸ್.ಶಿವರುದ್ರಪ್ಪ ಅವರ ಮಾತು ಕುವೆಂಪು ಅವರ ನಿಸರ್ಗ ಕವನಗಳಿಗೆ ಅನ್ವಯವಾಗುತ್ತದೆ.

ಕುವೆಂಪು ಅವರ ಕಾವ್ಯದಲ್ಲಿ ಪ್ರಕೃತಿ ಕುರಿತ ಕವನಗಳಿಗೆ ವಿಶಿಷ್ಟವಾದ ಸ್ಥಾನವಿದೆ. 'ಪಕ್ಷಿಕಾಶಿ', 'ಕೊಳಲು', 'ನವಿಲು', 'ಕಲಾಸುಂದರಿ', 'ಕೃತ್ತಿಕೆ', 'ಕದರಡಕೆ' ಸಂಕಲನಗಳು ಪ್ರಧಾನವಾಗಿ ಕವಿಯ ನಿಸರ್ಗ ಕವಿತೆಗಳಿಗೆ ಮೀಸಲಾಗಿವೆ. ಅಷ್ಟೆ ಅಲ್ಲದೆ ಅವರ ಆತ್ಮಕಥೆಯಾದ 'ನೆನಪಿನದೋಣಿಯಲ್ಲಿ' ಅವರ ನಿಸರ್ಗ ಆರಾಧನೆ ಮುಂದುವರಿದಿದೆ. ಕವಿ ನಿಸರ್ಗಕುರಿತು ಬರೆದ ಆರಂಭದ ಪದ್ಯಗಳು ಇಲ್ಲಿ ದೊರೆಯುತ್ತವೆ. ಪ್ರಕೃತಿ ಮತ್ತು ಮನುಷ್ಯನ ನಡುವೆ ಇರುವ ಸಂಬಂಧವನ್ನು ಕುರಿತು ಈ ಕೆಳಗನ ಕವಿತೆಗಳು ವಿವರಿಸುತ್ತವೆ. ನೆನಪಿನದೋಣಿಯಲ್ಲಿ ದೊರೆಯುವ ಕವಿಯ ನಿಸರ್ಗಗೀತೆಗಳು ಹೀಗಿವೆ:

ಮೂವು, ಬೆಳದಿಂಗಳ ರಾತ್ರಿ, ಮುಂಜಾನೆ, ಪುಷ್ಪಗೀತೆ, ಹಾಡುವ ಹಕ್ಕಿ, ದೀಪಾವಳಿಯ ಸಂಜೆ, ಚಿಣ್ಣಮುದ್ದಿನ ಹಕ್ಕಿ, ಯುಗಾದಿಯ ಹಾಡು, ತಾರಾಸೇತು, ಬೈಗುಗಗನ, ಹೂದೋಟ, ಮಡಿವಾಳ, ಹೊಲೆಯರೆಯ ಮೇಲೆ, ತಾರೆಗಳ ದಿಬ್ಬಣ, ಹೊಳೆ, ಉದಯಗೀತೆ, ಮಸಣ, ಪಾಳುಮನೆ, ಮುದ್ದು ಹೂಗಳೆ ಮೊದಲಾದ ಪದ್ಯಗಳನ್ನು ನೋಡಬಹುದು. ಹಾಗೆಯೇ ಕುವೆಂಪು ತನ್ನ ಮಲೆನಾಡಿಗೆ ಸಂಬಂಧಿಸಿದಂತೆ ಬರೆದ ಕವಿತೆಗಳಿವೆ; ಮಲೆನಾಡು, ಮಲೆನಾಡ ವೈಭವ, ಮಲೆನಾಡಿನಲ್ಲಿ ಮಳೆಬಿಟ್ಟ ಮೇಲೆ, ರಸಸಿದ್ಧಿ, ಕವಿಶೈಲದಲ್ಲಿ ಸಂಧ್ಯ, ಹಳ್ಳಿ, ಹಳ್ಳಿಯ ಸಂಜೆ, ಪಾಳುಮನೆ ಮೊದಲಾದ ಕವಿತೆಗಳನ್ನು ನೋಡಬಹುದು.

ಕುವೆಂಪು ಅವರ ಮಲೆನಾಡಿನ ಕವಿ. ಅವರ ಹುಟ್ಟು ಎಲ್ಲ ಮಲೆನಾಡಿಗರ ಹುಟ್ಟಿನಂತೆಯೇ ಆಯಿತು. ಆಧುನಿಕ ಸೌಕರ್ಯಗಳನ್ನು ಕಾಣದ ಮಲೆನಾಡ ಮೂಲೆಯಲ್ಲಿ ಹಳೆಪೈಕದ 'ಸೂಲಗಿತ್ತಿ' ಗಿಡ್ಡಿಯೊಬ್ಬಳಿಂದ ಮೊದಲ ಸಲ ಮುಟ್ಟಿಸಿಕೊಂಡ ಶಿಶು ಕುವೆಂಪು. ಪುಟ್ಟಪ್ಪನವರು ಕಾಡಿನಲ್ಲಿ ಹುಟ್ಟದೆ ಬಯಲುಸೀಮೆಯಲ್ಲಿ ಹುಟ್ಟಿದ್ದರೆ? ಹಾಗಾಗದಿದ್ದರೆ ಕಾಡು ಕಾಡಾಗಿಯೇ ಉಳಿಯುತ್ತಿತ್ತು. ಆದರೆ ದೈವಸಂಕಲ್ಪ ಅವರಿಗೆ ಕಾಡಿನಲ್ಲಿ ಜನ್ಮಕೊಟ್ಟಿತು. ಕಾಡಿನಲ್ಲಿ ಹುಟ್ಟಿದ ಅವರು ಅದನ್ನು ಅಮರವಾಗಿ ಮಾಡಿದರು. ಮಲೆನಾಡು ಅವರಿಗೆ ಬೆಟ್ಟ, ಗುಡ್ಡ, ಕಾಡು, ಮರ, ಗಿಡ, ಪಕ್ಷಿಗಳು ಒಂದು ದೈವಸೃಷ್ಟಿಯ ಭೂಭಾಗವಾಗಿರಲಿಲ್ಲ. ಅದು ಅವರಿಗೆ ಹೆತ್ತತಾಯಿಯ ಮನೆ ಹೇಗೋ ಹಾಗೆ ಪ್ರಕೃತಿ ತಾಯಿಯ ಮನೆಯೂ ಆಗಿತ್ತು. ಕುವೆಂಪುಗೆ ಕಾಡೆಂದರೆ ಕೇವಲ ಮರಗಿಡಗಳು ದಟ್ಟೈಸಿದ ತೋಪು ಅಲ್ಲ. ಅವರ

---

೧. ಜಿ.ಎಸ್.ಶಿವರುದ್ರಪ್ಪ : ಸೌಂದರ್ಯ ಸಮೀಕ್ಷೆ, ಪುಟ. ೩೫೩.

ಕಾಡಿನಲ್ಲಿ ಕಾಡನ್ನು ಪೋಷಿಸುವ ಮತ್ತು ಕಾಡಿನಿಂದ ಪೋಷಿತವಾಗುವ ಸಮಸ್ತ ಚರಾಚರವೆಲ್ಲ ಸೇರುತ್ತವೆ. ಸಹ್ಯಾದ್ರಿಯ ಶ್ರೇಣಿ, ಗಿರಿಕಂದರಗಳು, ನದಿಹೊಳೆಗಳು, ಗದ್ದೆತೋಟಗಳು, ಹಕ್ಕಿಪಕ್ಷಿಗಳು, ಪ್ರಾಣಿಸಂಕುಲಗಳು, ಮೀನುಮಿಡತೆಗಳು, 'ಕೋವಿ-ಬೇಟೆಗಳು, ಹಾವುಗೀವುಗಳು, ಹಗಲುರಾತ್ರಿಗಳು, ಕೋಳಿ ಕೊಕ್ಕರೆಗಳು, ಮುಗಿಲು ಮೋಡಗಳು, ಮಳೆ – ಹೀಗೆ ಪ್ರಕೃತಿಯ ಸಮಸ್ತವೆಲ್ಲವೂ ಕುವೆಂಪು ಅವರ ಪ್ರಕೃತಿಗೀತೆಗಳಲ್ಲಿ ಸೇರಿಕೊಂಡಿವೆ. ಕನ್ನಡದಲ್ಲಿ ಕುವೆಂಪು ಅವರಂತೆ ಕಾಡನ್ನು ಕಂಡ, ಅದನ್ನು ದರ್ಶಿಸಿದ ಅದರ ಕಾಣ್ಕೆಗಳನ್ನು ಕಾಣಿಕೆಗಳಾಗಿ ಅರ್ಪಿಸಿದ ಕವಿ ಮತ್ತೆ ಯಾರಿರುವರು? ವರ್ಡ್ಸ್‌ವರ್ತ್ 'ಪ್ರಕೃತಿಯ ಕವಿ' ಎಂದು ಹೇಳುತ್ತಾರೆ. ಅವರು ಪ್ರಕೃತಿಯ ಕವಿ ನಿಜ. ಆದರೆ ವರ್ಡ್ಸ್‌ವರ್ತ್‌ನಂತೆಯೇ ಪ್ರಕೃತಿಯಿಂದ ಉನ್ಮಾದವನ್ನು ಪಡೆದಿರುವ, ಪ್ರಕೃತಿಗಾಗಿ ಹುಚ್ಚಾಗಿರುವ ಅದರ ಆಸ್ವಾದನೆ ಹಾಗೂ ಆರಾಧನೆ-ಗಳೆರಡರಲ್ಲಿಯೂ ಅವರನ್ನು ಬಿಟ್ಟು ಮೀರಿ ಮುಂದುವರಿದಿರುವ ಕುವೆಂಪು ವಿಶ್ವಸಾಹಿತ್ಯದಲ್ಲಿಯೇ ಅದ್ವಿತೀಯರಾಗಿದ್ದಾರೆಂದು ಹೇಳಬಹುದು.

ಮಲೆನಾಡು ತನ್ನ ಅಸಂಖ್ಯಾತವಾದ ಲಲಿತ ರುದ್ರದೃಶ್ಯಗಳ ವರ್ಣನೆಗಾಗಿ ಇಂತಹ ಕವಿಯೊಬ್ಬನನ್ನು ತಾನಾಗಿಯೇ ಸೃಷ್ಟಿಸಿಕೊಂಡಿದೆಯೋ ಎನಿಸುತ್ತದೆ. ಶ್ರೀ ಕುವೆಂಪುರವರ ಪ್ರಕೃತಿ ಕವನಗಳನ್ನು ಪರಿಶೀಲಿಸಿದರೆ ಮಲೆನಾಡು ಇವರ ಮೂಲಕ ತನ್ನ ವಾಣಿಯನ್ನು ಹೊಮ್ಮಿಸಿದೆ ಎಂಬ ಭಾವನೆ ದೃಢವಾಗುತ್ತದೆ. ಇಂತಹ ಪ್ರಬಲವಾದ ವ್ಯಕ್ತಿತ್ವವಿರುವ ಕವಿಯೂ ಆ ರುದ್ರ ಮನೋಹರ ದೃಶ್ಯಗಳ ವರ್ಣನೆಯಲ್ಲಿ ತಮ್ಮನ್ನು ತಾವು ಕರಗಿಸಿಕೊಳ್ಳುತ್ತಾರೆ. ಈ ಕವಿಯನ್ನು ಸೃಷ್ಟಿಸಿ ಅದರ ಮೂಲಕ ತಾನು ಹಾಡಿ ಲೋಕದ ಗಮನ ಗೌರವಗಳನ್ನು ಮಲೆನಾಡು ಸೆಳೆದುಕೊಂಡಿದೆ. ಮಧು ವಸಂತಗಳು ಸೂರ್ಯೋದಯ ಸೂರ್ಯಾಸ್ತಗಳ, ಗಿರಿವನಗಳ ವಿವಿಧ ರೀತಿಯ ವರ್ಣನೆಗಳು ನೂತನವಾಗಿ, ರಮ್ಯವಾಗಿ ಇವರ ಕವನಗಳಲ್ಲಿ ಮೈದೋರಿವೆ.

ಮಲೆನಾಡಿನ ಅಪ್ರತಿಷ್ಠಿತ ಸಾಮಾಜಿಕ ಪರಿಸರದಿಂದ ಬಂದ ಈ ಕವಿ ತಮ್ಮ ಬಾಲ್ಯ ಹಾಗೂ ಹರೆಯದ ಬದುಕನ್ನು ತುಂಬಿಕೊಂಡದ್ದು ದಟ್ಟವಾದ ಮಲೆನಾಡಿನ ಕಾಡಿನ ಅನುಭವಗಳಿಂದ. ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದ ಕವಿ, ಕಾಲೇಜು ಶಿಕ್ಷಣ ಮುಗಿಸಿ ಅಧ್ಯಾಪಕ ವೃತ್ತಿಯನ್ನು ಕೈಕೊಂಡು ನೆಲೆನಿಂತದ್ದು ಬಯಲು ನಾಡಾದ ಮೈಸೂರಿನ ನಾಗರಿಕ ಪರಿಸರದಲ್ಲಿ. ಮುಂದಿನ ಅವರ ಬಹುಮಟ್ಟಿನ ಬರಹವೆಲ್ಲಾ ನಡೆದದ್ದು ಈ ನಗರ ಪರಿಸರದಲ್ಲೆ. ಆದರೂ ಅವರು ಬರೆದದ್ದು ಮುಖ್ಯವಾಗಿ ಅವರು ತಮ್ಮ ಮಲೆನಾಡಿನ ದಟ್ಟವಾದ ಅನುಭವಗಳನ್ನೆ ಮತ್ತು ಅನುಭವಗಳಿಂದಲೇ ದೈಹಿಕವಾಗಿ ಅವರು ಮೈಸೂರಿನ ಪರಿಸರದಲ್ಲಿದ್ದರೂ, ಅವರು ಮಾನಸಿಕವಾಗಿ ಬರೆದದ್ದು ಮಲೆನಾಡಿನ ನೆನಪುಗಳಲ್ಲಿ. ಸಾಮಾನ್ಯವಾಗಿ ಇವತ್ತು ನಾವು ಗಮನಕ್ಕೆ

ತೆಗೆದುಕೊಳ್ಳಬಹುದಾದ ಅನೇಕ ನಿಜವಾದ ಲೇಖಕರ ಬರವಣಿಗೆಯ ಒಂದು ಮುಖ್ಯ ಲಕ್ಷಣವೆಂದರೆ, ಅವರು ಬರೆಯುತ್ತಿರುವುದು, ತಮ್ಮ ಎಳೆಯಂದಿನ ದಟ್ಟವಾದ ಗ್ರಾಮೀಣ ಪರಿಸರದ ನೆನಪುಗಳಿಂದಲೇ........

ಹೀಗೆ ಮಲೆಯನಾಡಿನ ಪ್ರಕೃತಿಯೊಂದಿಗೆ ಕವಿಗಿದ್ದ ಭಾವನಾತ್ಮಕ ಸಂಬಂಧ ಅನನ್ಯವಾದದ್ದು. ಮಲೆಯನಾಡೆನಗೆ ತಾಯಿಮನೆ, ಕಾಡುದೇವರ ಬೀಡು, ಗಿರಿಯ-ಮುಡಿ ಶಿವನಗುಡಿ ಎಂಬ ಕವಿಯ ಸಾಲುಗಳು ಮಲೆನಾಡಿನ ವಿಶಿಷ್ಟತೆಯನ್ನು ತಿಳಿಸುತ್ತವೆ. ಅವರೇ ತಮ್ಮ ಮತ್ತು ಮಲೆನಾಡಿನ ಅವಿನಾಭಾವ ಸಂಬಂಧವನ್ನು ಹೀಗೆ ಹೇಳಿಕೊಂಡಿದ್ದಾರೆ.

"ನಾನು ಮಲೆನಾಡಿಗನು, ಮಲೆನಾಡಮ್ಮನ ಹೊಟ್ಟೆಯಲ್ಲಿ ಹುಟ್ಟಿ, ಮಡಿಲಲ್ಲಿ ಬೆಳೆದು, ತೊಡೆಯ ಮೇಲಿ ನಲಿದು, ಆ ತಾಯಿಯ ಮೊಲೆಹಾಲು ಕುಡಿದು ಬೆಳೆದುಬಂದವನು. ಮಲೆನಾಡೆಂದರೆ ನನಗೆ ಬಹಳ ಮಮತೆ. ಒಂದು ವಿಧವಾದ ಕುರುಡು ಮೋಹ ಎಂದರೂ ಎನ್ನಬಹುದು. ಮಲೆನಾಡು ಸೊಬಗಿನ ಬೀಡು, ಸಿಡಿಲುಮಿಂಚುಗಳ ನಾಡು, ಸಾಲುಸಾಲಾಗಿ ಎದ್ದಿರುವ ಬೆಟ್ಟಗಳು, ಮಾಲೆಮಾಲೆಯಾಗಿ ಬೆಳೆದಿರುವ ಕಾಡುಗಳು, ಅಲ್ಲಲ್ಲಿ ಬನಬೆಟ್ಟಗಳ ನಡುವೆ ಹರಿವ ಹೊಳೆತೊರೆಗಳು, ಕಾಡಿನ ಮೇಲೆ ಮಲಗುವ ಬೆಳ್ದಿಂಗಳು, ವಿಧವಿಧವಾದ ಇಂಚರಗೈವ ಸಾವಿರಾರು ಬಣ್ಣದ ಹಕ್ಕಿಗಳು, ಅನವರತ ವನ ಶ್ರೇಣಿಗಳಿಂದ ಆವೃತವಾದ ಧೀರಸಹ್ಯಾದ್ರಿ ಪರ್ವತಗಳ ಕಂದರ ಮಾರ್ಗಗಳಲ್ಲಿ ಮಂಜುಳನಾದದಿಂದ ಪ್ರವಹಿಸುವ ತುಂಗಭದ್ರೆ, ಶರಾವತಿಯರು, ಶೃಂಗೇರಿ ಮೊದಲಾದ ಪುರಾತನ ಕ್ಷೇತ್ರಗಳು, ಗೇರುಸೊಪ್ಪೆ ಮೊದಲಾದ ದರ್ಶನೀಯ ಪ್ರಕೃತಿ ಸೌಂದರ್ಯ ಸ್ಥಾನಗಳು, ಇವೆಲ್ಲವುಗಳಿಂದ ಮೋಹಿತನಾದ ನನಗೆ ಮಲೆನಾಡೆಂದರೆ ಬಹಳ ಮಮತೆ"[೧] ಎಂದಿದ್ದಾರೆ.

ಕವಿಯ ಮೇಲಿನ ಮಾತುಗಳನ್ನು ನೋಡಿದಾಗ ಮಲೆನಾಡು ಕವಿಗೆ ಒಂದು ವ್ಯಕ್ತಿತ್ವ ನೀಡಿದೆ. ಅಲ್ಲದೆ ಕವಿಗೆ ಮಲೆನಾಡೆ ಸರ್ವಸ್ವವಾಗಿದೆ ಎಂಬ ವಿಚಾರ ತಿಳಿಯುತ್ತದೆ. ಕುವೆಂಪು ಆತ್ಮಕಥನದಲ್ಲಿ ಮಲೆನಾಡಿಗೆ ಸಂಬಂಧಿಸಿದಂತೆ ಕೆಲವು ಕವಿತೆಗಳನ್ನು ರಚಿಸಿದ್ದಾರೆ. ಮಲೆನಾಡು, ಮಲೆನಾಡ, ವೈಭವ, ಕವಿಶೈಲದಲ್ಲಿ ಸಂಧ್ಯೆ ಮೊದಲಾದವು.

ಕುವೆಂಪು ಮಲೆನಾಡಿನ ಸೌಂದರ್ಯವನ್ನು 'ಮಲೆನಾಡು' ಕವಿತೆಯಲ್ಲಿ ಹೀಗೆ ವರ್ಣಿಸಿದ್ದಾರೆ.

---

೧. ಹಂಪಿ ಕನ್ನಡ ವಿಶ್ವವಿದ್ಯಾಲಯ : ಕುವೆಂಪು ಸಮಗ್ರಗದ್ಯ, ಸಂಪುಟ ೨, ಪುಟ. ೯೦೪.

ಶ್ರೀವನಿತೆಗಿದು ಬೀಡು, ಸೊಬಗಿಗಿದು ಗೂಡು
ಇದು ನಮ್ಮ ರಮಣೀಯ ಮಲೆಯ ನಾಡು! (ಮಲೆನಾಡು)
ಲಾವಣ್ಯದಾರಾಮವಿದು ಸುಖದಧಾಮ,
ಜನಮನೋತ್ಪಲಕಿದುವೆ ಪೂರ್ಣಸೋಮ!

ಕವಿಗೆ ಮಲೆನಾಡು ಸೊಬಗಿನ ತಾಣ, ಸೃಷ್ಟಿ ಚೈತನ್ಯದ ನೆಲೆಯಾಗಿ ಕಾಣುತ್ತದೆ. ಕವಿ ತನ್ನ ಬಾಲ್ಯದ ದಿನಗಳನ್ನು ಮಲೆನಾಡಿನಲ್ಲಿ ಕಳೆದಿದ್ದಾರೆ. ಆ ಮಲೆನಾಡಿನ ಸಹಜ ಸೌಂದರ್ಯದಲ್ಲಿ ಕಂಡುಬರುವ ಪ್ರಾಣಿ, ಪಕ್ಷಿಗಳು, ಬನ, ತೊರೆ ಈ ಎಲ್ಲವೂ ಕವಿಗೆ ಪ್ರೇರಕಶಕ್ತಿಗಳಾಗಿ ಕಾಣುತ್ತವೆ. ಕುವೆಂಪು ತಮ್ಮ ಕಾವ್ಯದ ಉದ್ದಕ್ಕೂ ಮಲೆನಾಡಿನ ಸಂಸ್ಕೃತಿಯನ್ನು ವಿವರಿಸುತ್ತಾರೆ. ಮಲೆನಾಡು ಎಂಬುದು ಪ್ರಕೃತಿಮಾತೆಗೆ ಬೀಡಾಗಿದೆ. ಅಲ್ಲದೆ ಸೌಂದರ್ಯದ ಗೂಡಾಗಿದೆ ಎಂದು ಹೇಳುತ್ತಾರೆ. ಕವಿ ಮಲೆನಾಡು ಸುಖದ ಧಾಮ, ಪೂರ್ಣಸೊಮ ಎಂದು ಗೌರವಪೂರ್ವಕವಾಗಿ ಸ್ಮರಿಸಿಕೊಳ್ಳುತ್ತಾರೆ. ಕವಿಗೆ ಮಲೆನಾಡು ಸೌಂದರ್ಯದ ಪೂಜಾರಂಗವಾಗಿ ಕಾಣುತ್ತದೆ.

ಆನಂದದ ನಿವಾಸ, ಪುಣ್ಯಕಾವಾಸ
ಋಷಿಗಳ ತಪೋವನಂ, ರಮ್ಯದೇಶ!
ಎಲ್ಲಿನೋಡಲು ಮನವ ಮೋಹಿಸುವ ವನವ
ಸಮತತೆಯ ತುಂಬಿಹುದು ಕರೆದು ಜನವ!

ಕುವೆಂಪು ಇಡೀ ಕವನದ ಉದ್ದಕ್ಕೂ ಮಲೆನಾಡ ಪ್ರಕೃತಿಯ ರಮಣೀಯತೆಯನ್ನು ವರ್ಣಿಸುತ್ತಾರೆ. ಕವಿಗೆ ಒಂದು ಸೌಂದರ್ಯಧಾಮವಾಗಿ ಕಾಣುವುದರ ಜೊತೆಗೆ, ಮಲೆನಾಡಲ್ಲಿ ಸುಗಂಧದತೆಯ ವಾತಾವರಣವಿದೆ ಎಂದು ಹೇಳುತ್ತಾರೆ. 'ಹಸುರಾದುದು ಕವಿಯಾತ್ಮಂ' ಎನ್ನುವಂತೆ ಕವಿಯ ಮನಸ್ಸಿನಲ್ಲಿ ಮಲೆನಾಡು ತುಂಬಿಕೊಳ್ಳುತ್ತದೆ. ಕವಿ ಮಲೆನಾಡಿನ ಜನಜೀವನ, ರೀತಿನೀತಿ ಎಲ್ಲವನ್ನು ಕಾವ್ಯದಲ್ಲಿ ಚಿತ್ರಿಸುತ್ತಾರೆ. 'ಆನಂದದ ನಿವಾಸ, ಪುಣ್ಯಕಾವಾಸ' ಎಂಬ ಕವಿಯ ಮಾತಿನ ಮೇಲೆ ಮಹಾಪುರುಷರ ಪ್ರಭಾವವಿದೆ ಎಂದು ಗುರುತಿಸಬಹುದು. ಆದ್ದರಿಂದ ಮಲೆನಾಡು ಋಷಿಗಳ ತಪೋವನವಾಗಿದೆ. ಅಂದರೆ ಕವಿ ತನ್ನ ವಿಭೂತಿಪುರುಷರ ಪಾತ್ರ ಪ್ರಭಾವ ಎಲ್ಲವನ್ನು ಪ್ರಕೃತಿಯಲ್ಲಿ ಲೀನಗೊಳಿಸಿಕೊಳ್ಳುತ್ತಾರೆ. ಕವಿಗೆ ಮಲೆನಾಡು ಸಮೃದ್ಧವಾದ ಜೀವರಾಶಿಯ ತಾಣವಾಗಿದೆ. ಕುವೆಂಪು ಪ್ರಕೃತಿಯನ್ನು ಎಷ್ಟರಮಟ್ಟಿಗೆ ಪೂಜಿಸಿದರು ಎಂಬುದು ಈ ಕವಿತೆಯಿಂದ ತಿಳಿಯುತ್ತದೆ. ಮಲೆನಾಡು ಕವಿ ಮನಸ್ಸನ್ನು ತುಂಬುವ ಆಶ್ರಯ ತಾಣವಾಗಿದೆ. ಮಲೆನಾಡಿನ ಸುತ್ತಲೂ ತುಂಬಿರುವ ವನರಾಶಿ, ಹಾಗೂ ಪ್ರಾಣಿಸಂಕುಲ ಎಲ್ಲವನ್ನು ಕವಿ ವರ್ಣಿಸುತ್ತಾರೆ. ಕವಿಗೆ ಮಲೆನಾಡಿನ ಮೇಲೆ ಪ್ರೀತಿ

ಎಷ್ಟೆಂದರೇ ನಿನ್ನ ನೋಡದ ಹೃದಯಕಿಹುದೆ ಸುಖದುದಯ? ಎನ್ನುವ ಮಟ್ಟಿಗೆ ಕವಿ ಪ್ರಕೃತಿಯನ್ನು ವರ್ಣಿಸುತ್ತಾರೆ. ಮಲೆನಾಡು ಆನಂದವಾಗಿ, ಬ್ರಹ್ಮನಿಂದ ಸೃಷ್ಟಿಸಿಕೊಂಡು ಮಲೆಯ ನಾಡಾಗಿ ಕರ್ನಾಟಕಕ್ಕೆ ಇಳಿದುಬಂದಿದೆ ಎಂದು ವರ್ಣಿಸುತ್ತಾರೆ. ಕುವೆಂಪು ಅವರಂತಹ ಪ್ರತಿಭಾಸಂಪನ್ನ ಕವಿಮಾತ್ರ ತನ್ನ ಪ್ರತಿಭೆಯನ್ನು ಈ ರೀತಿ ವರ್ಣಿಸಬಲ್ಲವರು.

ಚಿಕ್ಕಂದಿನಿಂದ ಕವಿಮನವನ್ನು ಸೆರೆಹಿಡಿದ ಜಾಲವೆಂದರೆ ಮಲೆನಾಡಿನ ಮಳೆಗಾಲದ ದಿನಗಳ ಸ್ವಾಭಾವಿಕ ಸದ್ದುಗದ್ದಲಗಳ ಬೆರಗುಹುಟ್ಟಿಸುವ ಭೀಕರತೆ. ಮುಂಗಾರು ಮನೆಯ ಮೇಲೆ ಅಭಿಷೇಕ ಗೈಯ್ಯುತ್ತಿದ್ದ ದಿನಗಳನ್ನು ನೆನೆಯುತ್ತಾರೆ.

ಮೊದಲ ಮಿಂಚು ಹೊಳೆದ ಮನೆ
ಮೊದಲ ಗುಡುಗು ಕೇಳ್ದ ಮನೆ;
ಮೊದಲ ಮಳೆಯು ಕರೆದು ಕರೆದು,
ಹೆಂಚಮೇಲೆ ಸದ್ದು ಹರಿದು,
ಮಾತಿನಿಂದ ನೀರು ನುರಿದು
ಬೆರಗನ್ನಿತ್ತ ನನ್ನ ಮನೆ!

ಕವಿ ಮಲೆನಾಡಿನ ಸೌಂದರ್ಯವನ್ನು ವರ್ಣಿಸುತ್ತಾರೆ. ಅಲ್ಲದೆ ಮಲೆನಾಡಿನಲ್ಲಿ ಸದಾ ಬೀಳುತ್ತಿದ್ದ ಮಳೆಯ ಬಗ್ಗೆ ಕವಿ ತನ್ನ ಇಂಗಿತವನ್ನು ತಿಳಿಸುತ್ತಾರೆ. ಮಲೆನಾಡು ಜೀವಜಗತ್ತಿನ ತಂಗುದಾಣ. ಅಷ್ಟೆ ಅಲ್ಲ ಅದು ಬೆರಗನ್ನು ಸಹ ಉಂಟುಮಾಡಿದೆ ಎನ್ನುತ್ತಾರೆ. ಮಲೆನಾಡು ಮೋಹದ ಮಡಿಲಾಗಿ ಕಂಡಾಗ ಕವಿಯ ಮನ ಅರಳುತ್ತದೆ. ಅಲ್ಲಿಯ ಅಂಧಕಾರ, ಅಜ್ಞಾನ, ಅನ್ಯಾಯವನ್ನು ಕಂಡಾಗ ಕವಿಯ ಮನ ಕೆರಳುತ್ತದೆ. ಕವಿ ಎಳೆತನದಲ್ಲೆ ಮಲೆನಾಡಲ್ಲಿ ತಿರೆಯೊಡನೆ ತೊಯ್ದಿದ್ದಾರೆ, ಬಿದ್ದಿದ್ದಾರೆ, ಎದ್ದಿದ್ದಾರೆ. ಆದಿಕವಿ ಪಂಪ ತನ್ನ ಬಾಲ್ಯದ ದಿನಗಳನ್ನು ಬನವಾಸಿಯಲ್ಲಿ ಕಳೆದಂತೆ, ಕುವೆಂಪು ತಮ್ಮ ಎಳೆಯ ದಿನಗಳನ್ನು ಮಲೆನಾಡ ನಿಸರ್ಗದೊಡನೆ ಕಳೆದಿದ್ದಾರೆ. 'ಪಕ್ಷಿಕಾಶಿ' ಕುವೆಂಪು ಅವರ ಅತ್ಯುತ್ತಮ ಪ್ರಕೃತಿ ಗೀತೆಗಳ ಸಂಕಲನ. ಅದನ್ನು ಕುವೆಂಪು ಅವರ ಪ್ರಾತಿನಿಧಿಕವಾದ ನಿಸರ್ಗ ಭಾವಗೀತೆಗಳ ಸಂಗ್ರಹ ಎಂದು ಹೇಳಬಹುದು. ಈ ಸಂಗ್ರಹದಲ್ಲಿರುವ 'ಮಲೆನಾಡು', 'ಹೋಗುವೆನು ನಾ' ಎಂಬ ಪದ್ಯಗಳು ಮಲೆನಾಡಿನ ಸಕಲ ಜಗತ್ತನ್ನು ಹೃದಯಂಗಮವಾಗಿ ಪ್ರತಿಬಿಂಬಿಸುವ ಕವಿತೆಗಳು.

ಮಲೆನಾಡಿನ ಕಾಡನ್ನು ಕವಿ ಹೀಗೆ ವರ್ಣಿಸುತ್ತಾರೆ. "ಅತ್ತ ಕಾಡು, ಇತ್ತ ಕಾಡು, ಸುತ್ತಲೂ ಕಾಡು, ಮುತ್ತಲೂ ಕಾಡು, ಮಲೆಯ ನೆತ್ತಿಯಲ್ಲಿ ನಿಂತು ನೋಡಿದರೂ ದೂರದ ಕೆಳಗಿನ ಗದ್ದೆ, ತೋಟ, ಬಯಲು, ಹಳ್ಳಿಮನೆ ಯಾವುದೂ

ಕಾಣುತ್ತಿರಲಿಲ್ಲ. ಅಷ್ಟು ದಟ್ಟವಾಗಿತ್ತು. ಅರಣ್ಯ. ಇನ್ನು ಕಾಲದ ವಿಷಯ? ಸೂರ್ಯ ಅಲ್ಲಲ್ಲಿ ಮರದ ನೆತ್ತಿಗಳ ಸಂಧಿಯಲ್ಲಿ ಇಣುಕಿದರೂ ಹೊತ್ತನ್ನು ಧೈರ್ಯವಾಗಿ ನಿರ್ಣಯಿಸುವಂತಿರಲಿಲ್ಲ"[೧] ಎನ್ನುತ್ತಾರೆ.

ಮಲೆನಾಡಿನ ಪ್ರಾಣಿಪಕ್ಷಿಗಳ ಪುಷ್ಪಗಳ ಒಂದೊಂದು ಪಟ್ಟಿಯನ್ನು ಕವಿ ನೀಡುತ್ತಾರೆ. ಮಲೆನಾಡಿನ ರಮ್ಯ-ಘೋರ ಸ್ವರೂಪವನ್ನು, ಸೌಂದರ್ಯದ ದ್ವಿಮುಖವನ್ನು ಮನಮುಟ್ಟುವಂತೆ ನಿರೂಪಿಸುತ್ತಾರೆ.

ಗಗನದೆತ್ತರಕೆತ್ತಿ ಕಬ್ಬಿಗನೆದೆಯನದ್ದಿವೆ ಗಿರಿಗಳು,
ಗಗನದಾಚೆಗೆ ಬೀಸಿ ಮನವನು ಬಹವು ಮೋಡದ ಕರಿಗಳು,
ತೇಲಿಮುಂದಕೆ ನುಗ್ಗಿ ತಿರುತಿರುಗುಟ್ಟಿ ಭೀಮಾಕಾರದಿ
ತೆರೆಗೆ ಬಾನಿಗೆ ನಡುವೆ ಬಂದ ಪವಡೆಗೆ ನೀಲದ ನೀರಧಿ!

ಹೀಗೆ ಬಗೆಬಗೆಯಾಗಿ ಕಾಡನ್ನು ಬಣ್ಣಿಸುವ ಈ ಕವನದಲ್ಲಿ ಕಾನನದ ನಡುವೆ ಮುತ್ತಿಡುವ ತುಂಗೆ, ದಡದಲ್ಲಿ ತಣ್ಣಗೆ ಬೀಸುವ ಬಿದಿರು ಮೆಳೆಗಳ ಹಸುರ ಚಾಮರ, ಬೆಣ್ಣೆ ಬೆಳ್ಳಿಗಳಂತೆ ಕಣ್ತಣಿಸುವ ಕಾಫಿಯಹೂವು, ಹೂಮಳೆ ಮುಂತಾದ ಮೋಹಕ ಚಿತ್ರಗಳು ಮೈದಾಳಿವೆ. ಇಲ್ಲಿ ತಮ್ಮ ಕರ್ತವ್ಯ ಹಾಗೂ ಕಾವ್ಯೋದ್ದೇಶ ಎರಡನ್ನೂ ಸೊಗಸಾಗಿ ಸ್ಪಷ್ಟವಾಗಿ ಸೂಚಿಸಿದ್ದಾರೆ.

ಮಲೆನಾಡು ತನ್ನ ಅಸಂಖ್ಯಾತವಾದ ಲಲಿತರುದ್ರ ದೃಶ್ಯಗಳ ವರ್ಣನೆಗಾಗಿ ಇಂಥ ಕವಿಯೊಬ್ಬನನ್ನು ತಾನಾಗಿಯೇ ಸೃಷ್ಟಿಸಿಕೊಂಡಿದೆಯೋ ಎನಿಸುತ್ತದೆ. ಶ್ರೀ ಕುವೆಂಪುರವರ ಪ್ರಕೃತಿ ಕವನಗಳನ್ನು ಪರಿಶೀಲಿಸಿದರೆ, ಮಲೆನಾಡು ಇವರ ಮೂಲಕ ತನ್ನವಾಣಿಯನ್ನು ಹೊಮ್ಮಿಸಿದೆ. ಇಂತಹ ಪ್ರಬಲವಾದ ವ್ಯಕ್ತಿತ್ವವಿರುವ ಕವಿ ಆ ರುದ್ರ-ಮನೋಹರ ದೃಶ್ಯಗಳ ವರ್ಣನೆಯಲ್ಲಿ ತಮ್ಮನ್ನು ತಾವು ಕರಗಿಸಿಕೊಳ್ಳುತ್ತಾರೆ. ಈ ಕವಿಯನ್ನು ಸೃಷ್ಟಿಸಿ ಅವರ ಮೂಲಕ ತಾನು ಹಾಡಿ ಲೋಕದ ಗಮನ ಗೌರವಗಳನ್ನು ಮಲೆನಾಡು ಸೆಳೆದುಕೊಂಡಿದೆ.

ಮಳೆಗಾಲದ ಮಲೆನಾಡನ್ನು 'ಮುಂಗಾರು' ಮತ್ತು 'ವರ್ಷಭೈರವ' ಕವನಗಳು ಪ್ರತಿನಿಧಿಸುತ್ತವೆ. ಮಲೆನಾಡಿನಲ್ಲಿ ಸುರಿಯುವ ಜಡಿಮಳೆಯನ್ನು ಕವಿ 'ವರ್ಷಭೈರವ'ನೆಂದು ಕರೆದಿದ್ದಾರೆ. ಮಳೆಯ ಅಬ್ಬರ, ಆಟೋಪಗಳು ಈ ಕವನದಲ್ಲಿ ಬಹಳ ಸಮರ್ಥವಾಗಿ ಮೂಡಿಬಂದಿದೆ. ಮಳೆಗಾಲದ ರಾತ್ರಿಯ ಚಿತ್ರ ಬಹಳ ಪರಿಣಾಮಕಾರಿಯಾಗಿ ಮೂಡಿದೆ. ಈ ಭಯಂಕರ ಮಳೆಯನ್ನು ಕಂಡು 'ಮಳೆ

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ೧೯೮೩, ಪುಟ. ೩೫೧-೩೫೨.

ಎಂಬುದು ಬರಿ ಸುಳ್ಳಿದು! ಮಳೆಯಲ್ಲಿದು! ಮಳೆಯಲ್ಲಿದು! ಪ್ರಲಯದ ಆವೇಶ!' ಎಂದು ಉದ್ಗರಿಸುತ್ತಾರೆ. ಹಾಗೆಯೇ 'ಮಲೆನಾಡಿನಲ್ಲಿ ಮಳೆಬಿಟ್ಟ ಮೇಲೆ' ಎಂಬ ಕವಿತೆ ಕೂಡ ವಿಶಿಷ್ಟವಾಗಿದೆ. ಕವಿ ಮಲೆನಾಡಿನ ಮಳೆಯನ್ನು ತನ್ನ ಕಾವ್ಯವಸ್ತುವಾಗಿ ಮಾಡಿಕೊಂಡು ಸುರಿಯುವ ಮಳೆಯನ್ನು ವರ್ಣಿಸುತ್ತಾರೆ. ಆದರೆ ಈ ಕವನದಲ್ಲಿ ಕವಿ ಮಳೆಯ ಅಭಾವ ಕುರಿತು ಚಿಂತಿಸುತ್ತಾರೆ.

ಕಾವಬಟ್ಟೆಯನುಟ್ಟ ಸಂನ್ಯಾಸಿಯಂತೆ
ಹಳೆಯ ಜಡತನವುಳಿದು ಹರುಷದಿಂದ (ಮಲೆನಾಡಿನಲ್ಲಿ ಮಳೆ ಬಿಟ್ಟ ಮೇಲೆ)
ಮೊರೆಮೊರೆದು ದೇವನಿಗೆ ಬಿನ್ನಹವ ಮಾಡಿ
ಹರಿಯುತಿವೆ ತುಂಬಿ ಕೆರೆತೊರೆಗಳೆಲ್ಲ
ಚಿಗುರಿಡಿದು ನಳನಳಿಪ ಬಯಲಿನಲ್ಲಿ
ಮೇಯುತಿವೆ ಸಂತಸದಿ ದನಕರುಗಳು;
ಮಲೆನಾಡಿನಲ್ಲಿ ಮಳೆ ಬಿಟ್ಟ ಮೇಲ
ತೋರುವುದು, ಕಬ್ಬಿಗಗೆ ಸೃಷ್ಟಿಲೀಲೆ!

ಕುವೆಂಪು ಮಳೆಯನ್ನು 'ವರ್ಷಭೈರವ'ಎಂದು ವರ್ಣಿಸುತ್ತಾರೆ. ಹಾಗೆಯೇ ಮಲೆನಾಡಿನಲ್ಲಿ ಮಳೆ ಇಲ್ಲದ ಸಂದರ್ಭಕ್ಕೆ 'ಸಂನ್ಯಾಸಿ' ಎಂದು ಹೇಳುತ್ತಾರೆ. ಕವಿ ಭೂಮಿ ಮಳೆಯಿಲ್ಲದ ಬರಡಾಗಿದೆ. ಆದ್ದರಿಂದ ದೇವರಿಗೆ ಬಿನ್ನಹ ಮಾಡಿದರೆ ಕೆರೆತೊರೆಗಳೆಲ್ಲ ತುಂಬಿಕೊಳ್ಳುತ್ತವೆ ಎಂದು ಕವಿ ಮಲೆನಾಡನ್ನು ಸ್ಮರಿಸುತ್ತಾರೆ. ದೇವರ ಕೃಪೆಯಿಂದ ಸಕಾಲಕ್ಕೆ ಮಳೆಯಾಗಿ ವನರಾಶಿಗಳೆಲ್ಲ ಚಿಗುರುತ್ತವೆ ಎಂದು ಹೇಳುತ್ತಾರೆ. ಮಳೆಯಾದ ಹಸಿರಾದ ಬಯಲಿನಲ್ಲಿ ದನಕರುಗಳು ಸಂತೋಷದಿಂದ ಮೆಯುತ್ತವೆ. ಮಲೆನಾಡಿನಲ್ಲಿ ಮಳೆ ಬೀಳದೆ ಇದ್ದಾಗ ಸೃಷ್ಟಿ ಲೀಲೆಯಿಂದ ಮಳೆಯುಂಟಾಗಿ ಮಲೆನಾಡು ಹಸುರಾಗುತ್ತದೆ ಎಂದು ಕವಿ ಹೇಳುತ್ತಾರೆ. ಕುವೆಂಪು ಮಲೆನಾಡನ್ನು ಕುರಿತು ಬರೆದಿರುವ ಕವಿತೆಗಳಲ್ಲಿ 'ಮಲೆನಾಡ ವೈಭವ' ಪದ್ಯ ವಿಶಿಷ್ಟವಾಗಿದೆ. ಈ ಕವಿತೆಯ ಓದಿನಿಂದ ಮಲೆನಾಡಿನ ಸೌಂದರ್ಯ ತಿಳಿಯುತ್ತದೆ. ಹಾಗೆಯೇ ಕವಿಯ ಕಾವ್ಯಸೃಷ್ಟಿಯ ವಿಶಿಷ್ಟತೆ ತಿಳಿಯುತ್ತದೆ.

ಅಹ ಎಷ್ಟು ರಮಣೀಯಮಾಗಿರ್ಪುದೀ ಧರಣಿ
ಬಹುವಿಧದಿ ನಲಿವ ಸೌಂದರ್ಯದಿಂದ? (ಮಲೆನಾಡ ವೈಭವ)
ಅಹ ಎಷ್ಟು ತೇಜದಿಂ ಬೆಳಗುತಿಹುದೀ ಗಗನ
ಮಹಿಮೆಯಂ ದೇಸಿಯಂ ತೋರ್ಪ ತೆರದಿ!

[illegible]

ಕುವೆಂಪು ಮಲೆನಾಡನ್ನು ಸಕಲ ಜೀವಜಗತ್ತುಗಳಿಂದ ತುಂಬಿರುವ ತಾಣ ಎನ್ನುತ್ತಾರೆ. ಕವಿಗೆ ಮಲೆನಾಡು ಒಂದು ವಿಸ್ಮಯ ಲೋಕ. ಅಲ್ಲಿರುವ ಪ್ರಕೃತಿ ಸೌಂದರ್ಯಕ್ಕೆ ಮನಸೋತು ಮುಗ್ಧತೆಯಿಂದ ಮಲೆನಾಡನ್ನು ನೋಡುತ್ತಾರೆ. ಕವಿ ಇಡೀ ಸೃಷ್ಟಿಯ ವರ್ಣನೆ ಮಾಡುತ್ತಾರೆ. ಮಲೆನಾಡು ಪ್ರಾಣಿಪಕ್ಷಿಗಳಿಗೆ ಹೇಗೆ ಆಶ್ರಯತಾಣವೋ ಹಾಗೆಯೇ ಋಷಿ ಮುನಿಗಳಿಗೂ ಧ್ಯಾನಸನ್ನಿಧಿಯಾಗಿದೆ ಎನ್ನುತ್ತಾರೆ. ಈ ಕವಿತೆಯಲ್ಲಿ ಕವಿ ಮಲೆನಾಡ ವೈಭವವನ್ನು ವರ್ಣಿಸಿದಂತೆ ಕಂಡರೂ ಇಡೀ ಪ್ರಕೃತಿಯ ಸೌಂದರ್ಯವನ್ನು ವರ್ಣಿಸುತ್ತಾರೆ. ಅಕಾಶ ತನ್ನ ತೇಜಸ್ಸಿನಿಂದ ಸುಂದರವಾಗಿ ಕಾಣುತ್ತದೆ ಎಂದು ವರ್ಣಿಸಿ, ಆ ಸೌಂದರ್ಯಕ್ಕೆ ಮನಸೋತೆ ಎನ್ನುತ್ತಾರೆ. ಗಗನದ ಎತ್ತರಕ್ಕೆ ಬೆಳೆದು ನಿಂತಿರುವ ಕಾಡಿನರಾಶಿ, ಗಿರಿಶಿಖರಗಳು ಇವು ಮಲೆನಾಡಿನ ವೈಭವವನ್ನು ಹೇಳುವ ದೇವರಸೃಷ್ಟಿಗಳು ಎನ್ನುತ್ತಾರೆ.

ಮಲೆನಾಡಿನ ಸುತ್ತಮುತ್ತಲೂ ಬೆಳೆದಿರುವ ದಟ್ಟವಾದ ಕಾಡು, ಎತ್ತರವಾದ ಬೆಟ್ಟಗಳು ಕಂಗೊಳಿಸುತ್ತವೆ. ಎತ್ತರವಾದ ಸಾಲುಸಾಲು ಮರಗಳು ಕವಿಯ ಕಣ್ಣಿಗೆ ವಿಶ್ವವನ್ನೆ ತನ್ನ ಚಿತ್ತದೊಳಗೆ ಅಡಗಿಸಿಕೊಂಡಿರುವಂತೆ ಕಾಣುತ್ತವೆ.

ಹೇ ಮಹಿಯೆ, ಸೌಂದರ್ಯದೇವತೆಯ ನಿಜಸಖಿಯೆ,
ಹೇಮಾಂಬುರಾಗದಿಂ ತಲೆಯ ಮೇಲ್ ಕಂಗೊಳಿಪ
ಹೇಮಂತನಂಬರವೆ, ನಸುನಗುತ ನಲವಿನಂ
ಸ್ವಾಮಿಯಂ ತೋರ್ಪನೀವ್ ಪಡೆದಿಹಿರೆ ಸ್ವಾಮಿಯಂ?

ಮಲೆನಾಡು ಸೌಂದರ್ಯದೇವತೆ ಕವಿಯ ಕಣ್ಣಿಗೆ ನಿಜಸಖಿಯಾಗಿ ಕಾಣುತ್ತಿದ್ದಾಳೆ. ತನ್ನ ತಲೆಯಮೇಲೆ ಗಂಗೆಯನ್ನು ಸ್ವೀಕರಿಸಿರುವ ಶಿವನು ಹೇಗೆ ಕಾಂತಿಯಿಂದ ಕಂಗೊಳಿಸುವನೋ ಹಾಗೆಯೇ ಮಲೆನಾಡು ತನ್ನ ಸೌಂದರ್ಯದಿಂದ ಕಂಗೊಳಿಸುತ್ತದೆ. ಕವಿ ಮಲೆನಾಡಿನ ಸೌಂದರ್ಯವನ್ನು ನೋಡಿ ತನ್ನ ನೋವುಗಳನ್ನು ಮರೆಯುತ್ತಾನೆ. ಮಲೆನಾಡು ಕವಿಗೆ ಹೆಣ್ಣಾಗಿ ಸೃಷ್ಟಿಯ ರಹಸ್ಯವಾಗಿ, ಜೀವಜಗತ್ತಿನ ಆಶ್ರಯತಾಣವಾಗಿ, ಅಧ್ಯಾತ್ಮದ ಗಿರಿಶಿಖರವಾಗಿ ಕಾಣುತ್ತದೆ.

ದೃಷ್ಟಿಯೋಡುವವರೆಗೆ ಮೆರೆಯುವೀ ರಮಣೀಯ
ಸೃಷ್ಟಿವೈಚಿತ್ರಮಂ ನೋಡಿ ನೋಡಿ
ಸೃಷ್ಟಿಕರ್ತನ ಪರಮಲೀಲೆಯಂ ನೆನೆನೆನೆದು
ಕಷ್ಟಗಳ ಮರೆತು ಕವಿ ಮೈಮರೆವನು.

ಕವಿ ಸೃಷ್ಟಿಕರ್ತನ ಸೃಷ್ಟಿಯಾದ ಮಲೆನಾಡನ್ನು ನೋಡಿ ತನ್ನ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಮಲೆನಾಡು ಸೌಂದರ್ಯಗಂಗೆಯಾಗಿ ಕಾಣಲು ಏನು ಕಾರಣ,

ಸೃಷ್ಟಿಕಾರ ಹೇಗೆ ಮಲೆನಾಡನ್ನು ಸೃಷ್ಟಿಸಿದ್ದಾನೆ ಎಂದು ತನ್ನ ಆಶ್ಚರ್ಯಚಕಿತ ಕಣ್ಣುಗಳಿಂದ ಪ್ರಕೃತಿಯ ಸೊಬಗನ್ನು ನೋಡುತ್ತಾರೆ. ಕವಿ ಮಲೆನಾಡಿನ ಪ್ರಾಕೃತಿಕ ವ್ಯಾಪಾರಗಳ ಜೊತೆ ಋತು ವೈವಿಧ್ಯದ ವರ್ಣನೆಯನ್ನು ಸಹ ಕೊಡುತ್ತಾರೆ.

ಇದು ಪರಮಸೌಂದರ್ಯ ದೇವತೆಗೆ ನಿಜಭವನ
ಮಿದು ವಿಶ್ವಶಿಲ್ಪಿಯಾಟದ ಭೂಮಿ; ಪರಮಕವಿ.
ಗಿದು ಸಕಲಮಂ ತೋರ್ಪ ಶಾಂತಿಯ ನಿಕೇತನಂ;
ಹೃದಯದಾಟದ ರಂಗಮಿದು ನಿಖಿಲ ಜೀವರಿಗೆ!

ಮಲೆನಾಡು ಸೃಷ್ಟಿಕರ್ತನ ಜೀವತಾಣ. ಕವಿ ಮಲೆನಾಡಿನ ಸೌಂದರ್ಯವನ್ನು ವರ್ಣಿಸುವುದನ್ನು ನೋಡಿದಾಗ ಕವಿ ತನ್ನ ಅನುಭವಗಳಿಗೆ ಮೂರ್ತ ಸ್ವರೂಪತೆಯನ್ನು ನೀಡಿದ್ದಾರೆಯೇ ಹೊರತು ಬುದ್ಧಿಪೂರ್ವಕವಾಗಿ ಆಲೋಚಿಸಿ ಬರೆದುವಲ್ಲ ಎಂದು ಹೇಳಬಹುದು. ವನ, ತೊರೆ, ಗಿರಿರಾಶಿ, ಕಾಡು ಎಲ್ಲವು ಕವಿಗೆ ಸೃಷ್ಟಿ ಚೈತನ್ಯದ ದಾರಿಯನ್ನು ತೋರುವ ವಸ್ತುಗಳು. ಕವಿ ಮಲೆನಾಡನ್ನು ಶಾಂತಿಯ ತವರು ಎಂದು ವರ್ಣಿಸುತ್ತಾರೆ. ಕವಿಯ ಇಡೀ ಬದುಕೆ ಮಲೆನಾಡು, ಮಲೆನಾಡಿನಿಂದಲೇ ಕವಿಯು ತನ್ನ ಕಾವ್ಯಶಕ್ತಿಯನ್ನು ರೂಪಿಸಿಕೊಂಡಿದ್ದಾರೆ ಎಂಬ ವಿಚಾರ ತಿಳಿಯುತ್ತದೆ. ಕವಿಗೆ ಮಲೆನಾಡು ಪ್ರಕೃತಿಯ ಎಲ್ಲ ದಿವ್ಯಸೌಂದರ್ಯವನ್ನು ತೋರಿಸುವ ವನಭೂಮಿ. ಕವಿ ತೊರೆ, ವನ, ಗಿರಿರಾಶಿ ಈ ಎಲ್ಲವುಗಳ ಜತೆ ತನ್ನ ಬಾಲ್ಯದ ಸಂತೋಷದ ದಿನಗಳನ್ನು ಕಳೆದಿದ್ದಾರೆ. ಈ ನಿಸರ್ಗ ತಾಣಗಳೊಂದಿಗೆ ಆಟವಾಡಿದ ದಿನಗಳನ್ನು ಕುರಿತು ಕವಿ ಸ್ಮರಿಸಿಕೊಳ್ಳುತ್ತಿದ್ದಾನೆ. ಕುವೆಂಪು ಕವಿಹೃದಯದ ಎಲ್ಲಾ ಅನುಭವಗಳನ್ನು ಪಡೆದಿರುವುದು ಪ್ರಕೃತಿಯಿಂದ ಅದರಲ್ಲೂ ಮಲೆನಾಡಿನಿಂದ ಪಡೆದಿರುವೆ ಎಂದು ಕೃತಜ್ಞತೆ ಸಲ್ಲಿಸುತ್ತಾರೆ. ಕವಿತೆಯ ಅನುಭವ, ಕಾವ್ಯದ ಸೃಷ್ಟಿ ಈ ಎಲ್ಲವೂ ಮಲೆನಾಡಿನ ವರಗಳು, ಅಲ್ಲದೆ ಕಾವ್ಯರಚನೆಯ ಅನುಭವ ಮಲೆನಾಡಿನಿಂದ ಬಂದಿದೆ ಹೊರತು ಬಯಲುಸೀಮೆಯಿಂದ ಅಲ್ಲ ಎನ್ನುತ್ತಾರೆ. ಕುವೆಂಪು ಕವಿಯಾಗಿ ರೂಪುಗೊಳ್ಳುವುದಕ್ಕೆ ಮಲೆನಾಡು ಕೂಡ ಕಾರಣವಾಗಿದೆ ಎಂಬುದು ಮೇಲಿನ ಮಾತುಗಳಿಂದ ತಿಳಿಯಬಹುದು.

ಮಲೆನಾಡಿನ ಪರಿಸರದಲ್ಲಿ ಕಂಡುಬರುವ ಅಡಕೆ ತೋಟಗಳನ್ನು ವರ್ಣಿಸುತ್ತಾರೆ. ಮಲೆನಾಡಿನ ಗಾಳಿಗೆ ಸಿಲುಕಿ ಎತ್ತರವಾದ ಅಡಕೆಮರಗಳು ತಲೆದೂಗಿ ಸಡಗರದಿಂದ ನಲಿಯುತ್ತಿದ್ದವು ಎಂದು ಮಲೆನಾಡಿನ ವೈಭವದ ಸೌಂದರ್ಯವನ್ನು ವರ್ಣಿಸುತ್ತಾರೆ. ಈ ಮಲೆನಾಡಿನ ಸೃಷ್ಟಿ ಸೌಂದರ್ಯವನ್ನು ನೋಡದ ಮಾನವನು ಜಡಜೀವಿ ಎಂದು ಕವಿ ಉಲ್ಲೇಖಿಸುತ್ತಾರೆ. ಪ್ರಕೃತಿ ಸೌಂದರ್ಯಕ್ಕೆ ಬೆರಗಾಗದೆ, ಅವುಗಳನ್ನು ಗಮನಿಸದೆ ಬದುಕುವವನು ಜಡಜೀವಿ ಎನ್ನುತ್ತಾರೆ. ಕುವೆಂಪು

ಮಲೆನಾಡಿನ ಪರಿಸರದಲ್ಲಿ ಕಂಡುಬರುವ ವನ್ಯಜೀವಿಗಳನ್ನು ಕುರಿತು ಉಲ್ಲಾಸಭರಿತರಾಗಿ ಹೇಳುವುದನ್ನು ಕಾಣಬಹುದು.

ಎಲೆ ವನಸ್ಥಳಗಳಿರ, ನಿಮ್ಮ ನಾಂ ಪ್ರೀತಿಸಿದೆ
ನೊಲುಮೆಯಿಂ ದೇವನಂ ನೋಡಲೆಂದು;
ಎಳೆತನದ ಲೀಲೆಯೊಳ್ ಸೊಬಗ ನಾ ಲಕ್ಷಿಸದೆ
ಸುಳಿದಾಡಿದೆನು ಮರೆತು ವೈಭವವನು

ಕವಿ ಮಲೆನಾಡಿನ ಮೂಲಕ ದೇವರನ್ನು ಕಾಣುವ ಹಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ. ಮಲೆನಾಡಿನ ಸೌಂದರ್ಯದಿಂದ ದೇವನ ಸಾಕ್ಷಾತ್ಕಾರವನ್ನು ತಿಳಿದೆ, ಅಲ್ಲಿರುವ ವನಸ್ಥಳಗಳನ್ನು ಕವಿ ಪ್ರೀತಿಸಿರುವುದು ದೇವರನ್ನು ಕಾಣಲು ನಡೆಸಿದ ಪ್ರಯತ್ನ ಎಂದು ಕವಿ ಹೇಳುತ್ತಾರೆ. ಬಾಲ್ಯದ ದಿನಗಳಲ್ಲಿ ನಿನ್ನ ಸೌಂದರ್ಯದ ಮಹಿಮೆಯನ್ನು ತಿಳಿಯದೆ ನಿರ್ಲಕ್ಷಿಸಿ ಸುಳಿದಾಡಿದೆನು. ಆದ್ದರಿಂದ ಕ್ಷಮೆ ಇರಲಿ ಎಂದು ಪ್ರಾರ್ಥಿಸುತ್ತಾರೆ. ಇಡೀ ಕವನದ ಉದ್ದಕ್ಕೂ ಕವಿ ಮಲೆನಾಡಿನ ಮೂಲಕ ದೈವತ್ವವನ್ನು ಕಾಣುತ್ತಾರೆ. ಕವಿ ಮಲೆನಾಡಿನ ಇಡೀ ವೈಭವವನ್ನು ವರ್ಣಿಸುವುದರ ಜೊತೆಗೆ ಅಲ್ಲಿನ ಸೃಷ್ಟಿ ವೈಚಿತ್ರದ ಬಗ್ಗೆಯೂ ತಿಳಿಸುತ್ತಾರೆ. ಮಲೆನಾಡಿನ ಚೆಲುವು ಇಡೀ ಕವನದ ಉದ್ದಕ್ಕೂ ವರ್ಣಿತವಾಗಿದೆ. ಹೀಗೆ ಮಲೆನಾಡಿನ ಕಾಡನ್ನು ಬಗೆಬಗೆಯಾಗಿ ವರ್ಣಿಸುತ್ತಾರೆ. ಕಾನನದ ನಡುವೆ ಮುತ್ತಿಡುವ ತುಂಗೆ, ದಡದಲ್ಲಿ ತಣ್ಣಗೆ ಬೀಸುವ ಬಿದಿರು ಮೆಳೆಗಳ ಹಸುರ ಚಾಮರ, ಬೆಳ್ಳಿಗಳಂತೆ ಕಣ್ಣನ್ನು ತಣಿಸುವ ಕಾಫಿಯ ಹೂವು, ಹೂಮಳೆ ಮೊದಲಾದ ಮೋಹಕ ಚಿತ್ರಗಳು ಕವನದಲ್ಲಿ ದೊರೆಯುತ್ತವೆ. ಈ ಕವನದಲ್ಲಿ ಕವಿ ತಮ್ಮ ಕರ್ತವ್ಯ ಹಾಗೂ ಕಾವ್ಯದ ಉದ್ದೇಶ ಎರಡನ್ನೂ ಸೊಗಸಾಗಿ ಸ್ಪಷ್ಟವಾಗಿ ಸೂಚಿಸಿದ್ದಾರೆ.

ಪಾಡಿರೈ ಪಿಕಗಳಿರ, ನಳನಳಿಪ ತಳಿರಿನೊಳ್
ಮೋಡಗಳ ನಲುಗಿಸುವ ಗಾಯನವನು;
ತೂಗಿರೈ, ಗಿರಿಗಳಿರ, ಹಸುರಾದ ಶಿರಗಳಂ
ಜೋಗುಳವ ಪಾಡುವಂ ಕವಿವರ್ಯನು!..........

ಈ ಕವನದಲ್ಲಿ ಮಲೆನಾಡಿನ ಪ್ರಕೃತಿ ಸೌಂದರ್ಯದ ದಟ್ಟ ಹಾಗೂ ವಿವರಣಾತ್ಮಕ ಚಿತ್ರಣವಿದೆ. ಇಲ್ಲಿ ಮಲೆನಾಡನ್ನು ಕುರಿತು ಕವಿಯ ಅದಮ್ಯ ಮೋಹವೂ ವ್ಯಕ್ತವಾಗಿದೆ. ಮಲೆನಾಡಿನ ಪ್ರಕೃತಿ ಸೌಂದರ್ಯ ಕುವೆಂಪು ಅವರ ಮೇಲೆ ಬೀರಿದ ಗಾಢವಾದ ಪ್ರಭಾವಕ್ಕೆ ಮತ್ತು ಅಷ್ಟೇ ತೀವ್ರವಾಗಿ ಅವರು ಅಭಿವ್ಯಕ್ತಿಗೊಳಿಸಿರುವುದಕ್ಕೆ 'ಮಲೆನಾಡ ವೈಭವ' ಕವನ ನಿದರ್ಶನ. ದಟ್ಟವಾಗಿ ಸುತ್ತಲೂ ಹಬ್ಬಿದ ಮಲೆನಾಡನ್ನು ತನ್ಮಯವಾಗಿ,

ತದೇಕಚಿತ್ತದಿಂದ ಪರಿಭಾವಿಸುವ ಕವಿಗೆ ಪ್ರಕೃತಿ ಸಮಸ್ತವೆಲ್ಲವೂ ಹಸುರಾಗಿ ತೋರುತದೆ. ಕುವೆಂಪು ಅವರ ಅನೇಕ ಕವನಗಳು ನಿರ್ದಿಷ್ಟ ಪ್ರದೇಶಗಳಲ್ಲಿನ ಪ್ರಕೃತಿ ವೀಕ್ಷಣೆಯ ಪರಿಣಾಮವಾಗಿ ಮೂಡಿಬಂದಿವೆ. ಆ ಕವನಗಳಲ್ಲಿ 'ಕವಿಶೈಲದಲ್ಲಿ ಸಂಧ್ಯೆ' ಕವಿತೆಯೂ ಒಂದು. 'ಕವಿಶೈಲ' ಕವಿಯ ಪ್ರಿಯತಾಣ. 'ಶಿವಕಾಣದ ಕವಿ ಕುರುಡನೊ; ಶಿವಕಾವ್ಯದ ಕಣ್ಣೊ' ಎಂದು ಸಾರಿರುವ ಕವಿ ಕುವೆಂಪುರವರು ಪ್ರಕೃತಿಯ ಜಡಚೇತನ ವಸ್ತುಗಳೆಲ್ಲದರಲ್ಲೂ ಶಿವತ್ವವನ್ನೂ ಕಾಣುತ್ತಾರೆ. ನಿಸರ್ಗದಲ್ಲಿ ಅಡಗಿರುವ ಪರಮಾತ್ಮನ ಸ್ವರೂಪವನ್ನು ತಮ್ಮ ಅನುಭಾವ ಕಣ್ಣಿನಿಂದ ನೋಡಿ, ಅನುಭವಿಸಿ ಅಲ್ಲಿಯ ಅನಂತತೆಯನ್ನು ಪ್ರತಿಮಾವಿಧಾನದಿಂದ ಚಿತ್ರಿಸುತ್ತಾರೆ. ಕವಿ ಅನುಭಾವಿಯಾದಲ್ಲಿ ಜಡತ್ವದಲ್ಲಿಯೂ ಹೇಗೆ ಚೇತನವನ್ನು ಗುರುತಿಸುತ್ತಾರೆ ಎಂಬುದಕ್ಕೆ ಈ ಕವಿತೆ ಉದಾಹರಣೆ. 'ಕವಿಶೈಲ' ಹೊಸ ರೂಪ ನೀಡುತ್ತದೆ. 'ಕವಿಶೈಲ'ದ ನಿಸರ್ಗ ಸಂಪತ್ತನ್ನು ಕವಿ ಕಂಡು ತಮ್ಮದನ್ನಾಗಿ ಮಾಡಿಕೊಂಡು ತನ್ನದೇ ರೀತಿಯಲ್ಲಿ ನೇಯ್ದು ಸೌಂದರ್ಯದ ಹೊದಿಕೆಯನ್ನು ಹೊದಿಸಿದ್ದಾರೆ. ಅದು ವಿಶ್ವಕವಿವರನ ಸೃಷ್ಟಿಯ ನೂರು ರೂಪುಗಳನ್ನೂ ತಾಳಿ ಕವಿ ಕುವೆಂಪುವಿಗೆ ಸ್ವರ್ಗವಾಗಿದೆ. ಮೈಸೂರಿನ ಮೈಸಿರಿ ಎಲ್ಲವನ್ನೂ ಉಂಡು ವನದೇವಿಯ ಸಿರಿಯ ಪೀಠದ ಮೂರ್ತಿಯಾದ ಕವಿಶೈಲವನ್ನು ನೋಡಿದ ಕವಿಗೆ ಅದರ ಮುಂದೆ ನೀಲಗಿರಿ, ಬ್ರಹ್ಮಗಿರಿ, ಗೇರುಸೊಪ್ಪೆ, ಆಗುಂಬೆ, ಶೃಂಗೇರಿಗಳೆಲ್ಲವೂ ಸಪ್ಪೆಯಾಗಿ ಕಾಣುತ್ತವೆ. ಈ ಕವನ ರಚನೆಯಾದ ಸಂದರ್ಭದ ಬಗ್ಗೆ ಕುವೆಂಪು ಈ ರೀತಿ ಹೇಳುತ್ತಾರೆ.

"ಬಿ.ಎಂ.ಶ್ರೀ. ಮೊದಲಾದವರು ಕವಿಶೈಲಕ್ಕೆ ಭೇಟಿಕೊಟ್ಟಾಗ 'ಶಿಲಾತಪಸ್ವಿ' ಒಂದು ಆಳೆತ್ತರಕ್ಕೆ ನಿಂತ ಮನುಷ್ಯಾಕಾರದ ಕಲ್ಲನ್ನೂ ತೋರಿಸಿದೆ. ಮತ್ತೆ ಮುಂದೆ ನಡೆದು 'ಕವಿಶೈಲ'ದ ಬಂಡೆಯ ಮೇಲೆ ಪಶ್ಚಿಮ ದಿಗಂತಮುಖಿಗಳಾಗಿ ಎಲ್ಲರೂ ಕುಳಿತೆವು. ನಾನು ಅನೇಕ ಕವನಗಳಲ್ಲಿ ಅದರಲ್ಲಿಯೂ ವಿಶೇಷವಾಗಿ 'ಕವಿಶೈಲದಲ್ಲಿ ಸಂಧ್ಯೆ' ಎಂಬ ಹೆಸರಿನ ಕವನದಲ್ಲಿ ವರ್ಣಿಸಿದೆ. ಕವಿವರ್ಣನೆ ಯಾವುದರ ಅಗತ್ಯವೂ ಇಲ್ಲದೆ ವಾಚ್ಯವಾಗಿಯೆ ಇದಿರಿಗೆ ಮೆರೆದಿತ್ತು"[೧] ಎಂದು ಕವಿ ತಿಳಿಸುತ್ತಾರೆ. ಈ ಕವನದಲ್ಲಿ ಕವಿಶೈಲದ ಶಿಖರ, ಅಲ್ಲಿಂದ ಕಾಣುವ ಗಿರಿಪಂಕ್ತಿ, ಮಳೆನಿಂತ ಮೇಲಿನ ಪರಿಸರ, ಕತ್ತಲು ಹಾಗೂ ಸಂಜೆಯನ್ನು ಕುರತು ವರ್ಣನೆಗಳಿವೆ.

"ದೃಷ್ಟಿ ದಿಗಂತದ ಮೇರೆಯ ದಾಟಿ
ಗಗನದ ಮೇಘವಿತಾನವ ಮೀಟಿ

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ೧೯೭೩, ಪುಟ. ೩೮೦.

ದೂರಕೆ ದೂರಕೆ ಸುದೂರ ದೂರಕೆ (ಕವಿಶೈಲದಲ್ಲಿ ಸಂಧ್ಯೆ)
ಹಬ್ಬಿದೆ ಪರ್ವತ ದಿಗಂತ ಶ್ರೈಲಿ, ಮೈಲಿ ಮೈಲಿ!

ಕವಿಶೈಲದಿಂದ ಕಾಣುವ ಪ್ರಕೃತಿ, ಕವಿಶೈಲದ ಶಿಖರ ಕವಿಗೆ ಅತ್ಯಂತ ಪ್ರಿಯವೂ, ಅನನ್ಯವೂ ಆದ ಸ್ಥಳವಾಗಿದೆ. ಕವಿಶೈಲದ ಹಸಿರಿನ ಸೊಬಗು ಎಲ್ಲದಕ್ಕೂ ಮಿಗಿಲು. ಏಕೆಂದರೆ ಅದು ಅವರಿಗೆ ತಾಯಿಯಂತೆ ಮಾತೃಸ್ವರೂಪ ಆಗಿದೆ. ಕವಿಶೈಲದಲ್ಲಿ ಸಂಜೆಯಾಗುತ್ತಿದ್ದಂತೆ ಕವಿ ಹೃದಯದಲ್ಲಿ ರಸಲೋಕವೊಂದು ಸೃಷ್ಟಿಯಾಗುತ್ತದೆ. ಹೀಗೆ ತಮ್ಮ ಕವನದಲ್ಲಿ ಮಲೆನಾಡನ್ನು ವರ್ಣಿಸುತ್ತಾರೆ. ಒಟ್ಟಾರೆಯಾಗಿ ಮಲೆನಾಡನ್ನು ಕುರಿತ ಕವನಗಳನ್ನು ನೋಡಿದಾಗ ಒಂದು ವಿಚಾರ ಸ್ಪಷ್ಟವಾಗಿ ತಿಳಿಯುತ್ತದೆ. ಮಲೆನಾಡು ಕವಿಗೆ ದೇವರ ದರ್ಶನದಂತೆ ಕಾಣುತ್ತದೆ. ಪ್ರಕೃತಿಯ ಮೂಲಕವೇ ದೇವರನ್ನು ಕಾಣುತ್ತಾರೆ. ದೇವರು ಪ್ರಕೃತಿಯ ರೂಪದಲ್ಲಿ ನೆಲೆಗೊಂಡಿದೆ ಎಂದು ಕವಿ ತಿಳಿಸುತ್ತಾರೆ.

'ರಸಸಿದ್ಧಿ' ಕವನವು ಕವಿಯ ನಿಸರ್ಗ ಪ್ರೀತಿಯನ್ನು ತೋರಿಸುತ್ತದೆ. ಕುವೆಂಪು ಅವರು ಪ್ರಕೃತಿಯನ್ನು ಕೇವಲ ಕಾವ್ಯವಸ್ತುವಾಗಿ ಪರಿಗಣಿಸದೆ ತನ್ನ ಬಾಳಿನ ಉಸಿರಾಗಿ ಪ್ರಕೃತಿಯನ್ನು ಕಾಣುತ್ತಾರೆ. ನಿಸರ್ಗ ಸೌಂದರ್ಯವನ್ನು ತನ್ನ ಅನುಭವವಾಗಿ ಮಾಡಿಕೊಂಡು ತನ್ನ ಕವಿಪ್ರತಿಭೆಯಿಂದ ಮರುಸೃಷ್ಟಿ ನೀಡುತ್ತಾರೆ. ಕವಿ ಪ್ರಕೃತಿಯಲ್ಲಿ ಭಗವಂತನ ಸ್ವರೂಪವನ್ನು ಕಾಣುತ್ತಾರೆ. ಅಂದರೇ ಪ್ರಕೃತಿಯ ಸೃಷ್ಟಿಯಲ್ಲಿ ದೇವರ ಪಾತ್ರ ದೊಡ್ಡದು; ಆದ್ದರಿಂದ ಪ್ರಕೃತಿಯ ಆರಾಧನೆಯೇ ತನಗೆ ಪರಮನಾರಾಧನೆ ಎಂದು ಹೇಳುತ್ತಾರೆ. ಕವಿ ಮಲೆನಾಡಿನ ಸುತ್ತಲ ಪ್ರಕೃತಿ ಪ್ರದೇಶಗಳನ್ನು ವರ್ಣಿಸುತ್ತಾರೆ. 'ಮಲೆನಾಡು' ಕವಿಚೈತನ್ಯದ ಮೂಲಸೆಲೆ. ಅದಕ್ಕಾಗಿ ಕುವೆಂಪು ಮಲೆನಾಡಿನ ಸಂದರ್ಭದ ಪ್ರಕೃತಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾರೆ.

ಗಗನವನು ನೋಡು ಮೈನೀಲಿಗಟ್ಟುವವರೆಗೆ
ಕಡಲನೀಕ್ಷಿಸು ವಾರಿರಾಶಿ ಧಮನಿಗಳಲ್ಲಿ (ರಸಸಿದ್ಧಿ)
ಧುಮ್ಮಿಕ್ಕಿ ಮೊರೆವನ್ನೆಗಂ, ಕಬ್ಬಿರುಳಿನಲ್ಲಿ
ನೀನೆ ಕತ್ತಲೆಯಾಗಿ, ನಿನ್ನೊಳಗೆ ಮಿರುಮಿರುಗೆ

ಕವಿ ಹಾಗೂ ಪ್ರಕೃತಿಯ ನಡುವಿನ ಸಂಬಂಧದ ಬಗ್ಗೆ ಈ ಕವಿತೆ ವಿವರಗಳನ್ನು ಒದಗಿಸುತ್ತದೆ. ಕವಿಯ ನಿಸರ್ಗ ಪ್ರೀತಿ ಕೇವಲ ಕಾವ್ಯವಸ್ತುವಾಗಿರಲಿಲ್ಲ, ಅವರ ಬಾಳಿನ ಚೈತನ್ಯದ ಶಕ್ತಿಯಾಗಿತ್ತು ಎಂದು ತಿಳಿಯುತ್ತದೆ. ಕುವೆಂಪು ಸೂರ್ಯೋದಯ, ಚಂದ್ರೋದಯ, ನವಿಲುಗುಡ್ಡ, ಕವಿಶೈಲ ಇವುಗಳನ್ನು ಸದಾ ನೋಡಿ ಕವಿಗೆ ಪ್ರಕೃತಿ ಸೌಂದರ್ಯ ರಹಸ್ಯವಾಗಿದೆ ಎಂದು ಅನಿಸುತ್ತದೆ. ನಿಸರ್ಗವನ್ನು ಮತ್ತೆ ಮತ್ತೆ ನೋಡಿದರೆ ಹೊಸದಾಗಿ ಕಾಣುತ್ತದೆ ಎಂಬ ಉದ್ದೇಶದಿಂದ ಪ್ರಕೃತಿಯ ಚೆಲುವನ್ನು ಮತ್ತೆ ಮತ್ತೆ ಕಾಣಲು ಪ್ರಯತ್ನಿಸುತ್ತಾರೆ. ಮಾನವನ ಬದುಕಿಗೆ ಪ್ರಕೃತಿ ಎಷ್ಟು ಅವಶ್ಯಕ

ಎಂಬುದನ್ನು ಈ ಕವಿತೆ ತಿಳಿಸುತ್ತದೆ. 'ಗಗನವನು ನೋಡು ಮೈನೀಲಿಗಟ್ಟುವವರೆಗೆ' ಎನ್ನುವ ಸಾಲು ಕವಿಯ ನಿಸರ್ಗದರ್ಶನಕ್ಕೆ ಉತ್ತಮ ನಿದರ್ಶನ. ಕುವೆಂಪು ತನ್ನ ಮಲೆನಾಡಿನ ಪರಿಸರವನ್ನು ಎಷ್ಟುಬಾರಿ ನೋಡಿದರು ಆ ಮಲೆನಾಡು ಕವಿಯ ಕಣ್ಣಿಗೆ ಹೊಸದಾಗಿ ಕಂಡು ಕವಿಯ ಕಲ್ಪನಾ ಪ್ರತಿಭೆಯಲ್ಲಿ ಮರುಸೃಷ್ಟಿ ಪಡೆದುಕೊಳ್ಳುತ್ತದೆ. ನಿಸರ್ಗದ ಬಗ್ಗೆ ಈ ಪ್ರಮಾಣದಲ್ಲಿ ಪ್ರೀತಿಯನ್ನು ತೋರಿದ ಕನ್ನಡ ಕವಿಗಳಲ್ಲಿ ಇವರೇ ಪ್ರಮುಖರು. ಕವಿಯ ಕಾವ್ಯ ನಿಸರ್ಗ ಸೌಂದರ್ಯದಿಂದಲೇ ತುಂಬಿಕೊಂಡಿದ್ದು, ನಿಸರ್ಗವೇ ಕವಿಗೆ ಆರಾಧನೆಯಾಗಿದೆ ಎನ್ನಬಹುದು. ಆಕಾಶವನ್ನು ದೃಷ್ಟಿಯಿಟ್ಟು ನೋಡಿದಾಗ ನಿಸರ್ಗದ ರಸಸಿದ್ಧಿ ತಿಳಿಯುತ್ತದೆ. ಗಗನವನ್ನು ನೇರದೃಷ್ಟಿಯಿಟ್ಟು ನೋಡಿದಾಗ ಕವಿಗೆ ರಸದರ್ಶನವಾಗುತ್ತದೆ. 'ಮೈನೀಲಿಗಟ್ಟುವವರೆಗೆ' ಎನ್ನುವ ಪದ ಕವಿ ನಿಸರ್ಗವನ್ನು ಕುರಿತು ಹೊಂದಿರುವ ಧೋರಣೆಯನ್ನು ತಿಳಿಸುತ್ತದೆ. ನಿಸರ್ಗ ಕಾಳಜಿ ಬಗ್ಗೆ ಕವಿಕೊಟ್ಟ ಎಚ್ಚರಿಕೆ ಎಂದೂ ಹೇಳಬಹುದು. ಕೇವಲ ನಿಸರ್ಗನೋಡಿ ಕವಿತೆ ರಚಿಸಿದ್ದರೆ ಕುವೆಂಪು ಅವರ ಬಾಯಲ್ಲಿ ಈ ಮಾತು ಬರುತ್ತಿರಲಿಲ್ಲ. ಬದಲಾಗಿ ನಿಸರ್ಗವನ್ನು ತನ್ನ ಒಳಗಣ್ಣಿಂದ ನೋಡಿದಾಗಲೇ ಅವರಿಗೆ ಪ್ರಕೃತಿಯ ರಹಸ್ಯಗಳೆಲ್ಲವೂ ತಿಳಿಯಿತು ಎಂದು ಹೇಳಬಹುದು. ಪ್ರಕೃತಿ ಕರೆಯಾಗಿ ಈ ಸಾಲು ಕಾಣುತ್ತದೆ.

ಮೈ ನೀಲಿಗಟ್ಟುವ ತನಕ ಗಗನವನ್ನು ನೋಡು ವಾರಿರಾಶಿಧಮನಿಗಳಲ್ಲಿ ಧುಮ್ಮಿಕ್ಕಿ ಮೊರೆಯುವವರೆಗೆ ಕಡಲನ್ನು ನೋಡು, ಕಟ್ಟಿರುಳಿನಲ್ಲಿ ನೀನೆ ಕತ್ತಲೆಯಾಗು, ಆಗ ನಿನ್ನಲ್ಲಿಯೇ ಕೋಟಿತಾರೆಗಳು ಮಿರುಗುವವರೆಗೂ ಧ್ಯಾನಮಾಡು ಎನ್ನುತ್ತಾರೆ. ಮೈಯ ರಕ್ತವೆಲ್ಲ ಇಂಚರದ ಹೊನಲಾಗುವವರೆಗೂ ಕೋಗಿಲೆ ಕೂಗುವುದನ್ನು ಕೇಳು, ಸರ್ವಸೃಷ್ಟಿಯನ್ನು ಒಂದೇ ಬಾರಿ ಆಸ್ವಾದಿಸು ಎನ್ನುತ್ತಾರೆ. ನಿನ್ನ ಆತ್ಮದ ಕಾಲ ದೇಶಗಳಲ್ಲಿ ಈ ವಿಶ್ವ ನಿನ್ನ ಮೈಯಾಗಲಿ, ವಸುಂಧರೆಯೇ ಹೃದಯವಾಗಲಿ, ವಿಸ್ತೃತಸಮುದ್ರಗಳೆ ಶ್ವಾಸಕೋಶಗಳಾಗಲಿ, ಮೂಕವಾಗಿರುವ ಗುಟ್ಟು ಎಂದೆಂದಿಗೂ ಉಳಿದಿರಲಿ ಎಂದು ಕವಿ ಮಾರ್ಗದರ್ಶನ ನೀಡುತ್ತಾರೆ. ಕವಿ ನಿಸರ್ಗಮೇಲಿನ ಪ್ರೀತಿ ಯಾವ ಮಟ್ಟದ್ದಾಗಿತ್ತು ಎಂಬುದನ್ನು ಈ ಕವಿತೆ ತಿಳಿಸಿಕೊಡುತ್ತದೆ. ಕುವೆಂಪು ನಿಸರ್ಗಕವಿ ಎನ್ನುವ ಮಾತು ಎಷ್ಟು ಸತ್ಯವೆಂಬುದಕ್ಕೆ ಈ ಕವಿತೆಯೇ ಸಾಕ್ಷಿ.

ಸೂರ್ಯದೇವನ ವಿಷಯವಾಗಿ ಭಾರತೀಯರ ಕಲ್ಪನೆ ಸುಂದರವಾಗಿ ಬೆಳೆದುಬಂದಿದೆ. ಸೂರ್ಯೋದಯ ಉದಾತ್ತವಾದದ್ದು ಪವಿತ್ರವಾದದ್ದು. ಈ ಕಲ್ಪನೆಯ ಒಂದು ಮುಖ ವೇದ ಶಾಸ್ತ್ರ ಪುರಾಣ ಇತಿಹಾಸಗಳಲ್ಲಿ ನಮಗೆ ಪರಿಚಯವಾದರೆ, ಅದರ ಇನ್ನೊಂದು ಮುಖ ಸಂಸ್ಕೃತಿ ಮತ್ತು ಸಂಸ್ಕೃತೇತರ ಪ್ರಾಚೀನ ಕಾವ್ಯ ನಾಟಕ ಸಾಹಿತ್ಯ ರಚನೆಗಳಲ್ಲಿ ನಮಗೆ ಪರಿಚಯವಾಗುತ್ತದೆ. ವೇದೋಪನಿಷತ್ತುಗಳ ಕಾಲದಿಂದಲೂ ನಮ್ಮವರು ಸೂರ್ಯೋದಯದ ಸುಂದರ ದೃಶ್ಯದ ವರ್ಣನೆಯನ್ನು

ಮಾಡುತ್ತಾ ಬಂದಿದ್ದಾರೆ. ಅದರ ಚಿರಂತನ ಸೌಂದರ್ಯದ ವರ್ಣನೆ ಪ್ರಾಚೀನ ಕವಿಗಳಲ್ಲಿ ಬಹಳ ಸಂಪ್ರದಾಯಬದ್ಧವಾಗಿದ್ದು, ನೀರಸವಾಗಿ, ನಿರಾಶೆಯನ್ನು ಉಂಟುಮಾಡುತ್ತದೆ. ಸೂರ್ಯೋದಯ ದೃಶ್ಯವೊಂದು ನಿರಂತರ ಚೆಲುವಿನ ಚಿಲುಮೆಯಾಗಿ ತೋರದೆ ಕೇವಲ ಕಾಲಸೂಚಕವಾಗಿ ಅಥವಾ ಶೃಂಗಾರಭರಿತವಾದ ಬೆಳದಿಂಗಳ ವಿಹಾರದ ಇರುಳ ಮುಕ್ತಾಯವನ್ನು ಸೂಚಿಸುವ ರೀತಿಯಲ್ಲಿ ತೋರುತ್ತದೆ.

"ಸೂರ್ಯೋದಯದ ದೃಶ್ಯಕ್ಕಿಂತಲೂ ಸೂರ್ಯೋದಯದಿಂದ ಆದ ಪರಿಣಾಮಗಳನ್ನು ಕವಿ ಸಮಯ ಸಂಕೇತಗಳಾದ ಕವಲ ಅರಳಿತು, ನೈದಿಲೆ ಕಣ್ಣುಮುಚ್ಚಿತ್ತು, ಚಕ್ರವಾಕಗಳು ಸೇರಿದವು. ಚಕೋರ ಕೊರಗಿತು, ನಕ್ಷತ್ರಗಳು ಬಾಡಿದವು ಮುಂತಾದವುಗಳಿಂದ ವರ್ಣಿಸುವುದು ಆಗಿನ ಕವಿಗಳ ಸಂಪ್ರದಾಯವಾಗಿತ್ತು"[೧] ಎಂದು ಡಾ. ಲತಾರಾಜಶೇಖರ್ ಅಭಿಪ್ರಾಯಪಡುತ್ತಾರೆ.

ಕುವೆಂಪು ಅವರ ಪ್ರಕೃತಿ ಗೀತೆಗಳಲ್ಲಿ ಸೂರ್ಯೋದಯ ಗೀತೆಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಕವಿ ರಚಿಸಿರುವ ಸೂರ್ಯೋದಯಗೀತೆಗಳಲ್ಲಿ, ಹಲವು ವೈಶಿಷ್ಟ್ಯಗಳಿವೆ. ಸೂರ್ಯೋದಯ ಅವರಿಗೆ ಕೇವಲ ಒಂದು ದೈನಂದಿನ ವಿದ್ಯಾಮಾನವಾಗಲಿ, ನಿಸರ್ಗ ಸಹಜ ಘಟನೆಯಾಗಲಿ ಆಗದೆ ಅದೊಂದು ದಿವ್ಯಾನುಭವ, ಭವ್ಯವಾದ ಅನುಭೂತಿಯೇ ಆಗುತ್ತದೆ. 'ಸೂರ್ಯೋದಯ' ದಿನನಿತ್ಯದ ಪ್ರಕೃತಿ ವ್ಯಾಪಾರವಾದರೂ ಕುವೆಂಪು ಅವರಲ್ಲಿ ಅನೇಕ ನೆಲೆಗಳಲ್ಲಿ ಅದು ಅಭಿವ್ಯಕ್ತಿ ಪಡೆದಿದೆ. ನಾಡಿನ ನವೋದಯದ ಜೊತೆ ಅರುಣೋದಯವನ್ನು ಸಮೀಕರಿಸಿ ಚಿತ್ರಿಸುವುದು ಅಂಥ ನೆಲೆಗಳಲ್ಲೊಂದು. 'ನವೋದಯ' ಕುವೆಂಪು ಹೊಸ ಕಾವ್ಯಮಾರ್ಗಕ್ಕೆ ಸೂಚಿಸಿದ ಹೆಸರು. ನವೋದಯ ಹೊಸಬಗೆಯ ಕಾವ್ಯದ ಉದಯವೂ ಹೌದು, ವ್ಯಕ್ತಿತ್ವದ ನವೋದಯವೂ ಹೌದು, ನಾಡಿನ ಸರ್ವೋದಯವೂ ಹೌದು.

ಅವರಿಗೆ ಬಿಸಿಲು ಸೂರ್ಯನ ಕೃಪೆಯಾಗಿ; ಸೂರ್ಯೋದಯ, ಚಂದ್ರೋದಯಗಳು ದೇವರ ದಯೆಯೇ ಆಗಿತೋರುತ್ತದೆ. 'ಆನಂದಮಯ ಜಗಹೃದಯ' ಕವನ ಕವಿಯ ತಾತ್ವಿಕ ನಿಲವನ್ನು ಸ್ಪಷ್ಟಪಡಿಸುತ್ತದೆ.

ಅರುಣೋದಯವೇ ಅರುಣೋದಯವೇ!
ಅರಳುವ ಪುಷ್ಪದಿ ಪರಮಪುರುಷನ ತೋರುವೇ!!

ಎನ್ನುವ ಅವರ ಸೂರ್ಯೋದಯ ಗೀತೆ ಸತ್ಯ ಶಿವಸೌಂದರ್ಯದ ಹಿನ್ನೆಲೆಯಲ್ಲಿ ಮೂಡಿಬಂದದ್ದಾಗಿದೆ. ಕುವೆಂಪು ಅವರಿಗೆ ಸೂರ್ಯೋದಯವೊಂದು ಅಪೂರ್ವಸುಂದರವಾದ ಘಟನೆ. ಅದು ಅದ್ಭುತವಾಗಿದ್ದು ಅವರಲ್ಲಿ ತೀವ್ರಕಾತರ,

---

೧. ಡಾ. ಲತಾರಾಜಶೇಖರ್ : ಕುವೆಂಪು ಕಾವ್ಯದಲ್ಲಿ ಪ್ರಕೃತಿ – ಒಂದು ಅಧ್ಯಯನ, ಪುಟ. ೪೫.

ನಿರೀಕ್ಷೆಯನ್ನು ಉಂಟುಮಾಡುತ್ತದೆ. ಕವಿಯ ಸೂರ್ಯೋದಯ ವರ್ಣನೆಗೆ ಸಂಬಂಧಿಸಿದಂತೆ ಎಸ್.ವಿ.ಪರಮೇಶ್ವರಭಟ್ಟರ ಅಭಿಪ್ರಾಯ ಹೀಗಿದೆ.

"ಸೂರ್ಯೋದಯದ ಸಮಯದ ಪ್ರಕೃತಿ ವ್ಯಾಪಾರ ವಿಶೇಷದರ್ಶನದಿಂದ ತಮ್ಮ ಚೇತನಕ್ಕೊದಗಿದ ರಸಾನುಭವದ ಆನಂದಾತಿಶಯದ ಚಿನ್ಮೌನವನ್ನು ನಮಗಾಗಿ ಹಾಡಿಹೇಳಿದ್ದಾರೆ. ಒಂದೊಂದು ಹೃದಯದ ಕಾಣ್ಕೆಯೂ ಕವಿಗೆ ಹಬ್ಬವಾಗಿ, ಆ ಹಬ್ಬವೇ ಈ ಗೀತೆಗಳಲ್ಲಿ ಅಭಿವ್ಯಕ್ತಿತಳೆದಿದೆ. ಉದಯಕಾಲದ ದೃಶ್ಯ ವೈಕುಂಠದ ವಿವರವಾದ ವರ್ಣನೆಗಳಿಂದ ಈ ಗೀತೆಗಳು ಉಜ್ವಲವಾಗಿ ಬೆಳಗುತ್ತವೆ. ಕವಿಯ ಭಾವಾನುಭವದ ತೀವ್ರತೆಯಿಂದ ಇವು ಸ್ಪಂದಿಸುತ್ತಿವೆ. ಮಂತ್ರ ವಿಶೇಷವಾಗಿ ಪರಿಣಮಿಸಿದ ಗೀತೆಗಳೂ ಇಲ್ಲಿವೆ"[೧] ಎಂದು ಹೇಳುತ್ತಾರೆ.

ಕವಿಯ ಸೂರ್ಯೋದಯದ ಬಗೆಗಿನ ವರ್ಣನೆ ಕೇವಲ ಪ್ರಾಥಮಿಕ ಮಟ್ಟದ ಸೌಂದರ್ಯ ಆರಾಧನೆಯಾಗದೆ ತಲಸ್ಪರ್ಶಿಯ ಗುಣವನ್ನು ಈ ಕವಿತೆಗಳು ಹೊಂದಿವೆ.

ಬಿದಿರಮೆಳೆಯೊಳುಸುಳಿದು, ಚುಂಬಿಸಿ
ನೆರಿಗುಲಾಬಿಯ ಹೃದಯ ಕಮಲವ, (ಸೂರ್ಯೋದಯ)
ಮಲ್ಲಿಗೆಯನಾದರಿಸಿ, ಬಕುಳದ ಕೋಮಲಾಕೃತಿಯ
ಮೆಲ್ಲನಾಲಿಂಗಿಸುತೆ ಮುದ್ದಿಸಿ
ನೀರಜಂಗಳಿಗಿತ್ತು ಧೈರ್ಯವ
ಕುಮುದಗಳ ಸಂತೈಸೆ ಬೀಸಿದನುದಯ ಮಾರುತನು ಎಂದು

'ಸೂರ್ಯೋದಯ' ಎಂಬ ಪದ್ಯದಲ್ಲಿ ಸೂರ್ಯದೇವನ ಆಗಮನವನ್ನು ಕುರಿತಂತೆ, ಅಲ್ಲದೆ ಅವನ ಉದಯದ ನಂತರ ಪ್ರಕೃತಿಯಲ್ಲಿ ಆಗುವ ಬದಲಾವಣೆಗಳು ಈ ಎಲ್ಲವನ್ನು ಕುರಿತು ಕವಿ ವರ್ಣಿಸುತ್ತಾರೆ. ದಟ್ಟವಾದ ಕಾಡಿನ ಮಧ್ಯೆ ಸೂರ್ಯೋದಯ ಕಿರಣವೂ ಪ್ರವೇಶಿಸಿ, ಅಲ್ಲದೆ ಬೃಹತ್‌ಗಾತ್ರದ ಬಿದಿರುಮೆಳೆಯಲ್ಲಿ ಅವನ ಬೆಳಕು ಪ್ರಕಾಶಿಸಿ ಇಡೀ ಪ್ರಕೃತಿಯೊಲ್ಲಾಸದಿಂದ ಕಂಗೊಳಿಸಿದೆ ಎಂದು ಕವಿ ಸೂರ್ಯೋದಯದ ಬಗ್ಗೆ ವರ್ಣಿಸುತ್ತಾರೆ. ಒಂದೊಂದು ಉದಯದ ಕಾಣ್ಕೆಯೂ ಕವಿಗೆ ಹಬ್ಬವಾಗಿ, ಆ ಹಬ್ಬವೇ ನಮಗೆ ಕಾವ್ಯವಾಗಿ ಈ ಗೀತೆಗಳಲ್ಲಿ ಅಭಿವ್ಯಕ್ತಿ ತಳೆದಿವೆ. ಉದಯಕಾಲದ ದೃಶ್ಯ ವೈಕುಂಠದ ವಿವರವಾದ ವರ್ಣನೆಯಿಂದ ಈ ಗೀತೆ ಉಜ್ವಲವಾಗಿ ಬೆಳಗಿದೆ.

ಕುವೆಂಪು ಅವರ ಸೂರ್ಯೋದಯ ಬಗೆಗಿನ ಕವಿತೆಗಳು ಹೀಗಿವೆ; ಸೂರ್ಯೋದಯ, ಕವಿಶೈಲ, ಬೆಟ್ಟಗಳ ಮೇಲೆ ಸೂರ್ಯೋದಯ, ಅರುಣೋದಯ,

---

೧. ಎಸ್.ವಿ.ಪರಮೇಶ್ವರಭಟ್ಟ (ಲೇ): ಶ್ರೀ ಕುವೆಂಪು ಸೂರ್ಯೋದಯ ಗೀತೆಗಳು, ಗಂಗೋತ್ರಿ, ಪುಟ. ೪೫.

ಹಿಮಮಣಿ ಮೊದಲಾದವು. ಈ ಸೂರ್ಯೋದಯ ಬಗೆಗಿನ ಕವನಗಳನ್ನು ನೋಡಿದಾಗ ನಮಗೆ ಈ ಕವಿ ಯಾವ ತಿಂಗಳಿನಲ್ಲಿ, ಯಾವ ಋತುವಿನಲ್ಲಿ, ಯಾವ ಸ್ಥಳದಲ್ಲಿ ಸೂರ್ಯನ ಉದಯವನ್ನು ದರ್ಶಿಸಿದರು ಎಂಬುದು ನಮಗೆ ಅರ್ಥವಾಗುತ್ತದೆ. ಸೂರ್ಯನ ಉದಯವು ಕವಿಯ ಹೃದಯದಲ್ಲಿ ಮೂಡಿಸಿದ ಭಾವದ ಅನುರಣನವೆಂತಹುದೆಂಬುದು ನಮಗೆ ಸ್ಪಷ್ಟವಾಗುತ್ತದೆ. ಮಲೆನಾಡಿನ ನವಿಲುಕಲ್ಲಿನಲ್ಲಿ ಕಂಡ ಸೂರ್ಯೋದಯದ ಅನುಭವವೇ ಬೇರೆ. ಬಯಲು ಸೀಮೆಯಲ್ಲಿ, ಮೈಸೂರಿನ ಒಂಟಿಕೊಪ್ಪಲಿನಲ್ಲಿ ನಿಂತಾಗ ಕವಿ ಕಂಡ ಸೂರ್ಯೋದಯದ ಕಾಣ್ಕೆಯೇ ಬೇರೆ. ಸ್ಥಳದಿಂದ ಸ್ಥಳಕ್ಕೆ ಹೇಗೆ ಕಾಣ್ಕೆಯಲ್ಲಿ ಅಂತರವಿದೆ ಹಾಗೆ ಋತುವಿನಿಂದ ಋತುವಿಗೆ ವ್ಯತ್ಯಾಸವಿರುವುದನ್ನು ಇಲ್ಲಿ ನಾವು ಗುರುತಿಸಬಹುದು.

ಕುವೆಂಪು ಅವರು ಸೂರ್ಯೋದಯದ ಬಗ್ಗೆ ಹೀಗೆ ಹೇಳುತ್ತಾರೆ.

“ಸೂರ್ಯೋದಯ ಸೂರ್ಯಾಸ್ತಮಾನಗಳನ್ನು ನೋಡ್ತಾ ಇದ್ದೆ. ಕಾರಂಜಿಕೆರೆ ಏರಿಮೇಲೆ ಹೋಗಿ, ಅಲ್ಲಿಂದ ಶ್ಮಶಾನಕ್ಕೆ ಹೋಗಿ, ಆಮೇಲೆ ಬೆಟ್ಟಹತ್ತಿ, ಮತ್ತ ಇನ್ನೆಷ್ಟೋ ಸಲ ಕಾಲೇಜು ಮುಗಿಸಿಕೊಂಡು ಅವಸರವಸರವಾಗಿ ಬಂಡೆ ಹತ್ತಿ ಕೂತು ಸೂರ್ಯಾಸ್ತವನ್ನು ನೋಡ್ತಾ ಇದ್ದೆ. ಅದು ಕಣ್ಣು ಕಾಣುವಷ್ಟು ಮಿತಿಯ ಅನುಭವವಲ್ಲ. ಯಾವಾಗ ನೋಡಿದರೂ ಅದು ಮೊದಲಿನ ಹಾಗೆ ಅದ್ಭುತವಾಗೇ ಇತ್ತು. ಸೂರ್ಯ, ಆ ಸೂರ್ಯನಗೋಲ, ಅದು ನೋಡ್ತಾ ನೋಡ್ತಾ ಆಕಾಶದ ಸೀಮೆಯಲ್ಲಿ ಅದು ಮುಳುಗುವ ರೀತಿ ಇದೆಲ್ಲಾ ಕೇವಲ ಸೌಂದರ್ಯಾನುಭವ ಅಲ್ಲ; ಆಧ್ಯಾತ್ಮಿಕ ಅನುಭವವೂ ಆಗಿತ್ತು ನನ್ನ ಪಾಲಿಗೆ. ನನ್ನ ಎಪ್ಪತ್ತೈದನೆ ವಯಸ್ಸಿನವರೆಗೆ ದೈಹಿಕವಾಗಿ ನಾನು ಗಟ್ಟಿಮುಟ್ಟಾಗಿರೋ ತನಕ ಸೂರ್ಯೋದಯ ಸೂರ್ಯಾಸ್ತಮಾನ ನೋಡೋದಕ್ಕೆ ಹೋಗೇಹೋಗ್ತಿದ್ದೆ. ಇಲ್ಲಿ ನನಗಾಗುವ ಈ ಅನುಭವಕ್ಕೆ ಅದೇ ಮೂಲ. ಅದೇ, ಅಂದರೆ ಮಲೆನಾಡಿನ ಅನುಭವ. ಒಂದರ್ಥದಲ್ಲಿ ಆ ಅನುಭವವೇ ಇಲ್ಲಿಯೂ ಮುಂದುವರಿಯಿತೆಂದು ಹೇಳಬಹುದು”[೧]

ಕುವೆಂಪು ಸೂರ್ಯೋದಯದ ಬಗ್ಗೆ ತನ್ನದೇ ರೀತಿಯ ವಿಶಿಷ್ಟತೆಯನ್ನು ಹೊಂದಿದ್ದರು ಎಂಬುದಕ್ಕೆ ಮೇಲಿನ ಮಾತುಗಳೇ ಸಾಕ್ಷಿಯಾಗಿವೆ.

‘ಬೆಟ್ಟಗಳ ಮೇಲೆ ಸೂರ್ಯೋದಯ’ ಕವಿತೆಯಲ್ಲಿ ಕವಿ ಮಲೆನಾಡಿನ ಬೃಹದಾಕಾರದ ಬೆಟ್ಟಗಳ ನೆತ್ತಿಯ ಮೇಲೆ ಸೂರ್ಯನ ಉದಯ ಹೇಗೆ ಕಾಣುತ್ತಿತ್ತು ಎಂಬುದನ್ನು ವರ್ಣಿಸುತ್ತಾರೆ.

---

೧. ಹಂಪಿ ಕನ್ನಡ ವಿಶ್ವವಿದ್ಯಾಲಯ : ಕುವೆಂಪು ಸಮಗ್ರಗದ್ಯ, ಸಂಪುಟ ೨, ಸಂದರ್ಶನಗಳು, ಪುಟ. ೧೪೦-೪೧.

ಕುವೆಂಪು ಅವರ ಗೀತೆಗಳಲ್ಲಿ ಕಾಣಬರುವ ವಿಶಿಷ್ಟ ಲಕ್ಷಣಗಳನ್ನು ಪ್ರಸ್ತಾಪಿಸಬಹುದು. ಹಿಂದಿನ ಕವಿಗಳು ಹೇಳಿ ಕೇಳಿ ಸವಕಲು ನಾಣ್ಯದಂತೆ ಆಗಿರುವ ರೂಪಕ, ಉಪಮೆಗಳಿಂದ ಸೂರ್ಯೋದಯವನ್ನು ವರ್ಣಿಸುತ್ತಿದ್ದರು. ಆದರೆ ವಿಜ್ಞಾನಿಯಾಗಿ, ತತ್ವಜ್ಞಾನಿಯಾಗಿ, ಎಲ್ಲಕ್ಕೂ ಮಿಗಿಲಾಗಿ ಕವಿಯಾಗಿ ಕುವೆಂಪು ದರ್ಶಿಸಿದ ವಾಸ್ತವಲೋಕದ ಚಿತ್ರಣ ಇಲ್ಲಿದೆ.

ಕವಿಯ ಸೂರ್ಯೋದಯ ಬಗೆಗಿನ ಕವಿತೆಗಳು ಕವಿಯ ಅಂತರಂಗದಿಂದ ಹೊರಹೊಮ್ಮಿದ ನೈಸರ್ಗಿಕವಾದ ಭಾವವಸ್ತುಗಳೇ ಹೊರತು ಚರ್ವಿತ ಚರ್ವಣವಾಗಿ ಮೂಡಿಬಂದವುಗಳಲ್ಲ ಎಂದು ಹೇಳಬಹುದು. ಕುವೆಂಪು ಅವರ ಸೂರ್ಯೋದಯದ ಗೀತೆಗಳಲ್ಲಿ ಅವರು ಹಿಮಮಣಿಯ ಸೊಬಗಿಗೆ ಮಾರುಹೋಗಿರುವುದು ವಿಶೇಷವಾಗಿ ಕಂಡುಬರುತ್ತದೆ. ಹಸುರುಹುಲ್ಲಿನ ತುದಿಯಲ್ಲಿ ಮುತ್ತಿನ ಹಾಗೆ ಬೆಳ್ಳಗಿರುವ ಹಿಮದ ಹನಿ ಬಿಡಿಬಿಡಿಯಾಗಿ ಮಣಿಯಾಗಿ ಹೊಳೆಯುತ್ತಿರುವಾಗ ಬೆಳಗಿನ ವೇಳೆಯಲ್ಲಿ ಸೂರ್ಯನ ಬೆಚ್ಚನೆಯ ಹೊಂಬಿಸಿಲು ಬಿದ್ದ ಗಳಿಗೆ ಆ ಹಿಮಮಣಿಗಳು ಒಂದೊಂದು ವಜ್ರದ ಕಿಡಿಯಾಗಿ ಕಾಣುತ್ತವೆ ಎಂದು ವರ್ಣಿಸುತ್ತಾರೆ.

ಹೀಗೆ ಸೂರ್ಯೋದಯದ ದರ್ಶನದಿಂದ ಕವಿಗೆ ವಿಶಿಷ್ಟಾನುಭವ ಉಂಟಾಗುತ್ತದೆ. ಕವಿಯ ವ್ಯಕ್ತಿತ್ವ ವರ್ಣನೆಯನ್ನು ದಾಟಿ, ದರ್ಶನಮುಕ್ತಿಯನ್ನು ಸೇರುತ್ತದೆ.

ಕವಿಯಲ್ಲಿ ಬುದ್ಧಿಬಂದ ದಿನದಿಂದ ಜೀವನದ ಉದ್ದಕ್ಕೂ ಈ ಸೂರ್ಯೋಪಾಸನೆ ಸತತವಾಗಿ ನಡೆಯುತ್ತ ಬಂದಿದೆ. "ಸೃಷ್ಟಿಕರ್ತನೆ ಒಬ್ಬ ಮಹಾಕವಿ, ಅವನ ಮಹಾಕಾವ್ಯವೇ ಈ ಸೃಷ್ಟಿ ಎಂಬುದು ಈ ಗೀತೆಗಳಲ್ಲಿ ಪ್ರಕಟವಾಗಿರುವ ತತ್ವದ ಇನ್ನೊಂದು ಮುಖ" ಎಂದು ಎಸ್.ವಿ.ಪರಮೇಶ್ವರಭಟ್ಟರು ಅಭಿಪ್ರಾಯಪಡುತ್ತಾರೆ.

ಕುವೆಂಪು ಅವರು ತಮ್ಮ 'ಮುಂಜಾನೆ' ಕವಿತೆಯಲ್ಲಿ ಸೂರ್ಯನ ಬಗ್ಗೆ ಪ್ರಸ್ತಾಪಿಸುತ್ತಾರೆ. ಕವಿ ಬೆಳಗಿನ ಜಾವದ ಪರಿಸರವನ್ನು ಕಟ್ಟಿಕೊಡುತ್ತಿದ್ದಾರೆ. ಕವಿ ಬದುಕಿನ ಸಹಜವಾದ ಜೀವನಕ್ರಮದ ಬಗ್ಗೆ ಕವಿತೆಯಲ್ಲಿ ವಿವರಿಸುತ್ತಾರೆ. ಪ್ರಕೃತಿ ಸೂರ್ಯನ ಆಗಮನದ ಮೊದಲು ಹೇಗೆ ಸೌಂದರ್ಯದಿಂದ ಕೂಡಿರುತ್ತದೆ ಎಂಬುದನ್ನು ವಿವರಿಸುತ್ತಾರೆ.

> ಪೂಗಳಿಂ ತುಂಬಿರುವ ಸಂಪಗೆಯ ಕೊಂಬೆಯಿಂ
> ದಾಗಸದ ಮಂಜುಹನಿ ಪಟಪಟನೆ ಬೀಳುತಿದೆ (ಮುಂಜಾನೆ)
> ಕೂಗುತಿದೆ ಮಡಿವಾಳ ಮಸುಕಿನಲ್ಲಿ ರಮಣೀಯ
> ರಾಗದಿಂ ನಾಕವನು ಭೂಲೋಕಕೆಳೆಯುವಂತೆ!

[illegible]

ಎಂದು ಬೆಳಗಿನ ಜಾವದ ವಾತಾವರಣವನ್ನು ಕವಿ ವರ್ಣಿಸುತ್ತಾರೆ. ಮುಂಜಾನೆ ಸಮಯದಲ್ಲಿ ಪ್ರಕೃತಿಯಲ್ಲಿ ಆಗುವ ಬದಲಾವಣೆಗಳನ್ನು ಕುರಿತು ವಿವರಿಸುತ್ತಾರೆ. ಸುಗಂಧದಿಂದ ಕೂಡಿರುವ ಸಂಪಗೆಯ ಮರಕ್ಕೆ ಮಂಜಿನ ಹನಿಗಳು ಬೀಳುತ್ತವೆ. ಆ ಸಂದರ್ಭದಲ್ಲಿ ಮಡಿವಾಳ ಹಕ್ಕಿಯು ತನ್ನ ರಾಗದಿಂದ ಭೂಮಿಯನ್ನು ಸ್ವರ್ಗವಾಗಿಸುತ್ತದೆ ಎಂದು ವರ್ಣಿಸುತ್ತಾರೆ. ಬೆಳಗಿನ ಜಾವದ ಪ್ರಾತಃಕಾಲದಲ್ಲಿ ಸಂಪಗೆ ಮರಕ್ಕೆ ಮಂಜಿನ ಹನಿಗಳು ಬೀಳುವ ದೃಶ್ಯವನ್ನು ಕೊಡುತ್ತಾರೆ. ಕವಿ ಸೂರ್ಯೋದಯಕ್ಕೂ ಮೊದಲು ಬೆಳಗಿನ ವಾತಾವರಣ ಹೇಗಿರುತ್ತದೆ ಎಂಬುದನ್ನು ಸುಂದರವಾಗಿ ವರ್ಣಿಸುತ್ತಾರೆ. ಹಾಗೆಯೇ ಕವಿಯ ನಿಸರ್ಗಪ್ರೇಮಕ್ಕೆ ಈ ಕವಿತೆ ನಿದರ್ಶನ

ನಮ್ಮದಲ್ಲವೆ ಭೂಮಿ? ನಮ್ಮದಲ್ಲವೆ ಗಗನ?
ಅಮ್ಮನೆಮಗಾಗಿ ಆಕಾರವಂ ತಳೆದಿಹಳು
ನಮ್ಮದಲ್ಲವೆ ವಿಶ್ವವೆಲೆ ಜೀವ? ಕರುಣೆಯಿಂ
ನಮ್ಮದೀ ವಿಶ್ವವೀ ಗಗನವೀ ನಿತಂಬಿನಿಯು!

ಈ ಕವಿತೆಯು ಪ್ರಕೃತಿಯ ಎಲ್ಲ ಸೌಂದರ್ಯವು ನಮ್ಮದೇ ಎಂಬ ಭಾವವನ್ನು ತಿಳಿಸುತ್ತದೆ. ಪ್ರಾಣಿಪಕ್ಷಿಗಳು ಹುಟ್ಟಿರುವುದು ನಮಗಾಗಿಯೇ ಎನ್ನುವ ಭಾವವನ್ನು ಕವಿ ವ್ಯಕ್ತಪಡಿಸುತ್ತಾರೆ. ಭೂಮಾತೆ ತಾಯರೂಪವಾಗಿ ಪ್ರಕೃತಿಯೊಳಗೆ ಹುಟ್ಟಿದ್ದಾಳೆ. ಆದ್ದರಿಂದ ನಿಸರ್ಗಮಾತೆ ಸಕಾರಮೂರ್ತಿಯಾಗಿ ಆಕಾರವನ್ನು ತಳೆದಿರುವುದು ನಮಗಾಗಿ ಎನ್ನುತ್ತಾರೆ. ಅಲ್ಲದೆ ಇಂತಹ ಸೌಂದರ್ಯವನ್ನು ನೋಡಿ ನಮ್ಮ ಜನ ಆನಂದ ಪಡುವುದಿಲ್ಲವಲ್ಲ ಎಂದು ಕವಿ ಕೊರಗಿದ್ದಾರೆ. ಕಾವ್ಯದ ಆಸ್ವಾದನೆಗೆ, ಸೌಂದರ್ಯ ಸಾಧನೆಗೆ, ಪ್ರಕೃತಿಯ ಆರಾಧನೆಗೆ ಮುನ್ನುಗ್ಗಬೇಕು ಎಂದು ಕವಿ ಹೇಳುತ್ತಾರೆ. ಸೌಂದರ್ಯದ ಸಮಾಧಿಯಲ್ಲಿ ಆನಂದವನ್ನು ಹೀರಿ ವ್ಯಕ್ತಿ ಮೈಮರೆಯಬೇಕಾದರೆ ಇಂತಹ ಪ್ರಾತಃಕಾಲದ ಕವಿದರ್ಶನದಿಂದ ಮಾತ್ರ ಸಾಧ್ಯ. ಕವಿಗೆ ಸೂರ್ಯೋದಯವೆ ಶಿವದರ್ಶನವಾಗಿ, ಅದು ಸರ್ವೇಂದ್ರಿಯಗಳ ಸುಖದ ನಿಧಿಯಾಗಿ ಕಾಣುತ್ತದೆ. ಹೀಗೆ 'ಸೂರ್ಯೋದಯ ಕವಿ'ಯಾದ ಕುವೆಂಪು ಅವರ ಸೂರ್ಯೋದಯ ಗೀತೆಗಳು ಅನನ್ಯ. ಅವರ ಸೂರ್ಯೋದಯ ಬಗೆಗಿನ ಕವಿತೆಗಳು ಅಪೂರ್ವದರ್ಶನದ ಅಧ್ಯಾತ್ಮ ಹಿನ್ನೆಲೆಯ ವೈಶಿಷ್ಟ್ಯದಿಂದ ಕೂಡಿವೆ.

ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಎಂಬ ಆತ್ಮಕಥೆಯಲ್ಲಿ ಪಕ್ಷಿಗಳಿಗೆ ಸಂಬಂಧಿಸಿದಂತೆ ಹಲವು ಕವಿತೆಗಳಿವೆ. ಆ ಕವನಗಳು ಹೀಗಿವೆ;

'ಪಿಕಲೋಲ', 'ಹಾಡುವಹಕ್ಕಿ', 'ಚಿಣ್ಣಮುದ್ದಿನಹಕ್ಕಿ', 'ಮಡಿವಾಳ ಮೊದಲಾದವು. ಬಹುಮುಖ ಸಾಹಿತ್ಯಕ ಪ್ರತಿಭೆಯುಳ್ಳ ಮಹಾಕವಿ ಕುವೆಂಪು ಅವರ ಸಾಹಿತ್ಯ ಪ್ರಪಂಚ ವೈವಿಧ್ಯಮಯವಾದುದು. ಭಾರತೀಯ ಸಂಸ್ಕೃತಿಯಲ್ಲಿ ಆಳವಾಗಿ ಬೇರುಬಿಟ್ಟಿರುವ ಈ ರಾಷ್ಟ್ರಕವಿಯ ಅನುಭವ ಪ್ರಪಂಚ ವಿಶಾಲವಾದದ್ದು. 'ಐತಿಹಾಸಿಕ ಪ್ರಪಂಚ, ಸಾಮಾಜಿಕ ಪ್ರಪಂಚವನ್ನು ಮಾತ್ರವಲ್ಲದೆ ವೈಜ್ಞಾನಿಕ ದೃಷ್ಟಿಯನ್ನೂ ವೈಚಾರಿಕ ಬುದ್ಧಿಯನ್ನು ಅವರ ಕಾವ್ಯದಲ್ಲಿ ಕಾಣಬಹುದು. ಜೀವಂತವಾದ ನಿಸರ್ಗ ಪ್ರಪಂಚ, ಸಸ್ಯಪ್ರಪಂಚ, ಪ್ರಾಣಿ ಪಕ್ಷಿ ಪ್ರಪಂಚ, ಈ ಎಲ್ಲೆಡೆಗಳಲ್ಲಿಯೂ ಕುವೆಂಪು ಅವರ ಪ್ರತಿಭಾಶಕ್ತಿ ಕೆಲಸಮಾಡಿದೆ. ಪಕ್ಷಿಪ್ರಪಂಚ ನಿಸರ್ಗದ ಒಂದು ಭಾಗವಾಗಿದೆ. ಪ್ರಕೃತಿಯ ಬಗ್ಗೆ ಕುವೆಂಪು ಅವರ ವಿಚಾರಲಹರಿ ಹಾಗೂ ಕಲ್ಪನಾಲಹರಿ ಪಕ್ಷಿಗೀತೆಗಳಲ್ಲಿಯೂ ಕಂಡುಬರುತ್ತದೆ. ಕುವೆಂಪು ಕಾವ್ಯವನ್ನು ಅಭ್ಯಾಸಮಾಡಿದಾಗ ಪಕ್ಷಿಪ್ರಪಂಚ ಅವರ ಕಾವ್ಯಕ್ಕೆ ಮಾತ್ರ ಸೀಮಿತವಾಗಿದೆ ಎಂಬ ಅಂಶ ತಿಳಿಯುತ್ತದೆ.

ಹೀಗಾಗಿ ಕುವೆಂಪು ಕಾವ್ಯದಲ್ಲಿ ಪಕ್ಷಿ ಪ್ರಪಂಚ ಕಾವ್ಯದ ವಸ್ತುವಾಗಿದೆ. ಕುವೆಂಪು ಕಾವ್ಯದಲ್ಲಿ ಪಕ್ಷಿಗಳ ಸಂಖ್ಯೆ ಸಾಕಷ್ಟಿವೆ. ಅವುಗಳ ಬಣ್ಣ, ಆಕಾರ, ಧ್ವನಿಗಳಲ್ಲಿ ಭೇದವಿದ್ದರೂ ಅವುಗಳ ಗಾನ-ತಾನಗಳಿಂದ ಕವಿ ಪಡೆಯುವ ಆನಂದದಲ್ಲಿ ಯಾವ ವ್ಯತ್ಯಾಸವಿಲ್ಲ. ಕೋಗಿಲೆ, ಕಾಜಾಣ, ನವಿಲು, ತೇನೆಹಕ್ಕಿ, ಗಿಳಿ, ಪೊಂಗುಳಿ, ಹೊರಸುಹಕ್ಕಿ, ಮಡಿವಾಳ, ಬೆಳ್ಳಕ್ಕಿ, ಮಿಂಚುಳ್ಳಿ, ಗರಿಗೆಹಕ್ಕಿ, ಕ್ರೌಂಚ, ಚಕೋರ ಇತ್ಯಾದಿ. ಇವುಗಳ ಬಣ್ಣ, ಆಕಾರ, ಧ್ವನಿ ಹಾಗೂ ಇತರ ವೈಶಿಷ್ಟ್ಯಗಳನ್ನು ಮಾತ್ರವಲ್ಲದೆ ಈ ಪಕ್ಷಿಗಳು ನೀಡುವ ದರ್ಶನ, ಇವುಗಳ ವೀಕ್ಷಣೆಯಿಂದುಂಟಾಗುವ ರಸಾನುಭವ ಈ ಎಲ್ಲ ಅಂಗಗಳಿಗೆ ಕವಿ ಕೆಲವು ಕಡೆ ಸೂಚ್ಯವಾಗಿ, ವಾಚ್ಯವಾಗಿ ಅಭಿವ್ಯಕ್ತಿಮಾಡಿದ್ದಾರೆ. ಅವರ ಪ್ರಕೃತಿ ಗೀತೆಗಳಲ್ಲಿ ಹೆಚ್ಚಿನ ಮಹತ್ವವನ್ನು ಪಕ್ಷಿಗಳಿಗೆ ಕೊಟ್ಟಿದ್ದಾರೆ ಎಂಬುದು 'ಪಕ್ಷಿಕಾಶಿ', 'ನವಿಲು' 'ಕೋಗಿಲೆ ಮತ್ತು ಸೋವಿಯತ್ ರಷ್ಯಾ', 'ಅಗ್ನಿಹಂಸ'. ಈ ನಾಲ್ಕು ಕವನ ಸಂಕಲನಗಳ ಶೀರ್ಷಿಕೆಗಳನ್ನು ಗಮನಿಸಿದರೆ ತಿಳಿಯುತ್ತದೆ.

'ಪಿಕಲೋಲ' ಕವಿತೆಯಲ್ಲಿ ಕುವೆಂಪು ಕೋಗಿಲೆಯನ್ನು ವರ್ಣಿಸುತ್ತಾರೆ. ಅವರ ಕಾವ್ಯದಲ್ಲಿ 'ಕೋಗಿಲೆ'ಗೆ ಒಂದು ವಿಶಿಷ್ಟ ಸ್ಥಾನವಿದೆ. ಕೋಗಿಲೆ ಪ್ರಕೃತಿಯೊಳಗೆ ತನ್ನ ಸಹಜ ಕ್ರಿಯೆಯಲ್ಲಿ ತೊಡಗಿ ಒಂದು ನಾದಲಯವನ್ನು ಸೃಷ್ಟಿಸುತ್ತದೆ. ಕೋಗಿಲೆಯ ಕೂಗು ಕವಿಗೆ ಒಂದು ಮಂತ್ರವಾಗಿ ಕೇಳುತ್ತದೆ. ಕವಿಗೆ ಕೋಗಿಲೆ ದೇವರನ್ನು ತೋರಿಸುವ ಒಂದು ದಿಕ್ಸೂಚಿ. ಆದರೆ ಕವಿ ದೇವರನ್ನು ತೋರಿಸುವ ನೀನು ಯಾರು? ಎಂದು ಪ್ರಶ್ನಿಸಿ ಯಕ್ಷಗಾನದ ಅಕ್ಷಯ ವೀಣೆ ಎಂದು ಸ್ಮರಿಸುತ್ತಾರೆ.

ಕಾನನ ಕವಿವರ,
ದೀನರ ಗಾಯಕ, ಪಿಕಲೋಲ!

ಪೂವಿನ ಮರದೊಳು (ಪಿಕಲೋಲ)
ದೇವನ ತೋರುವ
ಪಾವನ ಪಕ್ಷಿಯೇ ನೀನಾರೈ!

ಕವಿ ಕೋಗಿಲೆಯ ಗಾನಮಾಧುರ್ಯವನ್ನು ಕವಿ ವಿಶೇಷವಾಗಿ ಗೌರವಿಸುತ್ತಾರೆ. ಕವಿಗೆ ಕೋಗಿಲೆ ದೇವರನ್ನು ತೋರುವ ಹಕ್ಕಿಯಾಗಿದೆ. ಕೋಗಿಲೆ ಹೂವಿನ ಮರದಲ್ಲಿ ಕುಳಿತು ತನ್ನ ಗಾನದಿಂದ ಎಲ್ಲರನ್ನು ಆಕರ್ಷಿಸುತ್ತದೆ. ಕವಿ ಒಂದು ಹೂವಿನ ಮರವನ್ನು ನೋಡಿ ಆ ಮರದಲ್ಲಿ ಕೂತಿರುವ ಕೋಗಿಲೆ ಭಗವಂತನ ದರ್ಶನವನ್ನು ನೀಡಿತು ಎಂದು ಹೇಳುತ್ತಾರೆ. 'ಕಾನನ ಕವಿವರ, ದೀನರ ಗಾಯಕ' ಎನ್ನುವ ಮೂಲಕ ಕೋಗಿಲೆ ಪ್ರಕೃತಿಯಲ್ಲಿ ಹೊಂದಿರುವ ಸಂಬಂಧವನ್ನು ತಿಳಿಸುತ್ತದೆ. ದೀನರ ಗಾಯಕ ಎಂದೆಲ್ಲಾ ಕವಿ ಕೋಗಿಲೆಯನ್ನು ಮುಕ್ತಕಂಠದಿಂದ ಪ್ರಶಂಸೆ ಮಾಡುತ್ತಾರೆ. ಸುಗ್ಗಿಬಂದಿದೆ ಎಂಬುದನ್ನು ಹಿಗ್ಗಿನಿಂದ ಘೋಷಿಸುವ ಕೋಗಿಲೆ ರಸಯೋಗಿಯಾಗಿ ಕವಿಗೆ ಕಾಣುತ್ತದೆ. ಮಲೆನಾಡಿನ ಕಾಡುಗಳಲ್ಲಿ ಕೋಗಿಲೆಯಷ್ಟೇ ಮಧುರವಾಗಿ ಹಾಡುವ ಕಾಜಾಣದ ಬಗ್ಗೆ ಯಾರು ಗಮನಹರಿಸದೆ, ಅದಕ್ಕೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಿಲ್ಲವೆಂಬುದು ಕವಿಯ ಕೊರಗು. ಕುವೆಂಪು ಅವರೇ 'ಮಲೆನಾಡಿನ ಕೋಗಿಲೆ' ಎಂದು ವರ್ಣಿಸಿರುವ ಕಾಜಾಣದ ಬಗ್ಗೆ ಹೇಳಿರುವ ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

"ತುಸು ಹೊತ್ತಿನಲ್ಲಿಯೇ ಕಾಜಾಣ ಪಕ್ಷಿಯೊಂದು ರಾಗಾಲಾಪನೆ ಪ್ರಾರಂಭಿಸಿತು. ಎಂತಹ ಭುವನ ಮೋಹನಗಾನ! ಕಾಜಾಣಪಕ್ಷಿಯ ಗಾನದೆದುರು ಮತ್ತಾವ ಹಕ್ಕಿಯ ಗಾನವೂ ನಿಲ್ಲಲಾರದು. ಅದರೆದುರು ಕೋಗಿಲೆಯ ಪಂಚಮಸ್ವರ ಕೂಡ ಪಂಚಮಸ್ವರವೆ! ಅದರ ಗಾನದ ಆಲಿಂಗನದಲ್ಲಿ ಉಷೆ ಮೈಮರೆಯುತ್ತಾಳೆ, ವನಗಾಯಕರಲ್ಲಿ ಕಾಜಾಣಕ್ಕೆ ಪ್ರಥಮ ಸ್ಥಾನ ಸಲ್ಲತಕ್ಕದ್ದು"[೧] ಎಂದು ಅಭಿಪ್ರಾಯಪಡುತ್ತಾರೆ. ಕೋಗಿಲೆಗಿಂತಲೂ ಕಾಜಾಣದ ಬಗ್ಗೆ ಕವಿಗೆ ಅಭಿಮಾನ. ಬಣ್ಣ ಕೋಗಿಲೆಯಂತೆಯೇ ಇದ್ದರೂ ಅದಕ್ಕೆ ಇಮ್ಮಡಿಯಾದ ಇಂಚರ ಇದರದು. ಕೋಗಿಲೆ ಪರವುಟ್ಟನಾದರೆ ಕಾಜಾಣ ಕಾಡಿನಲ್ಲಿ ಜನಸಿದ ಪರಿಶುದ್ಧಾತ್ಮನೆಂದು ಕವಿ ಹೇಳುತ್ತಾರೆ.

ಅದೇನ ಹಾಡುವೆ
ಮಧುರ ಕಂಠದಿ?
ಚದುರ ಪಕ್ಷಿಯೇ,
ಮುದದಿ ಪೇಳೈ

---

೧. ಕುವೆಂಪು : ಮಲೆನಾಡಿನ ಚಿತ್ರಗಳು, ಉದಯರವಿ ಪ್ರಕಾಶನ, ಪುಟ. ೩೯.

ಮಲೆನಾಡಿನಲ್ಲಿ ಕೂಗುವ ಪಕ್ಷಿಯನ್ನು ಕುರಿತು ಕವಿ ವರ್ಣಿಸುತ್ತಿರುವುದು, ಕವಿಗೆ ಮಲೆನಾಡು ಹಲವು ಪಕ್ಷಿಗಳಿಂದ ಕೂಡಿರುವ ತಪೋವನವಾಗಿದೆ. ಈ 'ಹಾಡುವ ಹಕ್ಕಿ' ಕವಿತೆಯಲ್ಲಿ ಕವಿ ಪ್ರಕೃತಿಯಲ್ಲಿನ ಪಕ್ಷಿಯನ್ನು ವರ್ಣಿಸುವುದರ ಜತೆಗೆ ಅದ್ವೈತ ದರ್ಶನದ ದಾರಿಯಾಗಿ ಪಕ್ಷಿಯನ್ನು ನೋಡುತ್ತಾರೆ. 'ನಾನನಂತನು! ನಾನೇ ದೇವನು' ಎನ್ನುವ ಮಾತನ್ನು ನೋಡಿದರೆ 'ಅದ್ವೈತ ದರ್ಶನ'ದ ಸಮಸ್ತ ವಿಶ್ವವೂ ಆತ್ಮದಲ್ಲಿಯೆ ಇದೆ ಎಂಬ ಭಾವನೆ ತಿಳಿಯುತ್ತದೆ. ಕವಿ ತಾನೇ ಪಕ್ಷಿಯಂದು ಭಾವಿಸಿ ಇಂಪಾಗಿ ಕೂಗುವ ಧ್ವನಿಯನ್ನು ನಾನು ಸಹ ಹೊಂದಿರುವೆ ಎಂದು ತಾದಾತ್ಮ್ಯ ಸಾಧಿಸುತ್ತಾರೆ.

ನಾನೆ ನೀನೈ!

ನೀನೆ ನಾನೈ!

ದೀನ ಕವಿವರ,

ನನು ಕೇಳೈ!

ಎನ್ನುವ ಮೂಲಕ ಕವಿ ವಿಶ್ವವೆಲ್ಲವೂ ಆತ್ಮದಲ್ಲಿಯೇ ಐಕ್ಯವಾಗಿದೆ ಎಂಬ ಭಾವನೆಯನ್ನು ತಿಳಿಸುತ್ತಾರೆ. ಪ್ರಕೃತಿಗೀತೆಗಳಲ್ಲಿ ಕವಿ ತನ್ನ ಮಲೆನಾಡಿನ ಸೌಂದರ್ಯವನ್ನು ವರ್ಣಿಸುತ್ತಾರೆ.

ಕುವೆಂಪು ಅಧ್ಯಾತ್ಮ ಭಾವದಲ್ಲಿ ತೊಡಗಿ ತಾನೆ ಸಾಕಾರಮೂರ್ತಿಯಾಗಿರುವೆ ಎಂದು ಹೇಳುತ್ತಾರೆ. ಈ ಕವನದಲ್ಲಿ ಕವಿಯ ಅದ್ವೈತ ದರ್ಶನದ ಭಾವ ವ್ಯಕ್ತವಾಗಿದೆ. ಕವಿಯ 'ಚಿಣ್ಣಮುದ್ದಿನ ಹಕ್ಕಿ' ಒಂದು ವಿಶಿಷ್ಟವಾದ ಕವಿತೆ. ಕವಿ ಈ ಹಕ್ಕಿಯ ಜತೆ ಪರಸ್ಪರ ಸಂಭಾಷಣೆ ನಡೆಸುತ್ತಾರೆ. ಪ್ರಕೃತಿಯಲ್ಲಿ ಕಂಡುಬರುವ ಎಲ್ಲಾ ಹಕ್ಕಿಗಳ ಬಗ್ಗೆ ಕುವೆಂಪು ಅವರಿಗೆ ಪರಿಚಯವಿದೆ. ಕವಿತೆಯು ಒಂದು ಅಧ್ಯಾತ್ಮದ ತತ್ವಕ್ಕೆ ಸಂಬಂಧಪಟ್ಟಿದೆ ಎಂದು ಹೇಳಬಹುದು. ಆ ಸುಂದರವಾದ ಮುದ್ದಿನ ಹಕ್ಕಿಯನ್ನು ನೋಡಿ ಮಾತನಾಡಿಸುತ್ತಾರೆ. ಆ ಹಕ್ಕಿಯ ಜೊತೆ ಬಹಳ ಆತ್ಮೀಯವಾದ ಭಾವದಲ್ಲಿ ಕವಿ ತೊಡಗುತ್ತಾರೆ.

ನಿನ್ನ ದೇವಸ್ಥಾನವೆಲ್ಲಿದೆ,

ಚಿಣ್ಣಮುದ್ದಿನ ಹಕ್ಕಿಯೇ? (ಚಿಣ್ಣಮುದ್ದಿನ ಹಕ್ಕಿ)

ಮೆರೆವ ಶಿಖರದ ಮೇಲೆ ಇರುವುದೆ?

ತೊರೆಯ ತಡಿಯೊಳಗಿರುವುದೆ?

ಸುಂದರವಾದ ಹಕ್ಕಿಯನ್ನು ನೋಡಿದಾಗ ಕವಿ ತನ್ಮಯತೆಯನ್ನು ಹೊಂದುತ್ತಾರೆ. ಈ ಮುದ್ದಿನ ಹಕ್ಕಿಯು ನಿರ್ಮಲಕಾರ ದೇವನಂತೆ ಕವಿಗೆ ಕಾಣುತ್ತದೆ. ಇಡೀ

ಮಲೆನಾಡಿನಲ್ಲಿ ನೀನು ಎಲ್ಲಿ ವಾಸಮಾಡುವೆ ಎಂದು ಪ್ರಶ್ನಿಸುತ್ತಾರೆ. ಆ ಮುದ್ದಿನ ಹಕ್ಕಿ ಇರುವ ಪರಿಸರದ ಬಗ್ಗೆ ಕವಿಗೆ ಏನೋ ಒಂದು ಕುತೂಹಲವಿದೆ. ಆ ಕುತೂಹಲದಿಂದ ಹಕ್ಕಿಯನ್ನು ಕವಿ ಮಾತಾನಾಡಿಸಿ ಸ್ಪಷ್ಟತೆಯನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ತೊರೆ, ಮಲೆನಾಡಿನ ಶಿಖರ ಈ ಸ್ಥಳಗಳಲ್ಲಿ ನೆಲೆಸಿರುವೆಯ ಎಂದು ಹಕ್ಕಿಯನ್ನು ಕೇಳುತ್ತಾರೆ. ಎಲೆ ಹಕ್ಕಿಯೇ ಭೂಮಿಯಲ್ಲಿ ಯಾವ ಕಡೆ ಇರುವೆ ಎಂದು ಆ ಹಕ್ಕಿಯ ಅಸ್ತಿತ್ವವನ್ನು ಕುರಿತು ಪ್ರಶ್ನಿಸುತ್ತಾರೆ.

ಪರಮಯೋಗಿಗಳಿರುವ ಕಾಡಿನ
ಮೆರೆವ ಸೊಬಗಿನೊಳಿರುವುದೆ?
ನಿನ್ನ ಹೃದಯಾರಾಮದೊಳಗಿಹ
ಎನ್ನತಾತ್ಮನೊಳಿರುವುದೇ?
ಚಿಣ್ಣಮುದ್ದಿನ ಹಕ್ಕಿ "ಕೂಹೂ!"
ಎನ್ನುತಾಗಲೆ ಹಾರಿತು

ಕಾಡಿನ ಸಮುದಾಯಗಳಲ್ಲಿ, ಮಹಾಯೋಗಿಗಳ ಆಶ್ರಯದಲ್ಲಿ ನೀನು ಇರುವೆಯಾ ಎಂದು ಆ ಮುದ್ದಿನ ಹಕ್ಕಿಯನ್ನು ವರ್ಣಿಸುತ್ತಾರೆ. ನನ್ನ ಹೃದಯಾತ್ಮದಲ್ಲಿಯೇ ನೆಲೆಸಿರುವೆಯಾ ಎಂದು ಕೇಳಿ "ಕೂಹೂ" ಎಂದು ಕೂಗಿದಾಗಲೇ ಆ ಹಕ್ಕಿ ಹಾರಿತು ಎಂದು ಕವಿ ತಿಳಿಸುತ್ತಾರೆ. ಆ ಮುದ್ದಿನ ಹಕ್ಕಿಯ ನೆಲೆಗೆ ಸಂಬಂಧಿಸಿದ ವಿವರಗಳು, ಕವಿಯ ಸೂಕ್ಷ್ಮವೀಕ್ಷಣೆ ಹಾಗೂ ತಾನು ಕಂಡುದ್ದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಲ್ಲ ಸಾಮರ್ಥ್ಯ ಈ ಎಲ್ಲವುಗಳ ಕುರಿತು ಕವಿತೆ ವಿವರಿಸುತ್ತದೆ.

ಕುವೆಂಪು ಅವರು ಪಕ್ಷಿಗಳನ್ನು ಕುರಿತು ಬರೆದಿರುವ ಕವಿತೆಗಳಲ್ಲಿ 'ಮಡಿವಾಳ' ಕವಿತೆ ತುಂಬಾ ವಿಶಿಷ್ಟವಾದದ್ದು. ಈ ಕವಿತೆಯ ಮುಖಾಂತರ ಕವಿಯ ಕಾವ್ಯ ಜೀವನ ಹೇಗೆ ಸಾಗಿದೆ ಎಂಬುದನ್ನು ಗುರುತಿಸಬಹುದು. ಕುವೆಂಪು ಈ ಕವಿತೆಗೆ ಸಂಬಂಧಿಸಿದಂತೆ ಟಿಪ್ಪಣೆ ರೂಪದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ.

"ರೋಗ ಗುಣಮುಖನಾಗಿ ಚೇತರಿಸಿಕೊಳ್ಳುತ್ತಿದ್ದೆ, ಬೆಳಿಗ್ಗೆ ಹೊರಬಂದೆ, ಒಂದು ಹಕ್ಕಿ, ಕರಿಯ ಮತ್ತು ಬಿಳಿಯ ಬಣ್ಣಗಳದ್ದು, ಮಲೆನಾಡಿನಲ್ಲಿ ಅದನ್ನು 'ಹಂಡಹಕ್ಕಿ' ಎಂದೂ ಸಾಹಿತ್ಯದಲ್ಲಿ 'ಮಡಿವಾಳ' ಎಂದೂ ಕರೆಯುತ್ತಾರೆ. ಆಶ್ರಮದ ಒಂದು ಗಿಡದ ಮೇಲೆ ಕುಳಿತು ಸಿಳ್ಳುಹಾಕುತ್ತಿತ್ತು. ನನಗೆ ನಮ್ಮೂರಿನ ಒಂದು ಅರಣ್ಯಕ ಚೇತನವೆ ಹಕ್ಕಿಯಂತೆ ನನ್ನ ಕ್ಷೇಮಸಮಾಚಾರ ವಿಚಾರಿಸಲು ಬಂದಂತಾಗಿ, ಅದನ್ನು ಮಾತಾಡಿಸಿದೆ"[೧] ಕವಿಯ ಮಾತುಗಳಿಂದ ಒಂದು ವಿಚಾರ ಸ್ಪಷ್ಟವಾಗುತ್ತದೆ. ಕವಿ

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ಪುಟ. ೫೩೮.

ಬಯಲುಸೀಮೆಯಲ್ಲಿ ಅನಾರೋಗ್ಯದಿಂದ ಬಳಲಿ, ನಂತರ ಚೇತರಿಸಿಕೊಂಡಾಗ ಈ 'ಮಡಿವಾಳ' ಹಕ್ಕಿಯ ದರ್ಶನದಿಂದ ಕವಿಯಲ್ಲಿ ಉಲ್ಲಾಸಭಾವ ಮೂಡಿತು ಎಂಬುದು ತಿಳಿಯುತ್ತದೆ. ಕುವೆಂಪು ಮೈಸೂರು ಬಯಲು ಸೀಮೆಯಲ್ಲೇ ಇದ್ದರೂ ಅವರ ಮನಸ್ಸು ಮಾತ್ರ ತನ್ನ ತಾಯಿ ಮಡಿಲಾದ ಮಲೆನಾಡಲ್ಲೆ ಕೇಂದ್ರೀಕೃತವಾಗಿತ್ತು ಎಂಬುದು ತಿಳಿಯುತ್ತದೆ. ಕವಿ 'ಮಡಿವಾಳ' ಹಕ್ಕಿಯ ವಿಶೇಷತೆಯನ್ನು ತಿಳಿಸುತ್ತಾರೆ. ಕುವೆಂಪು ಅವರಿಗೆ ನಿಸರ್ಗ ಒಂದು ದಿವ್ಯಧಾರೆ. ಆ ಮಡಿವಾಳ ಹಕ್ಕಿಯನ್ನು ನೋಡಿ ತನ್ನ ಧನ್ಯತೆಯ ಸ್ಮರಣೀಯ ಭಾವವನ್ನು ಕವಿ ಅರ್ಪಿಸುತ್ತಾರೆ.

ಬಂದಿರುವೆ ಎಲ್ಲಿಂದ?
ಸಂದೇಶವಾರಿಂದ (ಮಡಿವಾಳ)
ತಂದಿರುವೆ, ಎಲೆ ಮುದ್ದು ಮಡಿವಾಳ ಹಕ್ಕಿ?
ಹಿಂದಿನಾ ದಿನಗಳಾ......
ನಂದವನು ತಂದಿಹೆಯ?
ಮುಂದಿನಾನಂದವನು ತಂದಿರುವೆ ಏನು?

ಕುವೆಂಪು ತನ್ನ ಊರಾದ ಕುಪ್ಪಳ್ಳಿಯನ್ನು ನೆನೆದು ಹಕ್ಕಿಯ ಆಗಮನದಿಂದ ಸಂತೋಷಗೊಂಡಿದ್ದಾರೆ. ರೋಗದಿಂದ ಗುಣವಾಗಿ ಚೇತರಿಸಿಕೊಳ್ಳುತ್ತಿರುವ ಸಮಯದಲ್ಲಿ ತನ್ನ ಊರಿನವನು ಹೇಗಿದ್ದಾನೆ ಎಂದು ವಿಚಾರಿಸಲು ಬಂದಿದೆ. ನನ್ನ ಮುದ್ದಿನ 'ಮಡಿವಾಳ' ಹಕ್ಕಿ ಎಂದು ಸ್ಮರಿಸಿಕೊಳ್ಳುತ್ತಾರೆ. ಕವಿ ಬಯಲು ಸೀಮೆಯಲ್ಲಿದ್ದರೂ, ಮಲೆನಾಡಿನ ಪರಿಸರ, ಜನಜೀವನ, ಜೀವನಕ್ರಮ ಈ ಎಲ್ಲವುದರ ಮೇಲೆ ಅಭಿಮಾನ ಇಟ್ಟುಕೊಂಡಿದ್ದಾರೆ. ಊರಿನ ಸಮಾಚಾರದ ವಿವರಗಳು ಏನಾದರೂ ಇದೆಯೇ? ಎಲೆ ಪಕ್ಷಿ! ಎಂದು ಕೇಳುತ್ತಾರೆ. ಅಷ್ಟೆ ಅಲ್ಲದೆ ತನ್ನ ಬಾಲ್ಯದ ದಿನಗಳ ಆನಂದವನ್ನು ಏನಾದರೂ ತಂದಿರುವೆಯ ಮಡಿವಾಳ ಹಕ್ಕಿ ಎಂದು ಕೇಳುತ್ತಾರೆ. ಹಕ್ಕಿಯ ಮುಖಾಂತರ ಕವಿ ತನ್ನ ಗುರುದೇವನನ್ನು, ಮಲೆನಾಡಿನ ಪರಿಸರವನ್ನು, ಬಾಲ್ಯದ ದಿನಗಳನ್ನು ಹೀಗೆ ಎಲ್ಲವನ್ನು ಸ್ಮರಿಸಿಕೊಳ್ಳುತ್ತಾರೆ. ಹಾಗೆಯೇ ಕವನ ಮುಂದುವರೆದು ಒಂದು ಮಹತ್ವದ ಭಾವವನ್ನು ಉಂಟುಮಾಡುತ್ತದೆ.

ಸಾರಲೈ ಮಡಿವಾಳ:
ಸೇರಿ ನಾವಿರ್ವರೂ
ಸಾರೋಣ ನಮ್ಮೂರ ಹಾಡುಗಳನಿಲ್ಲಿ!

ಕವಿತೆಯ ಮೊದಲ ಭಾಗದಲ್ಲಿ ಕವಿ ಹಕ್ಕಿಯನ್ನು ಸ್ವಾಗತಿಸುವ ಚಿತ್ರವನ್ನು ನೋಡಬಹುದು. ನಂತರ ಭಾಗದಲ್ಲಿ ಒಂದು ವಿಚಾರದೃಷ್ಟಿಯನ್ನು ನೋಡಬಹುದು.

ಕವಿ ನನ್ನ ಆರೋಗ್ಯವನ್ನು ವಿಚಾರಿಸಲು ಮಲೆನಾಡಿನಿಂದ ಬಂದಿರುವೆ ನೀನು, ಆದ್ದರಿಂದ ನೀನು ಮತ್ತು ಕವಿಯಾದ ನಾನು ಇಬ್ಬರೂ ಸೇರಿ ಮಲೆನಾಡಿನ ಪ್ರಕೃತಿಯನ್ನು, ಮಲೆನಾಡ ಹಾಡುಗಳನ್ನು ಬಯಲುಸೀಮೆಯಲ್ಲಿ ಹರಡೋಣ ಎಂದು ಹೇಳಿ ಇದಕ್ಕೆ ನಿನ್ನ ಸಹಕಾರವಿರಲಿ ಎಂದು ಪ್ರಾರ್ಥಿಸುತ್ತಾರೆ. ಆದ್ದರಿಂದ ಈ ಕವಿತೆ ಉನ್ನತವಾದ ಆಲೋಚನಾಲಹರಿಯಲ್ಲಿ ತೊಡಗಿ, ಸಾರ್ಥಕತೆಯ ಭಾವವನ್ನು ಮೂಡಿಸುತ್ತದೆ ಎಂದು ಹೇಳಬಹುದು. ಹೀಗೆ ಪ್ರಕೃತಿಯ ಒಂದು ಸುಂದರ ಆವರಣದಲ್ಲಿ ಪಕ್ಷಿಸಂಕುಲದ ನಾನಾಬಗೆಯ ಚಟುವಟಿಕೆಗಳನ್ನು ಕವಿ ಚಿತ್ರಿಸಿರುವುದು ಒಂದು ಬಗೆಯಾದರೆ ಪ್ರತ್ಯೇಕವಾಗಿ ಪಕ್ಷಿಗಳನ್ನೇ ಕುರಿತು ಬರೆದ ಕವನಗಳನ್ನು ನೋಡಬಹುದು.

ಕವಿ ಹೀಗೆ ಪ್ರಕೃತಿಯ ಸಾನಿಧ್ಯದಲ್ಲಿ ವಿಶೇಷವಾದ ರಸಾನುಭೂತಿಯನ್ನು ಪಡೆದು, ಅದರ ಅಂತರಂಗದ ಸತ್ವವನ್ನು, ಅದರ ಅನಂತಸೌಭಾಗ್ಯವನ್ನು ಶಬ್ದರೂಪದಲ್ಲಿ ಸೆರೆಹಿಡಿದಿದ್ದಾರೆ. 'ಹೇಳಿದರೆ ಹಾಳಾಗುವುದೊ ಈ ಅನುಭವದ ಸವಿಯು; ಹೇಳದಿರೆ ತಾಳಲಾರನೊ ಕವಿಯು!' ಎಂಬ ಉಭಯಸಂಕಟಕ್ಕೆ ಅವನು ಒಳಗಾಗಿರುವುದು ಉಂಟು. ಹೀಗೆ ಉತ್ತಮವಾದ ಪ್ರಕೃತಿಗೀತೆಗಳಲ್ಲಿ ಅವರ ಪ್ರತಿಭೆ ಸಮರ್ಥವಾಗಿ ಕೆಲಸಮಾಡಿರುವುದನ್ನು ಕಾಣಬಹುದು. ಆಧುನಿಕ ಕನ್ನಡ ಕಾವ್ಯದಲ್ಲಿ ಇಂಥ ಒಂದು ಹೊಸಲೋಕದ ರಸಪರಿಚಯವನ್ನು ಒದಗಿಸಿದ ಕುವೆಂಪು ಅವರು ಕಾವ್ಯಧನ್ಯತೆಯನ್ನು ಸಾಧಿಸಿದ್ದಾರೆ.

ಕುವೆಂಪು ಅವರ ನಿಸರ್ಗಗೀತೆಗಳಲ್ಲಿ ಹಳ್ಳಿ, ಹಳ್ಳಿಯ ಪರಿಸರಕ್ಕೆ ಸಂಬಂಧಿಸಿದ ಕವಿತೆಗಳಿವೆ. ಭಾರತ ಮೂಲತಃ ಹಳ್ಳಿಗಳ ನಾಡು. ಸಾವಿರಾರು ಹಳ್ಳಿಗಳಿಂದ ಕೂಡಿ ಒಂದು ನಾಡಾಗಿದೆ. ಮಾನವನ ಬದುಕಿನಲ್ಲಿ ಆತನ ವಾಸಸ್ಥಾನಕ್ಕೆ ವಿಶಿಷ್ಟತೆಯಿದೆ. ಯಾವುದೇ ಪ್ರದೇಶದ ಜೀವಿಯು ತನ್ನ ಸುತ್ತಲಿನ ಪ್ರದೇಶದಲ್ಲಿ ಜೀವಿಸಬೇಕಾಗುತ್ತದೆ. ಮನುಷ್ಯನ ಜೀವನವೆಂದಾಗ ಅದು ನಗರಜೀವನವೆಂದೇ ತಿಳಿಯುತ್ತೇವೆ. ಆದರೆ ಗ್ರಾಮೀಣ ಜೀವನದಲ್ಲಿಯೂ ಕೂಡ ಮನುಷ್ಯನು ತನ್ನ ವಿಕಾಸವನ್ನು ಕಾಣುತ್ತಿದ್ದಾನೆ ಎಂದು ಹೇಳಬಹುದು. ನಗರ, ಹಳ್ಳಿ ಎಂದು ವಿಭಾಗಿಸಿರುವುದು ಅನುಕೂಲದ ಸೌಕರ್ಯಕ್ಕೆ ಹೊರತು ಮತ್ತಾವ ಕಾರಣಕ್ಕಾಗಲ್ಲ. ನಮ್ಮ ದೇಶದ ಬಹಳಷ್ಟು ದೊಡ್ಡ ಮಹನೀಯರು ಹುಟ್ಟಿರುವುದು ಹಳ್ಳಿಗಾಡಿನಲ್ಲಿ. ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿ ವಿದ್ಯಾಭ್ಯಾಸ ಪಡೆದು ನಗರ ಪ್ರದೇಶಗಳ ಕಡೆಗೆ ಆಕರ್ಷಿತರಾಗಿ ತಮ್ಮ ಸಾಧನೆಯನ್ನು ಮಾಡಿದ್ದಾರೆ. ಆದ್ದರಿಂದ 'ಹಳ್ಳಿ'ಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಶ್ರೀ ಕುವೆಂಪು ಅವರು ತನ್ನ ಮಲೆನಾಡಿನ ಸುಂದರವಾದ ಹಳ್ಳಿಗಳನ್ನು ತನ್ನದೇ ರೀತಿಯಲ್ಲಿ ವರ್ಣಿಸುತ್ತಾರೆ. ಅಷ್ಟೇ ಅಲ್ಲದೆ ಹಳ್ಳಿಯ ಬದುಕು, ಜನಜೀವನ, ಹಳ್ಳಿಯಲ್ಲಿರುವ

ವನಪ್ರದೇಶ ಈ ಎಲ್ಲವನ್ನು ಕುರಿತು ಕವಿ ವರ್ಣಿಸುತ್ತಾರೆ. ತನ್ನ ಮಲೆನಾಡ ಹಳ್ಳಿಯಿಂದ ಆಕರ್ಷಿತರಾಗಿ, ಹಳ್ಳಿಗಳನ್ನು ವರ್ಣಿಸುತ್ತಾರೆ.

ಕುವೆಂಪು ಅವರ 'ಹಳ್ಳಿ' ಕವಿತೆ ವಿಶಿಷ್ಟವಾಗಿದೆ. ಈ ಕವಿತೆಯಲ್ಲಿ ಕುವೆಂಪು ಹಳ್ಳಿಯಲ್ಲಿರುವ ನಿಸರ್ಗ, ಹಳ್ಳಿಯ ಬದುಕು ಹಾಗೂ ಹಳ್ಳಿಯ ಬದುಕು ಎಷ್ಟು ಹಿತಕರವಾಗಿರುತ್ತದೆ ಎಂಬುದೆಲ್ಲವನ್ನು ವಿವರಿಸುತ್ತಾರೆ. ಕುವೆಂಪು ತನ್ನ ಸಾಹಿತ್ಯದ ಉದ್ದಕ್ಕೂ ಜೀವನದ ಬಗ್ಗೆ ಚರ್ಚಿಸುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿನ ಸ್ಥಿತಿ ಯಾವ ಮಟ್ಟದಲ್ಲಿದೆ ಎಂಬುದನ್ನು ಅವರು ಗದ್ಯದ ಬರವಣಿಗೆಯಲ್ಲಿ ಹೇಳಿದ್ದಾರೆ.

ಬಳ್ಳಿಯ ಹೂವಿಂ ಬೆಳ್ಳಗೆ ಕಾಣುವ
ಹಳ್ಳಿಯೆ ಹಳ್ಳಿಯೆ ನೀ ಚೆಂದ!
ಹುಲ್ಲಿನ ಹಸುರಿಂದೆಲ್ಲಿಯು ಮಿರುಗುವ (ಹಳ್ಳಿ)
ಹಳ್ಳಿಯೇ ನೀ ಬಲು ಆನಂದ!

ಈ ಕವಿತೆ ಭಾವಗೀತೆಯ ಸ್ವರೂಪವನ್ನು ಹೊಂದಿದೆ. ನಾದ-ಲಯ ಮಾಧುರ್ಯ-ದಿಂದ ಈ ಕವಿತೆ ಕೂಡಿದೆ. ಪ್ರಸ್ತುತ ಕವಿತೆಯಲ್ಲಿ ಹಳ್ಳಿಯ ಸೌಂದರ್ಯವನ್ನು ವರ್ಣಿಸುತ್ತಾರೆ. ಕವಿ ಹಳ್ಳಿಯನ್ನು ಉನ್ನತವಾದ ನೆಲೆಯಲ್ಲಿ ಕಂಡು ಅದರ ವಿವರಗಳನ್ನು ಕೊಡುತ್ತಾರೆ. ಈ 'ಹಳ್ಳಿ' ಕವಿತೆ ಮುಖಾಂತರ ಕವಿ ಗ್ರಾಮಾಂತರ ಜೀವನದ ಸೊಗಸನ್ನು ಹೇಳುತ್ತಾರೆ. ಕವಿಯ ನಿಸರ್ಗ ಪ್ರೀತಿಯ ತಂಗುದಾಣವೇ 'ಹಳ್ಳಿ'ಯಾಗಿದೆ. ಹಳ್ಳಿಗಾಡಿನ ಬದುಕಿನ ವಿಶೇಷತೆ ಏನೆಂಬುದನ್ನು ಕವಿ ತಿಳಿಸಿಕೊಡುತ್ತಾರೆ. ಕವಿ ತನ್ನ ಬದುಕಿನಲ್ಲಿ 'ಹಳ್ಳಿಗೆ' ಉನ್ನತವಾದ ಸ್ಥಾನವನ್ನು ಕೊಟ್ಟಿದ್ದಾರೆ. ಸದಾ ಹಸಿರಿನಿಂದ ಕೂಡಿರುವ ಹಳ್ಳಿ ಕವಿಯ ಪಾಲಿಗೆ ಉಲ್ಲಾಸಭರಿತವಾದ ಪ್ರದೇಶವಾಗಿದೆ. ಕವಿಯ ಪ್ರಕೃತಿ ಪ್ರೇಮ ಈ ಕವಿತೆಯಿಂದ ತಿಳಿಯುತ್ತದೆ. ಹಳ್ಳಿಯ ದಾರಿಯಲ್ಲಿ ಮರದ ಪೊಟರೆಯಲ್ಲಿ ಮೊಟ್ಟೆಯನಿಡುವ ಮಡಿವಾಳ, ಕೋಗಿಲೆ, ಚಿಟ್ಟೆ ಎಲ್ಲವೂ ಬೆಟ್ಟದ ಮೇಲಿನಿಂದ ತನ್ನ ಇಂಪಾದ ಗಾನದಿಂದ ಕವಿಯ ಮನಸ್ಸನ್ನು ಆಕರ್ಷಿಸಿದವು ಎಂದು ವರ್ಣಿಸುತ್ತಾರೆ. ಕವಿ ಹಳ್ಳಿಯ ಸಹಜ ಪರಿಸರವನ್ನು ವರ್ಣಿಸುತ್ತಾರೆ. ಹೊಲ, ಕೆರೆ, ಪ್ರಾಣಿ ಪಕ್ಷಿಗಳು ಈ ಎಲ್ಲವೂ ತನ್ನ ಸಹಜ ಸೌಂದರ್ಯದಿಂದ ಕಂಗೊಳಿಸಿದವು ಎಂದು ಕವಿ ಹೇಳುತ್ತಾರೆ. ಹಳ್ಳಿಯ ಬದುಕಿನಲ್ಲಿ ದನಕರುಗಳ ಪಾತ್ರದೊಡ್ಡದು. ಆದ್ದರಿಂದ ಕವಿ ಸೂರ್ಯನು ಮೂಡಿದ ನಂತರ ಹಸಿರಿನ ಬಯಲಲ್ಲಿ ಮೇಯುವ ದನಕರುಗಳ ಚಿತ್ರವನ್ನು ಕೊಡುತ್ತಾರೆ.

ಕೊಳಲನು ಊದುತ ಅಲರನು ಕೀಳುತ
ಮಲೆಯೊಳು ಮರೆವನು ಗೋಪಾಲ;

ಕೊಳಲಿನ ಗಾನವ ತಳಿರೊಳು ಕೇಳುತ
ಹೊಲದೊಳು ಮೆರೆವನು ಪಿಕಲೋಲ

ಕವಿ ಗೋಪಾಲನಾದ ಕೃಷ್ಣನ ಬಗ್ಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ. ಹಳ್ಳಿಯ ಬದುಕಿನಲ್ಲಿ ದನಕರುಗಳು ಎಷ್ಟೂ ಅವಶ್ಯಕವೊ ಅಷ್ಟೇ 'ಗೋಪಾಲ'ನು ಸಹ ಅವಶ್ಯಕನಾಗಿದ್ದಾನೆ ಎನ್ನುತ್ತಾರೆ. ಮಲೆನಾಡಿನ ಹಳ್ಳಿಯಲ್ಲಿ ಕೊಳಲನ್ನು ಊದುಕೊಂಡು ದನಕರುಗಳನ್ನು ಸಲಹಿಕೊಂಡು ಗೋಪಾಲ ಇರುವನು ಎಂದು ಹೇಳಿ, ಆ ಗೋಪಾಲನ ಕೊಳಲಿನ ದನಿಯನ್ನು ಇಡೀ ಹಳ್ಳಿಯ ಜೀವಗಳು ಕೇಳಿ ಆನಂದಿಸುತ್ತವೆ ಎನ್ನುತ್ತಾರೆ. ಹಾಗೆ ಕವಿತೆ ಮುಂದುವರೆಯುತ್ತದೆ. ಗ್ರಾಮಾಂತರ ಬದುಕಿನಲ್ಲಿ ಪ್ರಾಣಿ ಪಕ್ಷಿಗಳೇ ಸರ್ವಸ್ವ. ಪ್ರಾಣಿಪಕ್ಷಿಗಳು ತಮ್ಮ ಸಹಜತೆಯಿಂದಲೇ ಮಾನವನ ಮನಸ್ಸನ್ನು ಆಕರ್ಷಿಸುತ್ತವೆ. ಅಷ್ಟೇ ಅಲ್ಲ ಪ್ರಕೃತಿಯ ಸೊಬಗು ಆ ಪ್ರಾಣಿಪಕ್ಷಿಗಳ ಚೆಲುವಿನಲ್ಲಿ ಅಡಗಿರುತ್ತದೆ ಎಂದು ಕವಿ ವಾದಿಸುತ್ತಾರೆ. ಕವಿಗೆ ಹಳ್ಳಿಯೇ ಸ್ಫೂರ್ತಿ. ಅಲ್ಲದೆ ತನ್ನ ಜೀವ ಮಲೆನಾಡಿನಲ್ಲಿ ಉದಯಿಸಿದ್ದಕ್ಕೆ ಕವಿ ದೇವರನ್ನು ಸ್ಮರಿಸಿಕೊಳ್ಳುತ್ತಾರೆ. ಕಾಡಿನ ಸಮೂಹದಲ್ಲಿ ಪಕ್ಷಿಗಳ ಚಿಲಿಪಿಲಿ ಗಾನವನ್ನು ಕೇಳುವ ಹಳ್ಳಿಯೇ ನೀನು ಬಲುಸುಂದರ! ಎಂದು ಕವಿ ವರ್ಣಿಸುತ್ತಾರೆ.

ಅಂದಿನ ಬಾಲನು ಇಂದಿಗೂ ನಿನ್ನನು
ಎಂದಿಗು ನೆನೆವನು, ಓ ಹಳ್ಳಿ!
ಮುಂದೆಯು ನಿನ್ನೊಳು ಅಂದಿನ ಕಂದನು

ಕವಿ ಕೃತಜ್ಞತೆಯ ರೂಪದಲ್ಲಿ ಹಳ್ಳಿಯ ಬಗ್ಗೆ ತನಗಿರುವ ಮುಗ್ಧತೆಯನ್ನು ವ್ಯಕ್ತಪಡಿಸುತ್ತಾರೆ. ಕುವೆಂಪು ಮಗುವಿನ ಸಹಜ ಮುಗ್ಧತೆಯಿಂದ ತನ್ನ ಹಳ್ಳಿಯೊಂದಿಗೆ ಸಂವಹನ ನಡೆಸುತ್ತಾರೆ. ಕವಿ ಬಾಲ್ಯದ ದಿನಗಳನ್ನು ನೆನೆದುಕೊಂಡು, ಹಳ್ಳಿಯ ಬದುಕೆ ತನಗೆ ಬಹಳ ಆನಂದವನ್ನು ನೀಡುತ್ತದೆ. ಆದ್ದರಿಂದ ಹಳ್ಳಿಯನ್ನು ಎಂದಿಗೂ ಮರೆಯುವುದಕ್ಕೆ ಸಾಧ್ಯವಿಲ್ಲ. ಕವಿ ಈ ಕವಿತೆಯನ್ನು ರಚಿಸಿರುವುದು ಬಯಲುಸೀಮೆಯಲ್ಲಿ : ನಗರ ಪ್ರಪಂಚದಲ್ಲಿರುವ ಅವರ ಮನಸ್ಸನ್ನು 'ಹಳ್ಳಿ' ಆಕ್ರಮಿಸಿಕೊಂಡಿದೆ. ಹಳ್ಳಿಯ ಬಗ್ಗೆ ತನ್ನ ಕೃತಜ್ಞತೆಯನ್ನು ಅರ್ಪಿಸುತ್ತಿದ್ದಾರೆ.

ಕಳ್ಳಿಯ ಹೂವಿಂ ಬೆಳ್ಳಗೆ ಮಿರುಗುವ
ಹಳ್ಳಿಯೆ ನಿನ್ನಂ ನಾ ಬಿಡೆನು:
ಬೆಳ್ಳಿಯ ಹೂವಿಂದೆಲ್ಲಿಯು ಶೋಭಿಪ
ಹಳ್ಳಿಯೆ ನಿನ್ನಂ ನಾ ಬಿಡೆನು!

ಈ ಕವಿತೆಯಿಂದ ಹಲವಾರು ವಿಚಾರಗಳು ಸ್ಪಷ್ಟವಾಗುತ್ತವೆ. ಹಳ್ಳಿಯ ಪರಿಸರದಲ್ಲೇ ಬೆಳೆದು, ಬದುಕಿ ಅಲ್ಲೆ ಕೊನೆಯತನಕ ಬದುಕುವುದೇ ಏಕೈಕ ಗುರಿ ಎನ್ನುತ್ತಾರೆ. ಹೂವಿನ ಗುಂಪಲ್ಲಿ ದೇವರನ್ನು ತೋರುವ ಹಳ್ಳಿಯೇ ನೀನು ಪಾವನ. ಆದ್ದರಿಂದ ನೀನು ಆನಂದಮೂರ್ತಿ ಎಂದು ವರ್ಣಿಸುತ್ತಾರೆ. ಕವಿ ಹಳ್ಳಿಯೊಂದಿಗೆ ತನ್ನ ಮಧುರವಾದ ಸಂಬಂಧವನ್ನು ಇಟ್ಟುಕೊಂಡಿರುವುದು ಈ ಕವಿತೆಯಿಂದ ತಿಳಿಯುತ್ತದೆ. ಹಳ್ಳಿಯ ಶ್ರೀಮಂತಿಕೆಯನ್ನು ಹೇಳುತ್ತಲೇ, ಅದರ ಚೆಲುವನ್ನು ಸಹ ಕವಿ ವರ್ಣಿಸುತ್ತಾರೆ. 'ಹಳ್ಳಿಯೇ ನಿನ್ನಂ ನಾ ಬಿಡೆನು!' ಎಂಬ ಸಾಲು ಕವಿಯ ಬದುಕಿಗೆ ಸಂಬಂಧಪಟ್ಟದ್ದಾಗಿದೆ. ತಾನು ಹುಟ್ಟಿ ಬೆಳೆದ ಪರಿಸರದ ಬಗ್ಗೆ ಹಾಗೂ ಅಲ್ಲಿಗೆ ತನ್ನ ಮನಸ್ಸು ಮರುಳುತ್ತಿದೆ ಎಂಬ ಸೂಚನೆಗಳಿವೆ. ಈ ಸಾಲು 'ಹೋಗುವೆನು ನಾ' ಕವಿತೆಗೆ ಮೂಲಸ್ಫೂರ್ತಿಯಾಗಿರಬಹುದು.

ಹೀಗೆ ಕುವೆಂಪು ಹಳ್ಳಿ ಕುರಿತು ಭರವಸೆಯ ಮಾತನ್ನು ಹೇಳುತ್ತಲೇ ತನ್ನ ಕೊನೆಯ ಉದ್ದಕ್ಕೂ ಹಾಗೆಯೇ ನಡೆದುಕೊಂಡಿರುವುದನ್ನು ಇಡೀ ಕಾವ್ಯಜೀವನದ ಉದ್ದಕ್ಕೂ ನೋಡಬಹುದು.

ಪ್ರಕೃತಿಯ ನಾನಾ ಮುಖಗಳಲ್ಲಿ ಹೀಗೆ ದಿವ್ಯಾನುಭವವನ್ನು ಪಡೆಯುವ ತನ್ಮಯತೆಯ ಆನಂದದಲ್ಲಿರುವ ಕವಿಗೆ ಪ್ರಕೃತಿಯ ಯಾವ ವಸ್ತುವೂ ಸಣ್ಣದಾಗುವುದಿಲ್ಲ. ಸಾಮಾನ್ಯವಾಗುವುದಿಲ್ಲ. ಕವಿಯ ಆತ್ಮಕಥೆಯಲ್ಲಿ ಪ್ರಕೃತಿಗೆ ಸಂಬಂಧಿಸಿದಂತೆ ಕೆಲವೊಂದು ಬಿಡಿ ಕವಿತೆಗಳಿವೆ. 'ಚಂದ್ರನು', 'ಅರುಣೋದಯ', 'ಬೈಗುಗಗನ', ಹೊಳೆಯರೆಯ ಮೇಲೆ', ತಾರೆಗಳ ದಿಬ್ಬಣ, ಪಾಳುಮನೆ ಮೊದಲಾದವು.

'ಚಂದ್ರನು' ಕವಿತೆ ಸರಳವಾಗಿದೆ. ಆದರೆ ಕವಿ 'ಚಂದ್ರ'ನನ್ನು ಕುರಿತು ವರ್ಣಿಸುವುದರಲ್ಲಿ ಅದ್ವೈತಿ ನಿಲವನ್ನು ವ್ಯಕ್ತಪಡಿಸುತ್ತಾರೆ. ಈ ಕವನದಲ್ಲಿ ಕವಿ ಚಂದ್ರನನ್ನು ಕುರಿತು ಹಾಡಿದ್ದಾರೆ. ಚಂದ್ರನ ದರ್ಶನಾ ಆನಂದದಿಂದ ಒಂದು ಸಾರ್ವಭೌಮ ಸುಖ ಹೇಗಿದೆ ಎಂಬುದನ್ನು ಕಾವ್ಯರಸಿಕರು ಈ ಕವಿತೆಯಿಂದ ತಿಳಿಯಬಹುದು. ಸೌಂದರ್ಯದ ಸಂಕೇತವಾದ ಚಂದ್ರನ ಉದಯ ತುಂಬ ಚೇತೋಹಾರಿಯಾದದ್ದು, ವಿಸ್ಮಯಗೊಳಿಸುವಂತದು. ಚಂದ್ರನನ್ನು ಕಂಡಾಗ ಉಂಟಾಗುವ ಮನೋರಂಜನೆ ಮಾತ್ರವಲ್ಲ, ಕ್ಷಣಕ್ಷಣಕ್ಕೂ ಉಂಟಾಗುವ ಕುತೂಹಲ ಹಾಗೂ ಸಂತೋಷ ಸಂಭ್ರಮಗಳು ಇಲ್ಲಿ ವ್ಯಕ್ತವಾಗಿವೆ. ಇದು ತಾಯಿ ಹಾಗೂ ಮಗುವಿನ ನಡುವೆ ನಡೆಯುವ ಸಂಭಾಷಣೆಯ ಪದ್ಯವಾಗಿದೆ. ತಾಯಿ ನಿಸರ್ಗದಲ್ಲಿರುವ ಚಂದ್ರ, ಆಕಾಶ, ತಾರೆ, ಈ ಎಲ್ಲವನ್ನು ನೋಡು ಬಾ ಮಗುವೆ ಎನ್ನುತ್ತಾಳೆ. ತಾಯಿ ತನ್ನ ಮಗುವಿಗೆ ಇಡೀ ನಿಸರ್ಗದ ಪರಿಚಯ ಮಾಡಿಕೊಡುತ್ತಾಳೆ.

ಮೇಘದ ತರಂಗದೊಳು
ಸಾಗುತಿಹ ಭೈತ್ರವನು
ನೋಡು ಬಾ ಬಾಲನೇ!!

ಕವಿಯ ಕಣ್ಣಿಗೆ ಆಕಾಶ ತರಂಗದಂತೆ ಕಾಣುತ್ತದೆ. ಚಂದ್ರನು ಆಕಾಶವೆಂಬ ಹಡಗಿನ ಮೂಲಕ ತರಂಗದಂತೆ ಸಾಗುತ್ತಿರುವ ದೃಶ್ಯವನ್ನು ಕೊಡುತ್ತಾರೆ. ಈ ಪ್ರಕೃತಿಯನ್ನು ಸೃಷ್ಟಿಸಿರುವ ದೇವನು ಬರುತ್ತಿದ್ದಾನೆ. ಆದ್ದರಿಂದ ಅವನನ್ನು ನೋಡು ಬಾ ಎನ್ನುತ್ತಾರೆ. ಕವಿ ಪ್ರಕೃತಿಯ ಸಹಜವಾದ ದಿನನಿತ್ಯದ ಬದಲಾವಣೆಯನ್ನು ಗಮನಿಸಿ ಬಾಲಕನಿಗೆ ಹೇಳುತ್ತಿರುವುದು. ಚಂದ್ರನು ತರಂಗದಂತೆ ಕಾಣುತ್ತಿರುವ ದೃಶ್ಯ, ನಕ್ಷತ್ರಗಳು ಭೂಮಿಯನ್ನು ಇಣುಕಿ ನೋಡುವ ರೀತಿ, ಈ ಎಲ್ಲವನ್ನು ಸೃಷ್ಟಿಸಿರುವ ಭಗವಂತ ಬರುತ್ತಿದ್ದಾನೆ ಎಂದು ಕವಿ ಹೇಳುತ್ತಾರೆ.

ಕುವೆಂಪು ಅವರ 'ಅರುಣೋದಯ' ಕವಿತೆ ತುಂಬಾ ಪುಟ್ಟ ಪದ್ಯವಾಗಿದೆ. ಈ ಕವಿತೆಯಲ್ಲಿ ವ್ಯಕ್ತವಾಗುವ ಧೋರಣೆಯು ಅವರ ಇಡೀ ಕಾವ್ಯದ ಉದ್ದಕ್ಕೂ ಹರಡಿದೆ. ಕುವೆಂಪು ಏಕಮುಖವಾಗಿ ಯೋಚಿಸದೆ ಅದ್ವೈತಿಯಾಗಿ ಆಲೋಚಿಸುತ್ತಾರೆ.

ಅರುಣೋದಯವೇ ಅರುಣೋದಯವೇ!
ಕರುಣಾಸಾಗರನೆಳನಗುವೇ!
ಗಿರಿಗಳ ಶಿಖರದಿ ಮೆರೆಯುವ ದಯವೇ! (ಅರುಣೋದಯ)
ಪರದಂತೆ ಧರೆಯೊಳು ಮಿರುಗುವೇ!!
ಅರುಣೋದಯವೇ ಅರುಣೋದಯವೇ!
ಅರಳುವ ಪುಷ್ಪದಿ ಪರಮಪುರುಷನ ತೋರುವೇ!!

ಸೂರ್ಯೋದಯದ ಮೊದಲು ಕಾಣಿಸಿಕೊಳ್ಳುವ ಕೆಂಪುಬೆಳಕೆ ಹೂವಿಗೆ ಕಿರಣ ತುಂಬಿ ಭಗವಂತನನ್ನು ಕಾಣಿಸಿತು ಎಂದು ಅಭಿಪ್ರಾಯಪಡುತ್ತಾರೆ. ಕವಿ ನಿಸರ್ಗವನ್ನು ತನ್ನ ಉಸಿರಾಗಿಸಿಕೊಂಡಿದ್ದಾರೆ. ಜತೆಗೆ ಪ್ರಕೃತಿಯ ಸೌಂದರ್ಯದಲ್ಲೇ ದೇವರನ್ನು ಕಾಣುತ್ತಾರೆ. ಹೀಗೆ ಕವಿ ಕಾಣುವ ವಿಧಾನ ಅಂದಿನ ನವೋದಯ ಸಾಹಿತ್ಯ ಸಂದರ್ಭಕ್ಕೆ ನೂತನವಾಗಿದ್ದರೂ ಮೌಲ್ಯಯುತವಾಗಿದೆ. ಆದ್ದರಿಂದ ದೇವರಕಲ್ಪನೆ ವಿಶಿಷ್ಟವಾಗಿದೆ, ವಿಭಿನ್ನವಾಗಿದೆ. ಈ ಕವಿತೆಯ ಮುಖಾಂತರ ಕವಿ ಕಾವ್ಯಜಗತ್ತಿನಲ್ಲಿ ನೂತನ ದಾರಿಯನ್ನು ಪ್ರಾರಂಭಿಸಿದರು ಎನ್ನಬಹುದು. ಪಾಶ್ಚಾತ್ಯರು ನಿಸರ್ಗಕ್ಕೆ ಕೊಟ್ಟಿರುವ ಸ್ಥಾನವನ್ನು ಕವಿ ಪ್ರಶಂಸಿಸುತ್ತಾರೆ. ಕುವೆಂಪು ಅವರ ಮಾತು ಹೀಗಿದೆ. "ಕನ್ನಡ ಸಾಹಿತ್ಯವು ಪ್ರಕೃತಿಯನ್ನು ಸೌಂದರ್ಯಕ್ಕಾಗಿ ಮಾತ್ರ ಪುರಾಣ ಕಾವ್ಯಗಳ ಕೆಲವು ಪದ್ಯಗಳಲ್ಲಿ ವರ್ಣಿಸುತ್ತದೆಯೆ ಹೊರತು ಅದಕ್ಕಿಂತ ಮೇಲುಮಟ್ಟದ ಸ್ಥಾನವನ್ನು ಎಂದು ಕೊಟ್ಟಿಲ್ಲ.

ನಿಸರ್ಗವನ್ನು ಇಂಗ್ಲಿಷ್ ಕವಿಗಳು ಉಪಯೋಗಿಸುವ ರೀತಿಯಲ್ಲಿ ಬಳಸಬೇಕೆಂಬುದೆ ನನ್ನ ಮಹಾದಾಶೆ"[೧] ಎಂದು ಹೇಳುವ ಮಾತಿನಿಂದ ಒಂದು ವಿಚಾರ ಸ್ಪಷ್ಟವಾಗುತ್ತದೆ. ಕವಿ ಪ್ರಕೃತಿಗೆ ಕೊಟ್ಟಿರುವ ಸ್ಥಾನ ಎಂತಹದ್ದು ಎಂಬುದು ಅರಿವಾಗುತ್ತದೆ.

ಕವಿ ಕನ್ನಡ ಕಾವ್ಯ ಸಂದರ್ಭದಲ್ಲಿ ನಿಸರ್ಗವನ್ನು ಪೂರ್ಣಪ್ರಮಾಣದಲ್ಲಿ ಬಳಸಲಿಲ್ಲ ಎಂದು ಪ್ರಶ್ನಿಸುತ್ತಾರೆ. 'ನಿಸರ್ಗಕ್ಕೆ' ಪುರಾತನಕಾಲದಲ್ಲಿ ಕೊಟ್ಟಿರುವ ಪ್ರಾಶಸ್ತ್ಯವನ್ನು ಪ್ರಶ್ನಿಸಿ ತನ್ನದೇ ರೀತಿಯಲ್ಲಿ ನಿಸರ್ಗಕ್ಕೆ ಸಂಬಂಧಿಸದಂತೆ ಮರುಸೃಷ್ಟಿ ನೀಡುತ್ತಾರೆ. ಈ ಕವಿತೆಯಿಂದ ಕವಿಯ ದೃಷ್ಟಿ ಧೋರಣೆಗಳು ತಿಳಿಯುತ್ತವೆ. ನಿಸರ್ಗ ಸೌಂದರ್ಯಕ್ಕೆ ಮಾತ್ರ ಪ್ರಾಚೀನ ಕವಿಗಳು ಮಾರುಹೋಗಿ ವರ್ಣಿಸಿದ್ದಾರೆಯೇ ಹೊರತು ಒಂದು ರೀತಿಯ ಭಾವಾಭಿವ್ಯಕ್ತಿ ಇಲ್ಲ. ಆದ್ದರಿಂದ ತನ್ನ ಕಾವ್ಯದಲ್ಲಿ 'ಪ್ರಕೃತಿ'ಗೆ ಉನ್ನತವಾದ ಸ್ಥಾನವನ್ನು ಒದಗಿಸಬೇಕು ಎಂದು ತಮ್ಮ ಮಹದಾಶೆಯನ್ನು ವ್ಯಕ್ತಪಡಿಸುತ್ತಾರೆ.

'ಬೈಗುಗಗನ' ಕವಿತೆ ತನ್ನ ಒಡಲಿನಲ್ಲಿಯೇ ಮಹತ್ತರವಾದ ಭಾವವನ್ನು ಹೊಂದಿದೆ.

> ಯಾರ ಮೋಹಿಸಲೆಂದು
> ಬೈಗಿನಾಕಾಶದೊಳು (ಬೈಗುಗಗನ)
> ಚಿತ್ರ ಬರೆಯುವೆ ನೀನು,
> ಎಲೆ ಚಿತ್ರಗಾರ?

ಕವಿ ಪ್ರಕೃತಿಯಲ್ಲಿನ ಆಕಾಶವನ್ನು ವರ್ಣಿಸುತ್ತಾರೆ. ಈ ರೀತಿಯ ನಿಸರ್ಗ ಸೌಂದರ್ಯ ವನ್ನು ಸೃಷ್ಟಿಸಿದವನನ್ನು 'ಎಲೆ ಚಿತ್ರಗಾರ' ಎಂದು ವಿಶೇಷತೆಯಿಂದ ಕೂಗುತ್ತಾರೆ. ಕವಿಯ ಮನವನ್ನೆಲ್ಲ ಆವರಿಸಿದ್ದ ತಾತ್ವಿಕ ಚಿಂತನೆ, ಜಿಜ್ಞಾಸೆ, ಆತ್ಮಾನುಸಂಧಾನ ಇವುಗಳ ಮಧ್ಯೆ ಆತನ ಸಹಜ ಪ್ರಕೃತಿ ವೀಕ್ಷಣೆ ಸಾಗಿರುವುದನ್ನು ಕಾಣಬಹುದು. ಕವಿ ಇಡೀ ನಿಸರ್ಗಸೌಂದರ್ಯವನ್ನು ನೋಡಿ ಬೆರಗಾಗಿ ಆಕಾಶದಲ್ಲಿರುವ ನಕ್ಷತ್ರಗಳ ಚಿತ್ರಗಳನ್ನು ಬರೆಯುವ ನೀನು ಎಷ್ಟು ಸುಂದರ ಎಂದು ಹೊಗಳುತ್ತಾರೆ.

ಕುವೆಂಪು ಬಯಲುಸೀಮೆ ಮೈಸೂರಿನಲ್ಲಿ ವಾಸಿಸುತ್ತಿದ್ದಾಗ ಚಾಮುಂಡಿಬೆಟ್ಟದ ಮೆಟ್ಟಿಲುಗಳಲ್ಲಿ, ಮೈಸೂರು ನಗರದಲ್ಲಿ ಒಟ್ಟಿಗೆ ವಿದ್ಯುದ್ದೀಪಗಳೆಲ್ಲ ಹೊತ್ತಿಕೊಂಡಾಗ ಬರೆದ ಕವಿತೆಯೇ 'ತಾರೆಗಳ ದಿಬ್ಬಣ'. ಕುವೆಂಪು ನಿಸರ್ಗಸೃಷ್ಟಿಯಲ್ಲಿರುವ ಎಲ್ಲಾ ಜೀವಸಂಕುಲವನ್ನು ವರ್ಣಿಸುತ್ತಾರೆ. ಒಂದೊಂದು ಸಣ್ಣವಸ್ತುವಿನಲ್ಲಿಯೂ ಕೂಡ

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ಪುಟ. ೨೮೨.

ಒಂದು ಮಹತ್ವತೆಯನ್ನು ಗುರುತಿಸುತ್ತಾರೆ. ಆದರೆ ಕೃತಕವಾದ ವಿದ್ಯುದ್ದೀಪಗಳು ಹೊತ್ತಿಕೊಂಡಾಗ ಕೂಡ ಕವಿ ಮನಸ್ಸು ಪುಲಕಿತವಾಗುತ್ತದೆ. ಆದ್ದರಿಂದ ಕವಿ ಸೌಂದರ್ಯವನ್ನು ಏಕಮುಖದಿಂದ ನೋಡದೆ ಬಹುಮುಖಾ ಪ್ರತಿಭೆಯಿಂದ ನಿಸರ್ಗವನ್ನು ವರ್ಣಿಸುತ್ತಾರೆ.

ತಾರೆಗಳ ದಿಬ್ಬಣವು
ಗಗನದಿಂದೈತಂದು
ಬೆಟ್ಟದುದಿಯಲಿ ತಳುವಿ (ತಾರೆಗಳ ದಿಬ್ಬಣ)
ಸೋಪಾನಗಳನ್ನಿಳಿದು
ತಪ್ಪಲಲಿ ಮೇಳವಿಸಿ
ಕವಿದು ಕಿಕ್ಕಿರಿದಂತೆ;

ಕುವೆಂಪು ನಿಸರ್ಗ ಕವಿ, ಪ್ರಕೃತಿ ಕವಿ ಎಂದು ಹೇಳುವ ಪರಿಪಾಠ ನಮ್ಮಲ್ಲಿದೆ. ಆದರೆ ಕವಿ ನಿಸರ್ಗವನ್ನು ವರ್ಣಿಸುವುದರ ಜತೆಗೆ ನಿಸರ್ಗದಲ್ಲಿರುವ ಸೃಷ್ಟಿಚೈತನ್ಯ ಶಕ್ತಿಯನ್ನು ಗುರುತಿಸುತ್ತಾರೆ. ಅದರಂತೆಯೇ ಪ್ರಸ್ತುತ ಕವಿತೆಯಲ್ಲಿ ಕವಿ ಬೆಟ್ಟದ ಮೆಟ್ಟಿಲುಗಲಲ್ಲಿ ಹಾಗೂ ಮೈಸೂರು ನಗರದಲ್ಲಿ ಒಟ್ಟಿಗೆ ವಿದ್ಯುದ್ದೀಪಗಳೆಂಬ ತಾರೆಗಳು ಹೊತ್ತಿಕೊಂಡಾಗ ಅವು ಏನು ದಿಬ್ಬಣಕ್ಕಾಗಿಯೇ ಹುಟ್ಟಿಕೊಂಡಿವೆ ಎಂದು ವರ್ಣಿಸುತ್ತಾರೆ. ಕವಿ ವಿದ್ಯುದ್ದೀಪಗಳ ಪ್ರಖರವಾದ ಬೆಳಕನ್ನು ನೋಡಿ ಮನಸೊತು, ಬೆಟ್ಟದ ತುದಿಯಲ್ಲಿ ಅವು ಮನೋಹರವಾಗಿ ಕಾಣುತ್ತಿರುವ ದೃಶ್ಯವನ್ನು ನೋಡಿ ಹರ್ಷ ವ್ಯಕ್ತಪಡಿಸುತ್ತಾರೆ. ವಿದ್ಯುದ್ದೀಪಗಳು ಸಾಲಾಗಿ, ಮಿಣುಕುಹುಳಗಳಂತೆ ಇರುವುದನ್ನು ನೋಡ ಬೆರಗಾಗಿ, ಬಾ ನೋಡು ಎಂದು ಕರೆಕೊಡುತ್ತಾರೆ. ಆದ್ದರಿಂದ ಒಂದು ಪುಟ್ಟ ಪದ್ಯವಾದರೂ ತನ್ನ ಸೊಬಗಿನಿಂದ ಕೂಡಿದೆ. ಕವಿಗೆ ಪ್ರಕೃತಿಸೌಂದರ್ಯದ ಆರಾಧನೆ ಎನ್ನುವುದು ಒಂದು ಆಟವಲ್ಲ, ತಮಾಷೆಯಲ್ಲ, ಅನುಕರಣ ಅಲ್ಲ.

ಕವಿಯ 'ನೆನಪಿನ ದೋಣಿಯಲ್ಲಿ' ಕೃತಿಯಲ್ಲಿ 'ಪಾಳುಮನೆ' ಎಂಬ ಕವಿತೆ ವಿಶಿಷ್ಟವಾಗಿದೆ. ಪ್ರಕೃತಿಯ ಒಂದು ಮುಖ ಸುಕೋಮಲವೂ, ಲಲಿತ ಮೋಹಕವೂ, ಮಂಗಳಕರವೂ ರಮಣೀಯ ಸೌಂದರ್ಯದ್ದು. ಆದರೆ ಅದರ ಇನ್ನೊಂದು ಮುಖ ಭಯಾನಕವೂ ಹಿಂಸಾತ್ಮಕ ವಿನಾಶಕರವೂ ಆದ ಅಸಹನೀಯ ಕ್ರೌರ್ಯದ್ದು. ಪ್ರಕೃತಿಯ ಮೂಲಸ್ಥಿತಿ ಎಂದರೆ 'ಹಿಂಸೆ ಮತ್ತು ಪ್ರೀತಿ' ಎರಡನ್ನು ಒಳಗೊಳ್ಳುವುದು ಅಥವಾ ಆನಂದ ಹಾಗೂ ದುಃಖವನ್ನು ಕೊಡುವುದು. ಪ್ರಕೃತಿ ಸೌಂದರ್ಯಕ್ಕೂ ಈ ಮಾತು ಅನ್ವಯಿಸುತ್ತದೆ.

ಘೋರವಿಪಿನದ ನಡುವೆ ಪಾಳುಮನೆಯಿದೆ ನೋಡು

ದಾರಿಹೋಕನೆ, ನಿಂತಿದಕೆ ಮನ್ನಣೆಯ ಮಾಡು
ಯಾರು ಬಾರದ ಗುಡಿಸಲೆಂದಿದ ಜರೆಯಬೇಡ: (ಪಾಳುಮನೆ)
ವಾರ ಬಡಕವಿಗಿರಲಿ, ಬೇರೆಯಾರಿಗೂ ಬೇಡ
ಮುರಿದುರುಳುವಂತಹುದು ಹರಿದ ಹುಲ್ಲಿನಮಾಡು
ಅರೆಯುರಳಿ ಒರಗಿದೆ ಪಿಶಾಚಿದಂತಿಹ ಗೋಡೆ!

ಎಂದು ಪಾಳುಮನೆಯನ್ನು ನೋಡಿ ಮರುಕಪಡುತ್ತಾರೆ. ಕವಿ 'ಪಾಳುಮನೆ'ಯನ್ನು ವರ್ಣಿಸುವುದನ್ನು ನೋಡಿದರೆ ಕವಿಗೆ ಪ್ರಕೃತಿಯ ಎಲ್ಲಾ ವಸ್ತುಗಳು ಚೈತನ್ಯಕಾರಿ-ಶಕ್ತಿಗಳಾಗಿ ಕಾಣುತ್ತವೆ. ಕವಿ ತನ್ನ ಪರಿಸರದಲ್ಲಿ ಒಂದು ಹಾಳಾದ ಪಾಳುಮನೆಯಿತ್ತು. ಅದು ಭಯಂಕರವಾದ ಸ್ವರೂಪವನ್ನು ಹೊಂದಿತ್ತು. ಆದರೆ ಆ ಪಾಳುಮನೆಯ ಸುತ್ತಲ್ಲಿ ಸುತ್ತುವ ಜನ ಇಲ್ಲಿಗೆ ಯಾರು ಬಾರದ ಗುಡಿಸಲು ಎಂದು ಜರೆಯುತ್ತಿದ್ದನ್ನು ನೋಡಿ ಹಾಗೆ ಜರೆಯಬೇಡಿ ಎಂದು ವಿನಂತಿಸುತ್ತಾರೆ. ಕವಿಯ ಮನಸ್ಸನ್ನು ಆಕರ್ಷಿಸಿ, ಆತನಿಗೆ ಮಾತ್ರ 'ಪಾಳುಮನೆ' ಕಾವ್ಯವಸ್ತುವಾಗುತ್ತದೆ ಹೊರತು, ಬೇರೆ ಯಾರಿಗೂ ಬೇಡದ ಒಂದು ಪಾಳು ಬಂಗಲೆಯಾಗಿದೆ ಎಂದು ವರ್ಣಿಸುತ್ತಾರೆ. ಆ ಪಾಳುಮನೆಯ ಗೋಡೆ ಬಿದ್ದು ಒರಗಿದೆ, ಅದು ಪಿಶಾಚಿಯ ರೂಪದಲ್ಲಿ ಬಿದ್ದಿದೆ ಎಂದು ಹೇಳುತ್ತಾರೆ.

ಈ ಕವಿತೆಯನ್ನು ಓದಿದಾಗ ಇಲ್ಲಿ ಬರುವ ಹಾಳುಬಿದ್ದ ಗುಡಿಸಲ ವರ್ಣನೆ ಬರಿ ಕಲ್ಪಿತವಲ್ಲ, ವಾಸ್ತವವಾಗಿ ಕಾಡಿನ ಮಧ್ಯೆ ಹಳುವಿನ ನಡುವೆ ಪಾಳುಬಿದ್ದಿದ ಮನೆಯನ್ನು ನೋಡಿ ಪ್ರೇರಿತವಾದದ್ದು ಎಂದು ತಿಳಿಯಬಹುದು. ಈ ಪಾಳುಮನೆ ಪ್ರಕೃತಿಯ ವಿನಾಶದ ಹೆಜ್ಜೆಯ ಗುರುತಾಗಿ ಕಂಡರೂ ರುದ್ರರಮಣೀಯ ನಾಟ್ಯದ ಒಂದು ಅಂಗವಾಗಿ ತೋರುತ್ತದೆ. ಸೌಂದರ್ಯದ ಅನುಭವ ಎಂದರೇ ಕೇವಲ ಆಹ್ಲಾದಕಾರಿಯಾದ ಸಂತೋಷಕಾರಿಯಾದ ಅನುಭವ ಎಂದಲ್ಲ. ಪ್ರಕೃತಿಯಲ್ಲಿ ಸೌಂದರ್ಯ, ಕ್ರೌರ್ಯಗಳೆರಡೂ ಜೊತೆಗೂಡಿರುತ್ತವೆ ಎನ್ನುವ ತಿಳಿವು 'ಪಾಳುಮನೆ' ಕವಿತೆಯಿಂದ ತಿಳಿಯುತ್ತದೆ.

ಹೀಗೆ ನಿಸರ್ಗದ ನಿತ್ಯಸಂಪರ್ಕ ಮತ್ತು ಪ್ರಭಾವದಿಂದಾಗಿ ಕುವೆಂಪು ಅವರು ದಾರ್ಶನಿಕ ಕವಿಯಾಗಿದ್ದಾರೆ. ಅವರಂತೆ ಪ್ರಕೃತಿಯನ್ನು ಪ್ರೀತಿಸಿದ, ಅದರ ವಿವಿಧ ಅವತಾರಗಳನ್ನು ಕಂಡ ತಾದಾತ್ಮ್ಯವನ್ನು ಹೊಂದಿದ ಕವಿಗಳು ವರ್ಡ್ಸ್‌ವರ್ತ್‌ನನ್ನು ಉಳಿದರೆ, ಬೇರೆ ಇಲ್ಲವೆಂದಿನಿಸುತ್ತದೆ. ಸೌಂದರ್ಯದರ್ಶನವೇ ಅವರ ಕಾವ್ಯದ ಆತ್ಮ ಅವರಿಗೆ ಪ್ರಕೃತಿಯಾರಾಧನೆಯೆ ಪರಮನಾರಾಧನೆಯಾಗಿದೆ. ಕವಿಗೆ ಪ್ರತಿಯೊಂದು ಹೂವು ಪೂಜೆಯ ಸಂಕೇತವಾಗುತ್ತದೆ. ಪ್ರತಿಯೊಂದು ಕಾಡು ದೇವಾಲಯವಾಗಿ, ಪ್ರತಿಯೊಂದು ಬೆಟ್ಟವೂ ಪ್ರತಿಮೆಯಾಗುತ್ತದೆ. ಕನ್ನಡದಲ್ಲಿ ಕುವೆಂಪು ರಚಿಸಿದಷ್ಟು

ಸೂರ್ಯೋದಯ ಗೀತೆಗಳನ್ನು ಬೇರೆ ಯಾವ ಕವಿಯೂ ರಚಿಸಿಲ್ಲ ಎಂಬುದು ಗಮನಾರ್ಹ. ಬೆಳಕಿನ ಮೂಲವಾದ ಸೂರ್ಯನ ಉದಯ ಅವರಿಗೆ ಕೇವಲ ಒಂದು ದೈನಂದಿನ ವಿದ್ಯಮಾನವಾಗಿ ತೋರುವುದಿಲ್ಲ. ಬದಲಾಗಿ ಸೂರ್ಯೋದಯ ಅನುಭಾವ ಉನ್ನತಿಯಲ್ಲಿ ದಿವ್ಯದರ್ಶನವಾಗುತ್ತದೆ. ಮಲೆನಾಡಿನ ಆವರಣದಲ್ಲಿ ಬೆಳೆದುಬಂದ ಅವರಿಗೆ ನಿಸರ್ಗಸೌಂದರ್ಯ ಕಣ್ಣಿನ ಬದುಕಾಗಿದೆ. ಆಂಗ್ಲಕವಿಯಾದ ವರ್ಡ್ಸ್‌ವರ್ತ್‌ನಂತೆ ಕುವೆಂಪು ಪ್ರಕೃತಿಯ ಸತ್ವವನ್ನು ಕಂಡಿದ್ದಾರೆ. ಪ್ರಕೃತಿಯ ಸಾನಿಧ್ಯ ಅವರಿಗೆ ಯಾವಾಗಲೂ ಕಾವ್ಯಸ್ಫೂರ್ತಿಯನ್ನು ಕೊಟ್ಟಿದೆ. ಅವರ ನಿಸರ್ಗಗೀತೆಗಳಲ್ಲಿ ನಾವು ಕಾಣುವುದು ಪ್ರಾಥಮಿಕ ಮಟ್ಟದ ಸೌಂದರ್ಯಾರಾಧನೆಯನ್ನಲ್ಲ. ಅವರ ಕಾವ್ಯವನ್ನು ನಿಸರ್ಗ, ಸಾಮಾಜಿಕ, ಕೌಟುಂಬಿಕ ಎಂದು ವಿಭಜಿಸಿ ನೋಡಿದಾಗ ಸತ್ಯದರ್ಶನವಾಗುವುದಿಲ್ಲ. ಅವರ ಸಮಗ್ರ ಸಾಹಿತ್ಯದಲ್ಲಿ 'ನಿಸರ್ಗಧ್ವನಿ'ಯೊಂದನ್ನು ಕಾಣಬಹುದು.

ಇಂದಿನ ಯಾಂತ್ರಿಕ ಯುಗದ ಕಲುಷಿತ ವಾತಾವರಣದಲ್ಲಿ ಕುವೆಂಪು ಅವರ ಪ್ರಕೃತಿಗೀತೆಗಳು ನಮ್ಮಲ್ಲಿ ಪರಿಸರಪ್ರಜ್ಞೆಯನ್ನು ಮೂಡಿಸಿ,' ಪ್ರಕೃತಿ ಪ್ರೀತಿಯನ್ನು ಉದ್ದೀಪಿಸಿ ನಮ್ಮನ್ನು ಪ್ರಕೃತಿಮುಖಿಗಳನ್ನಾಗಿ ಮಾಡುತ್ತವೆ. ಮಾನವನ ಬದುಕಿನ ಮೂಲನೆಲೆ ಪ್ರಕೃತಿಯೇ ಆಗಿದೆ. ಅವರ ಸಂತೋಷದ ಮೂಲಸೆಲೆ ಪ್ರಕೃತಿಯಲ್ಲೆ ಅಡಗಿದೆ ಎಂಬುದನ್ನು ಅವರು ತಮ್ಮ ಪ್ರಕೃತಿಗೀತೆಗಳ ಮೂಲಕ ಪ್ರಸ್ತುತಪಡಿಸಿದ್ದಾರೆ.

ಪ್ರಕೃತಿಯ ಬಗೆಗಿನ ಉತ್ಕಟಪ್ರೀತಿ ಕುವೆಂಪು ಅವರ ಕಾವ್ಯದಲ್ಲಿ ಎದ್ದುಕಾಣುವ ಅಂಶ. ಮಲೆನಾಡಿನ ವಿಶಿಷ್ಟ ಹಿನ್ನೆಲೆಯಿಂದ ಬಂದ ಕವಿಯ ನಿಸರ್ಗದರ್ಶನ ಅಪೂರ್ವವಾದುದು. ಪ್ರಕೃತಿಯೇ ದೇವಾಲಯವಾಗಿ ಪರಿಭಾವಿಸುವ ಅವರಿಗೆ ಪ್ರಕೃತಿಯೇ ಸರ್ವಸ್ವವೂ ಆಗುತ್ತದೆ. ನಿಸರ್ಗ ಸೌಂದರ್ಯ ಕೇವಲ ದೃಶ್ಯಾನಂದಕ್ಕಾಗಿ ಅಲ್ಲ, ಸತ್ಯಶಿವಗಳಿಗಾಗಿ; ರಸಾನಂದಕ್ಕಾಗಿ ಎಂಬುದು ಅವರ ನಿಲವು.

***

ಅಧ್ಯಾಯ ೫

ನೆನಪಿನ ದೋಣಿಯಲ್ಲಿನ ಸ್ತ್ರೀಕೇಂದ್ರಿತ ಕವಿತೆಗಳು

ಈ ಭೂಮಿಯ ಮೇಲೆ ಪ್ರಾಣಿಯಾಗಿ ಹುಟ್ಟಿದ ಜೀವಿಯನ್ನು ಮಾನವನನ್ನಾಗಿ ಮಾಡಿದ ಶಕ್ತಿ ತಾಯಿ. ಬೇಟೆ ಹಾಗೂ ಕ್ರೌರ್ಯದ ಗಂಡಸು ಪ್ರಾಣಿಯನ್ನು ಗೃಹಸ್ಥನನ್ನಾಗಿ ಮಾಡಿದವಳು ತಾಯಿ. ಮಕ್ಕಳನ್ನು ಹಡೆಯುವ ಸಹಜ ಚೈತನ್ಯಪಡೆದ ತಾಯಿಜೀವಿಗಳು ಆ ಕಂದಗಳ ಬಾಳನ್ನು ರೂಪಿಸುತ್ತಾ ತಮ್ಮ ಜನ್ಮಗಳನ್ನು ಸವೆಸಿವೆ. ತಮ್ಮ ಜನ್ಮಗಳನ್ನು ಧಾರೆಯೆರೆದು 'ಮಾತೃಸಂಸ್ಕೃತಿ'ಯನ್ನು ರೂಪಿಸಿವೆ. ಹಾಗಾಗಿ ಈ ನೆಲದಲ್ಲಿ ಮೊದಲು ಮಾತೃಪ್ರಧಾನ ವ್ಯವಸ್ಥೆಯಿತ್ತು. ತಾಯಿ ಇಂದಿಗೂ ಮಾನವರನ್ನು ತಿದ್ದುತ್ತಲೇ ಸಾಗಿದ್ದಾಳೆ. ಜಗತ್ತಿನಲ್ಲಿ ಮಾತೃಪ್ರೇಮಕ್ಕೆ ಸಮಾನವಾದ ಪ್ರೇಮ ಮತ್ತೊಂದಿಲ್ಲ. ಒಂದು ಹೆಣ್ಣು ತಾಯಿಯಾಗಿ, ತಂಗಿಯಾಗಿ, ಮಡದಿಯಾಗಿ, ಮಗಳಾಗಿ ಜೀವಸಂಕುಲವನ್ನು ಪೋಷಿಸುತ್ತಾಳೆ. ಸೃಷ್ಟಿಯ ಆಕರ್ಷಣೆ ವಿಕರ್ಷಣೆಗಳಿಗೆ ಬದುಕಿನ ಚಲನೆಗೆ ಅವಳೇ ಪ್ರೇರಕಳು. ಪಿತೃ ಅಥವಾ ಪುರುಷ ತತ್ವಕ್ಕಿಂತ ಸ್ತ್ರೀತತ್ವಕ್ಕೆ ಹೆಚ್ಚು ಪ್ರಾಶಸ್ತ್ಯವುಂಟು.

ಕವಿ ಹೆಣ್ಣನ್ನು ತಾಯಿಯಂತ, ಜಗನ್ಮಾತೆಯಂತೆ ಕಂಡು ತಾನು ಶಿಶುವಿನ ಸ್ಥಾನದಲ್ಲಿ ನಿಂತು ಅವಳನ್ನು ಪೂಜಿಸುತ್ತಾರೆ. ಕುವೆಂಪು ಹೆಣ್ಣಿನ ಸರ್ವತ್ವವನ್ನು ಅವಳ ವಿಶ್ವರೂಪವನ್ನು ಕೊಂಡಾಡುತ್ತಾರೆ. ಹೆಣ್ಣು ಅವರ ದೃಷ್ಟಿಯಲ್ಲಿ ಶಕ್ತಿಮುಕ್ತಿಗಳ ಸಂಕೇತ. ಹೆಣ್ಣು ಶಿವನ ಅರ್ಧಾಂಗಿ ಮಾತ್ರವಲ್ಲ ಅವನ ತಲೆಯೇರಿದವಳು, ವಿಷ್ಣುವಿನ ಹೃದಯವಾಸಿ ಎಂದು ಹೇಳಿದ್ದಾರೆ. ಹೆಣ್ಣು ತೇಜಸ್ಸಿಗೆ, ಸಕಲ ಸಂಪತ್ತುಗಳಿಗೆ, ಜ್ಞಾನಶ್ರೀಗೆ ಅಧಿದೇವತೆ ಎಂದು ಸ್ಮರಿಸುತ್ತಾರೆ. ಅವಳಿಲ್ಲದೆ ಸೃಷ್ಟಿಯಿಲ್ಲ, ಅವಳಿಲ್ಲದೆ ಮುಕ್ತಿಯಿಲ್ಲ ಎನ್ನುವಲ್ಲಿ ಹೆಣ್ಣಿನ ಸರ್ವತ್ವವನ್ನೂ ಕಾಣಬಹುದು. ಆದ್ದರಿಂದಲೇ 'ಸ್ತ್ರೀ'ತ್ವದ ಬಗದ್ಗೆ ಅವರಿಗೆ ಗೌರವ. ಆಕೆಯಲ್ಲವರು ಜಗಜ್ಜನನಿಯನ್ನೆ ದರ್ಶಿಸುತ್ತಾರೆ. ಶ್ರೀರಾಮಕೃಷ್ಣರ ಕೃಪೆಗೆ ಪಾತ್ರರಾದ ಕುವೆಂಪು ಪ್ರತಿಯೊಬ್ಬ ಸ್ತ್ರೀಯಲ್ಲಿ ಜಗಜ್ಜನನಿಯನ್ನೇ ಕಾಣುತ್ತಾರೆ, ನಿಸರ್ಗಸೌಂದರ್ಯದಲ್ಲಿ ಜಗನ್ಮಾತೆಯ ಚೆಲುವನ್ನೇ ಕಾಣುತ್ತಾರೆ.

ಕವಿಯ ವ್ಯಕ್ತಿತ್ವ ಕುರಿತು ದೇಜಗೌ ಹೀಗೆ ಹೇಳುತ್ತಾರೆ.

"ಬ್ರಹ್ಮಚರ್ಯವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸುವವರಾದರೂ ಕುವೆಂಪು ವಿರಕ್ತರಲ್ಲ; ಕಾವಿಯ ಬಹಿರ್ವಾಸವನ್ನುಟ್ಟು ಅಂತರಂಗದಲ್ಲಿ ಕಾಮದೇವನನ್ನು ಆರಾಧಿಸುವ ಬೂಟಾಟಿಕೆಯ ಸನ್ಯಾಸಿಯೂ ಅಲ್ಲ; ಇಂದ್ರಿಯ ಚಾಪಲ್ಯಕ್ಕೆ ವಶರಾಗಿ, ಹೆಣ್ಣನ್ನು ಭೋಗವಸ್ತುವೆಂದು ತಿಳಿದು, ಪರಸ್ತ್ರೀಯನ್ನು ಸ್ವಸ್ತ್ರೀಯೆಂದು ತಿಳಿಯುವ

ಅಧರ್ಮಿಲಂಪಟರೂ ಅಲ್ಲ. ಇಂದ್ರಿಯ ನಿಗ್ರಹವನ್ನು ಸಾಧಿಸಿ ಅಧ್ಯಾತ್ಮ ಸಾಧನೆಯಲ್ಲಿ ನಿಮಗ್ನರಾದ ಭೀಷ್ಮಸಂಕಲ್ಪರವರು"[೧] ಎಂದು ಪ್ರಶಂಸಿಸುತ್ತಾರೆ.

ಕುವೆಂಪು ತನ್ನ ತಾಯಿ ಸೀತಮ್ಮ ಅವರನ್ನು ಕುರಿತು ಕವಿತೆಗಳನ್ನು ರಚಿಸಿದ್ದಾರೆ. ಆ ಕವಿತೆಗಳು ರಚನೆಯಾದ ಕಾಲ ೧೯೨೪. ತಾಯಿಯನ್ನು ಕುರಿತು ಬರೆದಿರುವ ಕವಿತೆಗಳೆಂದರೆ 'ಅನಾಥಬಾಲ', 'ಮರುದಿನದ ಕವಿತೆ', 'ಜನನಿಗೆ' ತಮ್ಮ ತಾಯಿಯ ವಿಚಾರದಲ್ಲಿ ನಡೆದುಕೊಂಡ ರೀತಿಯ ಬಗ್ಗೆ ಕುವೆಂಪು ಹೀಗೆ ಹೇಳುತ್ತಾರೆ.

"ನಾನು ವಿದ್ಯಾಭ್ಯಾಸಕ್ಕಾಗಿ ಮೈಸೂರು ಸೇರಿದ ನಂತರ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ ಸಾಹಿತ್ಯವನ್ನು ಅಭ್ಯಸಿಸಿ, ತತ್ವಶಾಸ್ತ್ರವನ್ನು ವಿಶೇಷವಾಗಿ ವ್ಯಾಸಂಗ ಮಾಡಿದ್ದರ ಪರಿಣಾಮವಾಗಿ ಸಾವು ಸಾವಲ್ಲವೆಂಬ ಭಾವನೆ ನನ್ನ ಮನಸ್ಸನ್ನು ಆವರಿಸಿಕೊಂಡಿತ್ತು. ಆದ್ದರಿಂದ ತಾಯಿ ಸತ್ತಾಗ ಅಳಲಿಲ್ಲ. ಸತ್ತು ಅಮರರಾಗಿದ್ದರೆಂಬ ಭಾವನೆ ನನ್ನ ಮನಸ್ಸಿನಲ್ಲಿ ಬೇರೂರಿತ್ತು. ಅನೇಕ ವರ್ಷಗಳ ನಂತರ ನನ್ನ ತಾಯಿ ಅನುಭವಿಸಿದ ಕಷ್ಟಕ್ಲೇಶಗಳು, ನನ್ನ ಕ್ಷೇಮಕ್ಕಾಗಿ ಅವರು ಪಡುತ್ತಿದ್ದ ಶ್ರಮ, ನನ್ನ ಮೇಲಣ ಅವರ ಅನವದ್ಯ ಪ್ರೇಮ, ಬದುಕಿದ್ದಾಗ ನಾನವರ ಬಗೆಗೆ ತಾಳಿದ ನಿರ್ಲಕ್ಷ್ಯ ಮನೋಭಾವ ನೆನಪಿಗೆ ಬಂದು ಅತ್ತದ್ದುಂಟು. ಆ ಸಂಕಟವೇ ತಾಯಿಯನ್ನು ಕುರಿತ ಒಂದೆರಡು ಕವಿತೆಗಳ ಆವಿರ್ಭಾವಕ್ಕೆ ಕಾರಣವಾಗುತ್ತದೆ"[೨]

ಕುವೆಂಪು ಹೀಗೆ ತಾಯಿಯ ವಿಚಾರದಲ್ಲಿ ಪಶ್ಚಾತ್ತಾಪಪಡುತ್ತಾರೆ.

'ಅನಾಥಬಾಲ' ಕವಿತೆ ತಾಯಿ ಸತ್ತ ಸುದ್ದಿ ಕೇಳಿ ಬರೆದುದಾಗಿದೆ. ಈ ಪದ್ಯ ಕವಿಯು ತನ್ನ ತಾಯಿಯನ್ನು ಕಳೆದುಕೊಂಡ ಸಂದರ್ಭದ ಮಾನಸಿಕ ಸ್ಥಿತಿಯನ್ನು ತಿಳಿಸುತ್ತದೆ.

ಎಲೆ ಜನನಿ, ಎಲ್ಲಿರುವೆ?
ಬಿಳಿದಾದ ಮಲ್ಲಿಗೆಯು
ಪೊಳೆಯುತಿಹ ಮರದಲ್ಲಿ ನಗೆ ಬೀರುತ (ಅನಾಥಬಾಲ)
ಅಲರ ರೂಪವ ತಾಳಿ
ತಳಿರ ಸೊಬಗನು ಹೊಂದಿ
ಇಳೆಯ ನಾಕದೊಳು ನೀಂ ನೆಲೆಸಿರ್ಪೆಯಾ?

೧. ದೇಜಗೌ : ಕುವೆಂಪು ಸಾಹಿತ್ಯ ; ಕೆಲವು ಅಧ್ಯಯನಗಳು, ಸಂಪುಟ ೩, ಪುಟ. ೬೭.
೨. ಕುವೆಂಪು ಸಮಗ್ರ ಗದ್ಯ, ಸಂ.೨, ಸಂದರ್ಶನಗಳು, ಪುಟ. ೯೪೫.

ಕವಿ ತನ್ನ ಬದುಕಿನಲ್ಲಿ ತಾಯಿಯ ಮಹತ್ವ ಏನು ಎಂಬುದನ್ನು ತಿಳಿಸಿ, ಅವಳೇ ನನ್ನ ಬದುಕಿಗೆ ಸ್ಫೂರ್ತಿಯ ಧಾರೆ ಎನ್ನುತ್ತಾರೆ. ತಾಯಿ ಪ್ರಕೃತಿಯಲ್ಲಿ ಲೀನವಾಗಿದ್ದಾಳೆ. ತಾಯಿ ಸತ್ತು ಒಂದು ನಿಶ್ಚಿತ ರೂಪವನ್ನು ಪಡೆದು ನಿಸರ್ಗದಲ್ಲಿ ಸೊಬಗಿನಿಂದ ಕೂಡಿದ್ದಾಳೆ ಎಂದು ಹೇಳುತ್ತಾರೆ. ಕವಿಗೆ ತನ್ನ ತಾಯಿ ಇಲ್ಲದಿರುವ ಸನ್ನಿವೇಶವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲವಾಗಿದೆ. ತನ್ನ ಅಗಲುವಿಕೆಯಿಂದ ಬಳಲುತ್ತಿರುವ ಮಗನನ್ನು ತಾಯಿ ಮಮತೆಯಿಂದ ಮುದ್ದಿಸಿ ಸಮಾಧಾನಪಡಿಸುತ್ತಾಳೆ. ತಾಯಿ ಕಳೆದುಕೊಂಡಾಗ ಅವರ ಮನಸ್ಸಿನಲ್ಲಿ ಸೂತಕದ ವಾತಾವರಣ ಮೂಡುತ್ತದೆ. ಆಗ ತಾಯಿ ಸತ್ತಿಲ್ಲ ಬದುಕಿ ನನ್ನನು ಸಲಹುತ್ತಿದ್ದಾಳೆ ಎನ್ನುವ ಭಾವವನ್ನು ವ್ಯಕ್ತಪಡಿಸುತ್ತಾರೆ.

ತಂಪಾದ ಸಂಜೆಯೊಳು
ಸೊಂಪಾದ ತೋಟದೊಳು
ಇಂಪಾದ ಗಾನದಿಂ ನೀ ಕರೆಯುವೆ!

ತಾಯಿ ನಿಸರ್ಗದೊಳಗೆ ಬೆರೆತು ಸುಮಧುರವಾದ ಗಾನದಿಂದ ಕರೆದಳು ಎನ್ನುತ್ತಾರೆ. ಕವಿ ದುಃಖದಿಂದ ಜರ್ಜರಿತರಾಗಿ ಚಿಂತಾಕ್ರಾಂತರಾಗಿದ್ದಾಗ ತಾಯಿ ಏಕೆ ಅಳುತಿರುವೆ ಸದಾ ನಾನು ನಿನ್ನ ಜತೆಗೇನೆ ಇರುವೆ ಎಂದು ಸಂತೈಸಿ ನೋವನ್ನು ಮರೆಸುತ್ತಾಳೆ. ಲೋಕದ ಕಣ್ಣಿಗೆ ತಾಯಿ ಸತ್ತಿರಬಹುದು. ಆದರೆ ಆಂತರ್ಯದ ಬದುಕಿನಲ್ಲಿ ನನ್ನನ್ನು ಸಲಹುತ್ತಿದಾಳೆ ಎಂಬುದು ಕವಿಯ ಅನಿಸಿಕೆ. 'ಮಗುವೆ ನಾನಿಹೆನು ನೀ ಬೆದರಬೇಡೈ'! ಎನ್ನುವಲ್ಲಿ ಸದಾ ನಿನ್ನ ಬಳಿಯಿರುವೆ, ಯಾವ ಭಯ ಬೇಡ ಎಂದು ಸಂತೈಸುತ್ತಾಳೆ.

ಎಲೆ ಜನನಿ, ನಿನ್ನ ನೋಡುವೆ ಸಕಲ ತರುಗಳಲಿ
ನಿನ್ನ ನೋಡುವೆ ನೀಲ ಗಗನದಲ್ಲಿ;
ನಿನ್ನ ನೋಡುವೆನಖಿಲ ಬ್ರಹ್ಮಾಂಡ ಕೋಟೆಯಲ್ಲಿ;
ಮನನಿಲುಕದ ಸಮವಹ ಭೀಕರದ ವಿಶ್ವದಲ್ಲಿ!

ತನ್ನ ತಾಯಿಸತ್ತಿದ್ದರೂ ಎಲ್ಲೊ ಒಂದು ಕಡೆ ಪ್ರಕೃತಿಯೊಳಗೆ ನೆಲೆಸಿರುವಳು ಎನ್ನುವ ಚಿತ್ರ ನೀಲಾಕಾಶದಲ್ಲಿ ಕವಿಗೆ ಕಾಣುತ್ತದೆ. ಹಸಿರು ತುಂಬಿದ ಹೊಲದಲ್ಲಿ ಕವಿ ತಮ್ಮ ತಾಯಿಯನ್ನು ಕಾಣುತ್ತಾರೆ. ಕವಿಯ ಕಣ್ಣಿಗೆ ಇಡೀ ಪ್ರಕೃತಿಯೇ ತಾಯಿ ರೂಪದಂತೆ ಕಾಣುತ್ತದೆ. ಇಡೀ ನಿಸರ್ಗವೇ ತಾಯಿ ಎನ್ನುವ ಭಾವ.

ತಾಯಿಯನ್ನು ಕುರಿತ ಮತ್ತೊಂದು ಮಹತ್ವದ ಕವಿತೆಯೇ 'ಜನನಿ'. ಈ ಕವಿತೆ ತಾಯಿ ಸತ್ತ ಏಳುವರ್ಷಗಳ ನಂತರ ಅಂದರೆ ೧೯೩೧ರಲ್ಲಿ ರಚನೆಯಾಗಿದೆ. ಕವಿಯ ಟಿಪ್ಪಣಿ ರೂಪದ ಮಾತುಗಳು ಹೀಗಿವೆ.

"ಒಂದು ಸಾಯಂಕಾಲ ಒಂಟಿಕೊಪ್ಪಲಿನ ಆಶ್ರಮದಿಂದ ನಾನೊಬ್ಬನೆ ಹೊರಟು ತಿರುಗಾಡುತ್ತಾ ಕುಕ್ಕನಹಳ್ಳಿ ಕೆರೆಯ ಪೂರ್ವದ ಬಯಲಿನಲ್ಲಿ ಕೆರೆಯಂಚಿನ ಹಸುರಿನ ಮೇಲೆ ಕುಳಿತುಕೊಂಡೆ. ಆಗ ನೆನಪು ನನ್ನ ಬಾಳಿನ ರಸ್ತೆಯಲಿ ನಡೆದಾಡುತ್ತಾ ನನ್ನ ತಾಯಿ ತಂಗಿಯರು ಮತ್ತು ತಂದೆಯವರತ್ತ ಹೊರಳಿತು. ಹಿಂದಿನದನ್ನೆಲ್ಲ ನೆನೆದು ಕಣ್ಣೀರು ಕರೆದೆ. ಅಲ್ಲಿ ಯಾರೂ ಇರಲಿಲ್ಲವಾದ್ದರಿಂದ ಸ್ವಾಭಿಮಾನಕ್ಕೆ ಭಂಗ ಬರುವಂತಿರಲಿಲ್ಲ"[೧]

ನೀನು ಮಡಿದಂದು ನಾನಾದ್ವೈತ ದರ್ಶನದ
ಮದಿರೆಯಲ್ಲಿ ಮುಳುಗಿದ್ದೆ (ಜನನಿಗೆ)
ವಿಶ್ವವೆಲ್ಲವು ಮಾಯೆ: ಜೀವರೆಂಬುವರೆಲ್ಲ
ಸುಳ್ಳಿನಲಿ ಕೆತ್ತಿರುವ ಗುಳ್ಳೆಗಳು: ಶಿವನಾನು;

ಕವಿ ತಮ್ಮ ತಾಯಿಯ ದೇಹ ಭಸ್ಮೀಭೂತವಾಗಿದ್ದರೂ ಅವರಾತ್ಮ ಅಮೃತವಾಗಿ ಮಕ್ಕಳ ಕ್ಷೇಮಕ್ಕಾಗಿ, ಆ ಲೋಕದಿಂದ ಮಾಡಬೇಕಾದುದನ್ನು ಮಾಡುತ್ತಿರುತ್ತದೆ ಎಂದು ಅದ್ವೈತಿಯಾಗಿ ಹೇಳುತ್ತಿರುವುದು. 'ಜೀವರೆಂಬುವರೆಲ್ಲ ಸುಳ್ಳಿನಲ್ಲಿ ಕೆತ್ತಿರುವ ಗುಳ್ಳೆಗಳು' ಎನ್ನುವಲ್ಲಿ ಕವಿಗೆ ತತ್ವಶಾಸ್ತ್ರದ ಹಿನ್ನೆಲೆಯಿದೆ ಎಂದು ಗುರುತಿಸಬಹುದು. ಅಂದರೆ ಸಾವು ಸಾವಲ್ಲ, ಅದೊಂದು ಜೀವಿಯ ಪರಿವರ್ತನೆಯ ಹಂತ, ಎನ್ನುವ ಅನಿಸಿಕೆಯಿಂದ ಕವಿ ಹಾಗೆ ವರ್ತಿಸಿದ್ದಾರೆ ಎನ್ನಬಹುದು. ತಾಯಿ ಸಾವಿನಿಂದ ತಂಗಿಯರು ದುಃಖಪಡುತ್ತಿದ್ದಾಗ ಅವರನ್ನು ಸಮಾಧಾನಿಸದೆ ಕೋಪದಿಂದ ಗದರಿಸಿ ಮೌನವಾಗಿಯೇ ಉಳಿದೆ ಎಂದು ಪಶ್ಚಾತ್ತಾಪಪಡುತ್ತಾರೆ. ತಾಯಿ ಸಾವಿನ ಸುದ್ದಿ ತಿಳಿದು ಕವಿ ಪ್ರತಿಕ್ರಿಯಿಸಿದ ರೀತಿ ಅಮಾನವೀಯತೆಯಿಂದ ಕೂಡಿದೆ. ಕವಿ ತಾಯಿಯನ್ನು ಹಾಗೂ ಬಂಧುಗಳನ್ನು ಕಳೆದುಕೊಂಡು ಈ ಪ್ರಪಂಚದಲ್ಲಿ ತಾನು ಒಂಟಿ ಜೀವ, ತಂದೆತಾಯಿಗಳಿಲ್ಲದ ಪರಿಸ್ಥಿತಿ ನನಗೆ ತಲೆದೋರಿತಲ್ಲ ಎಂದು ದುಃಖವನ್ನು ವ್ಯಕ್ತಪಡಿಸುತ್ತಾರೆ.

ಅದರಿಂದೆ ನಾಂ ಜಗದ ರಂಗದಲಿ ಏಕಾಂಗಿ :
ತಂದೆತಾಯಿಗಳಿಲ್ಲ; ಸಾಧು ಸಂಗದೊಳಿಂದು
ಏಕಾಂಗಿ: ಆಗಿಹೆನು ನಿಜವಾಗಿ ಅದ್ವೈತಿ!

ನನ್ನ ಈ ಕಾರ್ಯದಿಂದ ನಿನಗೆ ಅಪಚಾರವಾಗಿದೆ ಕ್ಷಮಿಸಿ, ಬದುಕಿನಲ್ಲಿ ನನ್ನನ್ನು ಕಾಪಾಡು 'ನಿನ್ನ ಮುದ್ದಿನ ಶಿಶುವ, ಹರಸು ಎಂದು ಪ್ರಾರ್ಥಿಸುತ್ತಾರೆ.

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ೧೯೯೩, ಪುಟ. ೩೧೨.

ಕವಿಯ ಈ ಕವಿತೆಗಳ ಓದಿನಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಮನುಷ್ಯನಾದವನು ತನಗೆ ಜನ್ಮವಿತ್ತ ತಂದೆತಾಯಿಯರನ್ನು, ಒಂದೇ ಕರುಳು ಬಗೆದುಕೊಂಡು ಹುಟ್ಟಿದ ಒಡಹುಟ್ಟುಗಳನ್ನು ಮರೆಯಬಾರದು; ಮಾತ್ರವಲ್ಲ ಅವರನ್ನು ಪ್ರೀತಿಸಬೇಕಾದ್ದು ಆದ್ಯ ಕರ್ತವ್ಯವೆಂಬ ಭಾವನೆ ಮೂಡುತ್ತದೆ.

ಕುವೆಂಪು ಜಗನ್ಮಾತೆಯಾದ ಶಾರದಾದೇವಿಯವರನ್ನು ಕುರಿತು ಕೆಲವು ಕವಿತೆಗಳನ್ನು ರಚಿಸಿದ್ದಾರೆ. ಕವ ನಿಸರ್ಗಸೌಂದರ್ಯದಲ್ಲಿ ಜಗನ್ಮಾತೆಯ ಚೆಲುವನ್ನು ಕಾಣುತ್ತಾರೆ. 'ತಾಯಿಯಹಾಡು' ತಾಯಿ ಮತ್ತು ಮಗುವಿನ ಬಾಂಧವ್ಯವನ್ನು ಕುರಿತು ಪದ್ಯ. ಈ ಕವಿತೆ ಮಹತ್ತಾದ ತಾತ್ವಿಕತೆಯಿಂದ ಕೂಡಿದ್ದರೂ ಅತ್ಯಂತ ಸರಳವಾದ ಕವನ. ಇಲ್ಲಿ ತಾಯಿ ಪಾತ್ರ ಮಹತ್ವದಿಂದ ಕೂಡಿದೆ. ಒಂದೇ ಸಮನೆ ಅಳುತ್ತಿರುವ ಮಗುವಿಗೆ ತಾಯಿ ಪ್ರಕೃತಿಯನ್ನು ತೋರಿಸಿ ಸಮಾಧಾನಪಡಿಸುತ್ತಾಳೆ.

ಬಯಲೊಳಿಹ ಮರದಲ್ಲಿ
ರಮಣೀಯ ರಾಗದಿಂ
ಕೋಕಿಲೆಯು ಕೂಗುತಿದೆ (ತಾಯಿಯಹಾಡು)
ನಿನಗಾಗಿ ಎಲೆ ಮಗುವೆ

ಮಗುವಿನ ಅಳುವನ್ನು ತಡೆಯಲು ತಾಯಿ ಒಂದು ಕಡೆ ಪ್ರಯತ್ನಿಸುತ್ತಿದ್ದರೆ, ತಾಯಿಯ ಜೊತೆಗೆ ಕೋಗಿಲೆ, ಪಕ್ಷಿಗಳು ಮೊದಲಾದವು ಸಹಕರಿಸುತ್ತವೆ. ಪ್ರಕೃತಿಯಲ್ಲಿನ ಸಕಲಜೀವರಾಶಿಯನ್ನು ಕವಿತೆ ಉದ್ಧರಿಸುತ್ತದೆ. ಇಡೀ ಕವಿತೆ ತಾಯಿಯ ಹಾರೈಕೆಯಿಂದ ಕೂಡಿದೆ ಎಂದು ಅನಿಸುತ್ತದೆ. ಆದರೆ ಪ್ರಕೃತಿಯು ಒಂದು ಪಾತ್ರವಾಗಿ ಮಗುವಿನ ಅಳಲನ್ನು ಸುಧಾರಿಸುತ್ತದೆ. ತಾಯಿ ಮಗುವಿಗೆ ಇಡೀ ಪ್ರಕೃತಿಯೇ ನಿನಗೆ ಆಸರೆಯಾಗಿದೆ ಎಲೆ ಮುಗುವೆ ಎಂದು ಹೇಳುತ್ತಾಳೆ. ದೇವರು ನಿನ್ನನು ಸಲಹಲು ಹತ್ತು ಅವತಾರಗಳನ್ನು ಎತ್ತಿಬಂದಿರುವನು ಎಂದು ಮಗುವನ್ನು ಸಮಾಧಾನ ಮಾಡುತ್ತಾಳೆ. ಮಗುವನ್ನು ಸಂತೈಸಲು ಇಡೀ ನಿಸರ್ಗವೇ ಭೇಟಿ ನೀಡಿದೆ ಎಂಬ ಭಾವ ಇಡೀ ಕವಿತೆಯಲ್ಲಿ ವ್ಯಕ್ತವಾಗಿದೆ.

'ರಣರಂಗ' ಕವಿತೆಯಲ್ಲಿ ಬಾಳಿನ ಹೋರಾಟದಲ್ಲಿ ಸಿಲುಕಿರುವ ಮಗುವಿಗೆ ತಾಯಿ ಧೈರ್ಯ ಹೇಳುವ ಚಿತ್ರಣವಿದೆ. ಇಡೀ ಕವಿತೆಯಲ್ಲಿ ತಾಯಿ ಮತ್ತು ಮಗನ ನಡುವೆ ಸಂಭಾಷಣೆಯಿದೆ. ಮನುಷ್ಯನಿಗೆ ಬದುಕಿನ ಹೋರಾಟವೇ ಒಂದು ಪ್ರಶ್ನೆಯಾಗಿ ಎದುರಾಗುತ್ತದೆ. ಹೋರಾಟದಲ್ಲಿ ಸೋಲು ಗೆಲುವು ಸಂಭವಿಸುವುದು ಸಹಜ. ಇದನ್ನು ತಿಳಿದ ತಾಯಿ ತನ್ನ ಮಗುವಿಗೆ ಧೈರ್ಯದ ಮಾತುಗಳನ್ನು ಆಡುತ್ತಾಳೆ.

ಅರಿವೀರನೆಂದು ನೀ ಹಿಂಜರಿಯದಿರು, ಮಗುವೆ;
ಮರಣ ನನಗಹುದೆಂದು ಅಂಜಬೇಡ
ಭರವಸೆಯ ಹೊಂದಿ ನೀರಭಸದಿಂ ನಡೆಮುಂದೆ (ರಣರಂಗ)
ಧುರೆ ವೀರನಹೆ ಜೀವಸಮರದಲ್ಲಿ

ಜೀವನ ಎನ್ನುವುದು ರಣರಂಗ ಅದನ್ನು ಎದುರಿಸುವಾಗ ಧೈರ್ಯಶಾಲಿಯಾಗಿರು ಎಂದು ತಾಯಿ ಮಗನಿಗೆ ಹೇಳುತ್ತಾಳೆ. ಸದಾ ನಿನ್ನೊಡನಿದ್ದು ರಕ್ಷಕಿಯಾಗಿ ನಿನ್ನನು ಸಲಹುವೆ. ಎದುರಿನ ಶತ್ರು ವೀರನೆಂದು ತಿಳಿದು ಎದುರಿಸಲಾರದೆ ಹಿಂಜರಿಯಬೇಡ ಎನ್ನುತ್ತಾಳೆ. ನೀನು ಚಿಕ್ಕವನು ಎಂದು ಹೆದರದೆ ಬದುಕಿನ ಹೋರಾಟದಲ್ಲಿ ಮುನ್ನುಗ್ಗು ಆಗ ಜಯವನ್ನು ಪಡೆವೆ ಎಂದು ಹಾರೈಸುತ್ತಾಳೆ.

'ದೀನರೊಳು ದೀನ ನಾ' ಕವಿತೆಯಲ್ಲಿ ಜಗಮಾತೆಯು ಸರ್ವವ್ಯಾಪಿಯಾಗಿದ್ದಾಳೆ ಎನ್ನುವ ದೃಶ್ಯವನ್ನು ಕವಿ ಕೊಡುತ್ತಾರೆ. ನಿನ್ನ ಕೃಪೆಯಿಂದ ಬದುಕುವ ಜೀವ ನಾನು ಆದ್ದರಿಂದ ನಿನ್ನ ಮಹಿಮೆಯಿಂದ ಎನ್ನನು ಸತ್ಕರಿಸುವ ಎನ್ನುತ್ತಾರೆ. ನನಗೆ ಯಾವುದೇ ಮತೀಯ ಬುದ್ಧಿಕೊಡದೆ, ಜ್ಞಾನಿಯೆನ್ನುವ ಅಹಂಕಾರ ಕೊಡದೆ ಸಲಹು ಎನ್ನುತ್ತಾರೆ. ಕವಿ ತನ್ನ ಜಗನ್ಮಾತೆ ಬಳಿ ಪ್ರಾರ್ಥನೆಯ ಮೂಲಕ ಭಕ್ತಿಯನ್ನು ನಿವೇದಿಸಿಕೊಳ್ಳುತ್ತಾರೆ. 'ತಾಯಿ' ಕವಿ ಜಗನ್ಮಾತೆಯನ್ನು ಕುರಿತು ಬರೆದಿರುವ ಪ್ರಾರ್ಥನಾ ಪದ್ಯ. ಈ ಕವಿತೆ ಪ್ರಾರ್ಥನಾ ಸ್ವರೂಪದಲ್ಲಿದೆ. ಕವಿ ತನ್ನ ಮನಸ್ಸು ಸದಾ ಉತ್ತಮ ಆಲೋಚನೆಯಲ್ಲಿ ತೊಡಗಿರಲು ನಿನ್ನ ಸಹಕಾರ ಅವಶ್ಯಕ. ಆದ್ದರಿಂದ ನನ್ನ ಮನಸ್ಸಿನಲ್ಲಿ ಕೆಟ್ಟ ಬಯಕೆಗಳು ಪ್ರವೇಶವಾಗದಂತೆ ನೀನು ಕಾಪಾಡು ಎಂದು ಪ್ರಾರ್ಥಿಸುತ್ತಾರೆ.

ಕ್ಷಣಮಾತ್ರ ಹೀನ ಬಯಕೆಗಳ ಬಿಸುಡು, ಮನವೆ!
ಕ್ಷಣಮಾತ್ರ ಪರಮ ಬಯಕೆಯನು ಬಯಸು, ಮನವೆ! (ತಾಯಿ)

ಕುವೆಂಪು ಶಾರದಾದೇವಿಯನ್ನು ಕುರತು ಬರೆದಂತೆಯೇ ರಾಮಕೃಷ್ಣ ಪರಮಹಂಸರ ಬಗ್ಗೆಯೂ 'ಗುರುದೇವನಿಗೆ' ಎಂದು ಬರೆದಿದ್ದಾರೆ. ಕವಿಗೆ ಶಾರದಾಮಾತೆ ಪ್ರೇರಕ ಶಕ್ತಿಯಾಗಿದ್ದಾಳೆ ಎನ್ನುವ ವಿಚಾರ ಕವಿತೆಯಿಂದ ತಿಳಿಯುತ್ತದೆ. 'ತಾಯಿ ಸಾನಿಧ್ಯದ ಅನುಸಂಧಾನ' ಕವಿತೆಯಿಂದ ತಾಯಿಯೇ ಕವಿಗೆ ಸರ್ವಸ್ವ ಎನ್ನುವ ವಿಚಾರ ತಿಳಿಯುತ್ತದೆ. ಸದಾ ಜಗಮಾತೆಯ ಸಾನ್ನಿಧ್ಯದಲ್ಲಿ ಇರುವುದನ್ನೇ ಕವಿ ಅಪೇಕ್ಷಿಸುವುದು.

ದುಃಖವೈತರೆ ನಿನ್ನ ನೆನೆಯುವೆವು ಬಿಡದೆ,
ಮರೆಯುವೆವು ಸುಖದೊಳಿರಲು;
ಸಂತಸದೊಳಿರುವಾಗ ನಿನ್ನ ನೆನೆವಂತೆ
ಮನವ ದಯಪಾಲಿಸೆನಗೆ!

ಕವಿ ತಾಯಿಗೆ ಮಹತ್ವಸ್ಥಾನವನ್ನು ನೀಡುವ ಮೂಲಕ ತನ್ನಲ್ಲಿರುವ ಸ್ತ್ರೀತತ್ವವನ್ನು ರೂಪಿಸಿಕೊಂಡಿದ್ದಾರೆ. ಬದುಕಿನಲ್ಲಿ ನೋವು ನಲಿವು ಸಾಮಾನ್ಯ. ಆದರೆ ಮನುಷ್ಯನಿಗೆ ದುಃಖ ಸಂದರ್ಭದಲ್ಲಿ ಬೇಡುವುದು, ಸುಖದ ಕಾಲದಲ್ಲಿ ಮರೆಯುವುದು ಸಾಮಾನ್ಯವಿಚಾರ. ಆದರೆ ಕವಿ ತಾನು ಸಂತೋಷದಿಂದ ಇರುವ ಸಮಯದಲ್ಲೂ ನಿನ್ನನ್ನು ನೆನೆಯುವ ಮನಸ್ಸನ್ನು ನೀಡು ಎಂದು ಪ್ರಾರ್ಥಿಸುತ್ತಾರೆ. ಕವಿ ಭಾವಪರವಶರಾಗಿ ತಾಯಿಯ ರಹಸ್ಯ ರೂಪ ತನ್ನ ಬಳಿಯೇ ಸುತ್ತುತಿದೆ ಎಂದು ಹೇಳುತ್ತಾರೆ. 'ನಿತ್ಯವೂ ನಿನ್ನ ನೆನೆವೆ' ಎನ್ನುವ ಮೂಲಕ ಸಮರ್ಪಣಾಭಾವವನ್ನು ವ್ಯಕ್ತಪಡಿಸುತ್ತಾರೆ. ಬದುಕಿನಲ್ಲಿ ಯಾವ ಏರುಪೇರಾದರೂ ನಾನು ಅನುದಿನ ನಿನ್ನನ್ನು ನೆನೆವೆ ಎಂದು ಪ್ರಾರ್ಥಿಸುತ್ತಾರೆ. ನಾನು ನಿನ್ನನು ಮರೆಯದಂತೆ ಸದಾ ಎಚ್ಚರಿಸಿ, ಚೇತನವಾಗಿ ನನ್ನ ಬಾಳನ್ನು ರೂಪಿಸು ಎಂದು ತಾಯಿಯಲ್ಲಿ ಬೇಡಿಕೊಳ್ಳುತ್ತಾರೆ.

'ಆಟ ಮುಗಿಯುವ ಮುನ್ನ' ಕವಿ ತಾನು ಕೈಗೊಳ್ಳಬೇಕಾದ ಕಾರ್ಯಗಳನ್ನು ಮುಗಿಸಿದ ನಂತರ ನಾನೇ ನಿನ್ನ ಬಳಿಗೆ ಬರುವೆ ಎನ್ನುತ್ತಾರೆ. ಕವಿಯ ಆರೋಗ್ಯ ಹದಗೆಟ್ಟಿರುತ್ತದೆ. ಇದು ಆ ಸಂದರ್ಭದಲ್ಲಿ ಬರೆದ ಕವಿತೆ. ತಾನು ಎಲ್ಲಿ ಸತ್ತುಹೋಗುವೆನೊ ಎಂಬ ಆಲೋಚನೆ ಬಂದಾಗ ತಾಯಿಯ ಬಳಿ ಹೀಗೆ ಹೇಳಿಕೊಳ್ಳುತ್ತಾರೆ.

ಬರಲೆನಗೆ ಭಯವಿಲ್ಲ,
ಸಂದೇಹವಿಲ್ಲ; (ಆಟ ಮುಗಿಯುವ ಮುನ್ನ)
ತಾಯೆ, ನಿನ್ನಾನಂದ
ನಿನ್ನ ಕಂದ!

ಕವಿಗೆ ಸಾವಿನ ಬಗ್ಗೆ ಯಾವುದೇ ಭಯವಿಲ್ಲ. ಆದರೆ ತಾನು ಮಾಡಬೇಕಾದ ಕಾರ್ಯ ಬಾಕಿ ಇದೆ. ಎಲ್ಲವನ್ನು ಪೂರೈಸಿದ ನಂತರ ನಿನ್ನ ಬಳಿಗೆ ಬರುವೆ ಎನ್ನುತ್ತಾರೆ.

ಕುವೆಂಪು ತಾಯಿ ಜಗನ್ಮಾತೆ ಕುರಿತು ಬರೆದಿರುವ ಕವಿತೆಗಳಲ್ಲಿ 'ನಿನ್ನ ಸಿರಿ ಬೇಡೆನಗೆ' ಪದ್ಯ ವಿಶಿಷ್ಟವಾಗಿದೆ. ಕವಿಯ ದಾರ್ಶನಿಕ ಚಿಂತನೆಗೆ ಸಾಕ್ಷಿಯಾಗಿದೆ. ಕವಿ ಯಾವುದೇ ಆಮಿಷವನ್ನು ಇಟ್ಟುಕೊಳ್ಳದೆ 'ನಿರಂಕುಶವಾಗಿ' ಯೋಚಿಸುವುದನ್ನು ಕಾಣಬಹುದು. ತಾಯಿಯ ಕೃಪೆಯೊಂದಿದ್ದರೆ ಸಾಕು ಅದೇ ಪುಣ್ಯ. ನಿನ್ನ ಪ್ರೀತಿಯೊಂದಿದ್ದರೆ ಸಾಕು ಜಗದಲ್ಲಿ ಯಾವ ಸಿರಿವಂತಿಕೆಯು ಬೇಡ ಎನ್ನುತ್ತಾರೆ.

ಇರಲು ನಿನ್ನನುರಾಗ
ಅದೆ ಪರಮತದ ಭೋಗ!
ಅದೆ ಚಾಗ, ಯೋಗ!

ಕವಿ ಭಕ್ತಿಯ ವಿಚಾರದಲ್ಲಿ ತಳೆದಿರುವ ನಿಲವೇನು? ಎಂಬುದಕ್ಕೆ ಕವಿತೆ ಉತ್ತರವಾಗಿದೆ. ಕವಿಚೇತನಕ್ಕೆ ಭಕ್ತಿಯ ಮಾರ್ಗ ಪೂರ್ಣಧಾಮವಾಗಿ ಕಾಣುತ್ತದೆ. ಕವಿ ಸ್ವರ್ಗ, ವೈಕುಂಠ, ಮೋಕ್ಷ ಈ ಯಾವುದೂ ತನಗೆ ಬೇಡ ನಿನ್ನ ಪ್ರೀತಿಯೊಂದಿದ್ದರೆ ಸಾಕು ಎಂದು 'ಸರ್ವಾಂತಾರ ತ್ಯಾಗಿ'ಯಾಗಿ ಆಲೋಚಿಸುತ್ತಾರೆ.

ಹೀಗೆ ಕುವೆಂಪು ತಾಯಿ ಸೃಷ್ಟಿ ಚೈತನ್ಯದ ಶಕ್ತಿಯಾಗಿದ್ದಾಳೆ ಎಂದು ಅಭಿಪ್ರಾಯಪಡುತ್ತಾರೆ. ತಾಯಿಯೇ ಸರ್ವತ್ವ. ಅವಳು ಸರ್ವಸೃಷ್ಟಿಯಲ್ಲಿ ನೆಲೆಸಿದ್ದಾಳೆ. ಎಂಬ ನಿಲವು ಅವರ ಕವಿತೆಗಳಿಂದ ವ್ಯಕ್ತವಾಗುತ್ತದೆ. ಸಮಾಜದ ಮೂಲಘಟಕವೇ ಸಂಸಾರ. ಸಂಸಾರ ಸುಖದ ಸಾರವೆಂದು ಕೆಲವರು ಹೇಳಿದರೆ, ಆ ಸುಳಿಯಲ್ಲಿ ಸಿಕ್ಕಿಕೊಂಡರೆ ಮುಕ್ತಿಯಿಲ್ಲ ಎಂದು ಕೆಲವರು ಉಪದೇಶಿಸುತ್ತಾರೆ. ಸಂಸಾರ ಬದುಕಿನ ಒಂದು ಭಾಗವಾದುದರಿಂದ ಅಸಡ್ಡೆಯಿಂದ ಇರದೆ ಪ್ರೀತಿ ತಾಳುವುದು ಶ್ರೇಯಸ್ಕರ. ಕೇವಲ ಭೋಗವೊಂದೇ ದಾಂಪತ್ಯದ ಗುರಿಯಲ್ಲ. ದಾಂಪತ್ಯ ಕಾಮದ ಕೆಸರಾಗದೆ ಪ್ರೇಮದ ಪರಿಮಳವಾಗಬೇಕು. ಪ್ರೇಮಮಯವಾದ ದಾಂಪತ್ಯದಿಂದ ಸಂಸಾರ ಸುಖಮಯವಾಗಿರುತ್ತದೆ. ಸಂಸಾರ ಸನ್ಯಾಸಗಳಲ್ಲಿ ಯಾವುದು ಮೇಲುಕೀಳು ಎಂದು ಹೇಳುವಂತಿಲ್ಲ. ಇವು ಬಾಳಿನ ಎರಡು ಮುಖಗಳು ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣರಾದ ದೇವರೆಲ್ಲ ಸಂಸಾರಿಗಳೆಂಬುದನ್ನು ಮರೆಯುವಂತಿಲ್ಲ.

ಆದ್ದರಿಂದ ಜಗತ್ತಿನ ಸಾಹಿತ್ಯದಲ್ಲಿ ಪ್ರೇಮಕಾವ್ಯಕ್ಕೆ ಬರ ಇಲ್ಲ. ಪ್ರೇಮವೇ ಮಾನವನ ಸಕಲ ಸಾಹಸ ಪ್ರಯತ್ನಗಳಿಗೂ ಮೂಲ ಪ್ರೇರಕಶಕ್ತಿ, ಚಾಲಕಶಕ್ತಿ. ಜೀವನದ ಯಶಸ್ಸಂತೆ ಸಂಸಾರಯಶಸ್ಸು ಕೂಡ ಪ್ರೇಮವನ್ನು ಅವಲಂಬಿಸಿದೆ. ಪ್ರೇಮದ ಹಿನ್ನಲೆಯಲ್ಲಿ ದಾಂಪತ್ಯದ ಸಕಲ ಮುಖಗಳನ್ನು ವಿವರಿಸರುವ ಕವಿಗಳಲ್ಲಿ ಕುವೆಂಪು ಅವರು ಅಗ್ರಗಣ್ಯರು. "ಸ್ತ್ರೀ ಸಮಾಜದ ವಿಷಯದಲ್ಲಂತು ಅವರಿಗೆ ಅಪಾರಗೌರವ, ವಿಶೇಷ ವಿಶ್ವಾಸ, ನಿರ್ವ್ಯಾಜ ಪ್ರೇಮ. ಸೌಂದರ್ಯದ ಅಧಿದೇವತೆಯೆಂದಲ್ಲ, ಲಾವಣ್ಯದ ಮೂರ್ತಿಯೆಂದಲ್ಲ, ಅಂತಸ್ಸೌಂದರ್ಯದ ತವನಿಧಿಯೆಂದು, ನಿಷ್ಕಲ್ಮಷ ಪ್ರೇಮದ ತವರೆಂದು, ಸೃಷ್ಟಿಯ ಸ್ಫೂರ್ತಿಶಕ್ತಿಯೆಂದು ಅವಳು ಅವರ ಶ್ಲಾಘನೆಗೆ ಭಾಜನಳಾಗಿದ್ದಾಳೆ. ನಿಸರ್ಗಸೌಂದರ್ಯದಂತೆಯೇ ಮಾನಿನಿಯ ಬಾಹ್ಯಸೌಂದರ್ಯವೂ ಆಕರ್ಷಣೀಯವಾಗಿದೆ, ನಿಜ: ಸಚ್ಚಿದಾನಂದ ಸ್ವರೂಪಿಯಾದ ಅವಳ ಅಂತಸ್ಸತ್ವಕ್ಕೆ ಅವರು ಮಾರುಹೋಗಿದ್ದಾರೆ, ಅವರ ದೃಷ್ಟಿಯಲ್ಲಿ ಹೆಣ್ಣು ವಿಲಾಸಿನಿಯಲ್ಲ. ಗಂಡಸಿಗೆ ಆನಂದ ಕೊಡುವ ಬರಿಯ ಮಡದಿಯಲ್ಲ, ಅವನ ಮನಸ್ಸಿನ ಕಲ್ಮಷವನ್ನು ಪರಿಹರಿಸುವ ಮಗಳು ಅಹುದು, ಅವನನ್ನು ಪೋಷಿಸಿ ರಕ್ಷಿಸುವ ತಾಯಿಯೂ ಹೌದು. ಅವನನ್ನು ಕೈಹಿಡಿದು ಆತ್ಮೋದ್ಧಾರದ ಕಡೆಗೆ ನಡೆಸುವ

ದೇವಿಯೂ ಹೌದು"[೧] ಎಂದು ದೇಜಗೌ ಅಭಿಪ್ರಾಯಪಡುತ್ತಾರೆ. ಕುವೆಂಪು ತಮ್ಮ ಕಾದಂಬರಿ, ಮಹಾಕಾವ್ಯದಲ್ಲಿ, ಪ್ರೇಮ ಪ್ರಣಯ ಶೃಂಗಾರಗಳ ವಲಯದಲ್ಲಿ ಬರುವ ಎಲ್ಲ ಭಾವಗಳನ್ನು ವರ್ಣಿಸಿದ್ದಾರೆ. ಆದ್ದರಿಂದ ಪ್ರೇಮ ಮತ್ತು ದಾಂಪತ್ಯ ಬಗ್ಗೆ ಕುವೆಂಪು ಅವರ ನಿಲುವು ವಿಶಿಷ್ಟವಾಗಿದೆ. ಹೆಣ್ಣು ಭೋಗದ ವಸ್ತುವಲ್ಲ, ಅಧ್ಯಾತ್ಮಸಿದ್ಧಿಯ ಶಿಖರಕ್ಕೊಯ್ಯುವ ಪ್ರೇಮದ ಸಂಕೇತವೆಂದು ಭಾವಿಸುತ್ತಾರೆ. ಪ್ರೀತಿಗೆ ಕುವೆಂಪು ಅವರ ಕಾವ್ಯದಲ್ಲಿ ಒಂದು ಮಹತ್ವದ ಸ್ಥಾನವಿದೆ.

ಕವಿಗೆ ಪ್ರೀತಿ ಒಂದು ಜೀವನತತ್ವವಾಗಿದೆ. ಅವರ ಬಹುಪಾಲು ಕವಿತೆಗಳಲ್ಲಿ ಈ ತಾತ್ವಿಕ ಚಿಂತನೆಯು ದಟ್ಟವಾಗಿದೆ. ಕವಿ ಅಂತಿಮವಾಗಿ ಪ್ರೀತೀಯ ದೈವೀಕರಣದ ನೆಲೆಯನ್ನು ತಲುಪುತ್ತಾರೆ. "ಶ್ರಮಸಂಸ್ಕೃತಿಯ ಪ್ರತಿನಿಧಿಯಾದ ರೈತನನ್ನು ಕುವೆಂಪು 'ನೇಗಿಲಯೋಗಿ' ಎಂದು ಕರೆದಂತೆ, ಪ್ರಣಯದೇವತೆಯಾದ ಹೆಣ್ಣನ್ನು 'ಸೌಂದರ್ಯಯೋಗಿ'"[೨] ಎನ್ನುತ್ತಾರೆ ಎಂದು ನರಹಳ್ಳಿ ಬಾಲಸುಬ್ರಹ್ಮಣ್ಯ ಅಭಿಪ್ರಾಯಪಡುತ್ತಾರೆ.

ಕುವೆಂಪು ಅವರನ್ನು ದಾರ್ಶನಿಕ ಕವಿ, ರಸಋಷಿ ಎಂದು ಕರೆದರೂ, ಅವರು ಸಂಸಾರದಿಂದ ಎಂದೂ ವಿಮುಖರಾದವರಲ್ಲ. 'ಕವಿಗೀ ಸಂಸಾರವೆ ಪೂಜೆ' ಎಂದು ಭಾವಿಸಿ ಸಂಸಾರಸುಖವನ್ನು ಭಗವಂತನ ಪ್ರಸಾದವಾಗಿ ಸ್ವೀಕರಿಸಲು ಸಿದ್ಧರಾಗುತ್ತಾರೆ. ಸಂಸಾರದಲ್ಲೂ ಭಗವಂತನ ಕೃಪೆಯನ್ನು ಕಾಣುತ್ತಾರೆ. ಕವಿಯ ದಾಂಪತ್ಯ ದರ್ಶನ ಕೇವಲ ಕಲ್ಪನಾಲೋಕದ ಚಿತ್ರಣವಲ್ಲ; ಸ್ವ ಅನುಭವದ ಪರಿಣಾಮವಾಗಿ ಅವರು ಕಂಡುಕೊಂಡ ಸತ್ಯದರ್ಶನ. ಕುವೆಂಪು ಅವರು ಶ್ರೀರಾಮಕೃಷ್ಣಾಶ್ರಮದ ವಾಸಿಯಾಗಿ, ಕಾವ್ಯಕೃಷಿ ಮತ್ತು ಅಧ್ಯಾತ್ಮ ಸಾಧನೆಯಲ್ಲಿ ತೊಡಗಿ ಬ್ರಹ್ಮಾನಂದ ಮತ್ತು ಕಾವ್ಯಾನಂದಗಳನ್ನು ತುಂಬಿಕೊಳ್ಳುತ್ತಾರೆ. ಬಹುದಿನಗಳವರೆಗೆ ಮದುವೆಯ ಕಡೆಗೆ ಗಮನಹರಿಸದೆ ಏಕಾಂತ ಜೀವನವನ್ನು ಅನುಭವಿಸುತ್ತಾರೆ.. ಈ ವಿಚಾರವಾಗಿ ಹೇಳಿರುವ ಮಾತುಗಳು ಹೀಗಿವೆ.

"ನನಗೆ ಮದುವೆಯಲ್ಲಾಗಲಿ ಸಂಸಾರದಲ್ಲಾಗಲಿ ಜಿಗುಪ್ಸೆಯೂ ಇಲ್ಲ; ಅದು ಪಾಪವೆಂದೂ ತಿಳಿದಿಲ್ಲ. ಆದರೆ ವಿವಾಹವೂ ಅದರ ತರುವಾಯ ಬರುವ ಬಂಧನಗಳೂ ನನ್ನ ಧ್ಯೇಯ ಸಾಧನೆಗೆ ಅಡಚಣೆಗಳೆಂದು ತ್ಯಾಗಮಾಡಿರುತ್ತೇನೆ"[೩] ಎಂದುಹೇಳುತ್ತಾರೆ.

---

೧. ದೇಜಗೌ : ಕುವೆಂಪು ಸಾಹಿತ್ಯ ; ಕೆಲವು ಅಧ್ಯಯನಗಳು, ಸಂಪುಟ ೩, ಪುಟ. ೮೦.

೨. ನರಹಳ್ಳಿ ಬಾಲಸುಬ್ರಹ್ಮಣ್ಯ : ಕುವೆಂಪು ಕಾವ್ಯ, ಅಂಕಿತ ಪುಸ್ತಕ, ಪುಟ. ೧೧೦.

೩. ಹರಿಹರಪ್ರಿಯ (ಸಂ): ಕುವೆಂಪು ಪತ್ರಗಳು.

ಮೇಲಿನ ಮಾತಿನಿಂದ ಕವಿ ಸಂಸಾರದ ಬಗ್ಗೆ ಯಾವ ಮನೋಧರ್ಮವನ್ನು ಹೊಂದಿದ್ದರು ಎಂಬುದು ತಿಳಿಯುತ್ತದೆ. ಕುವೆಂಪು ಸಾಂಸಾರಿಕ ಜೀವನವನ್ನು ತಿರಸ್ಕರಿಸಿದವರಲ್ಲ, ಬದಲಾಗಿ ಅವರು ತಮ್ಮ ಸಾಧನೆಗೆ ಮದುವೆ ಎನ್ನುವುದು ಬಂಧನವಾಗುತ್ತದೆ ಎಂದು ನಿರ್ಧರಿಸಿ ಕೆಲಕಾಲ ಸನ್ಯಾಸಿ ಜೀವನವನ್ನು ನಡೆಸುತ್ತಾರೆ. ನಂತರ ದಾಂಪತ್ಯ ಪ್ರಕೃತಿಯ ಒಂದು ಭಾಗ ಎಂದು ತಿಳಿದು ಸಾಂಸಾರಿಕ ಜೀವನವನ್ನು ಅಪೇಕ್ಷಿಸುತ್ತಾರೆ.

೧೯೩೭ರಂದು ಶ್ರೀಮಂಜಪ್ಪಗೌಡರಿಗೆ ಪತ್ರವನ್ನು ಬರೆಯುತ್ತಾರೆ. ಈ ಪತ್ರವು ಕುವೆಂಪು ಅವರ ಸ್ತ್ರೀದೃಷ್ಟಿ ಧೋರಣೆಗಳನ್ನು ತಿಳಿಸುತ್ತದೆ. ಅಲ್ಲದೆ ಅವರ ಮನಸ್ಸು ಮದುವೆಗೆ ಒಪ್ಪಿಗೆ ನೀಡಲು ನಿಶ್ಚಯಿಸಿರುವುದಕ್ಕೆ ಪತ್ರ ಗುರುತಾಗಿದೆ. ಆ ಪತ್ರದಲ್ಲಿ 'ನನಗೆ ಬೇಕಾದವಳು ಆತ್ಮದ ಸಂಗಾತಿಯೇ ಹೊರತು ಬರಿಯ ಒಡಲಿನ ಒಡನಾಡಿಯಲ್ಲ' ಎಂದೂ ತಿಳಿಸುತ್ತಾರೆ. ಕುವೆಂಪು ಅವರಿಗೆ ಅವರ ಧರ್ಮಪತ್ನಿಯಾದ ಹೇಮಾವತಿ ಅವರೇ ಕಾವ್ಯಕ್ಕೆ ಮೂಲ ಪ್ರೇರಣೆಯಾಗಿದ್ದಾರೆ.

ತಾವು ಮದುವೆಗೆ ಒಪ್ಪಿದ ನಂತರ ಬರೆದ ಮೊದಲ ಕವಿತೆಯೇ 'ಹೆಣ್ಣು'. ಈ ಕವಿತೆಯು ಹೆಣ್ಣಿನ ಸಕಲಸಹಜ ಗುಣಗಳನ್ನು ವರ್ಣಿಸುತ್ತದೆ. ಕವಿ ಹೆಣ್ಣಿನ ಸಹಜ ಸೌಂದರ್ಯವನ್ನು ವರ್ಣಿಸುವುದರ ಜತೆಗೆ ತನ್ನ ಜೀವನಕ್ಕೆ ಸಂಗಾತಿ ಎಷ್ಟರಮಟ್ಟಿಗೆ ಅವಶ್ಯಕ ಎಂಬುದನ್ನು ಹೇಳಿಕೊಳ್ಳುತ್ತಾರೆ.

ಸಂಗಾತಿಯಿಂದ ಸಾಂಸಾರಿಕ ಸಿದ್ಧಿ ದೊರೆಯುತ್ತದೆ ಎಂದು ಎಳೆಎಳೆಯಾಗಿ ವಿವರಿಸುತ್ತಾರೆ.

ಪರಮ ಸಂಪೂರ್ಣತೆಯೆ ಕೋಮಲತೆಯೊಡಗೂಡಿ
ಸೌಂದರ್ಯ ರೂಪದಿಂದಿಳೆಗೆ ಬರಲದೆ ಹೆಣ್ಣು
ತಾನಾಗಿ ಮೋಹಿಸುತ್ತಿದೆ ಕಬ್ಬಿಗರ ಕಣ್ಣು
ರೂಪಾಗ್ನಿರಾಶಿಗೆ ಪತಂಗದಂದದೊಳೋಡಿ (ಹೆಣ್ಣು)
ಮುಗ್ಗುತಿದೆ, ಮೃತ್ಯುಮಾಧುರ್ಯಕ್ಕೆ ಮನಸೋತು:
ನೀನಿರಲ್ಕೆಲ್ಲ ಸಾಧನೆಗೆ ನೀಂ ಫಲಸಿದ್ಧಿ!
ನೀನಿಲ್ಲದಿಹ ತಪಕಿಹುದೆ ಶುದ್ಧಿ ಮೇಣ್ ಬುದ್ಧಿ?

ಕವಿ ಹೆಣ್ಣಿನ ಸೌಂದರ್ಯವನ್ನು ವರ್ಣಿಸುತ್ತಿದ್ದಾರೆ. ಹೆಣ್ಣೆಂದರೆ ಕವಿಗೆ ಪುಣ್ಯಾಂಗನೆ. ಅವಳಿಲ್ಲದೆ ಕಲೆ, ಕೀರ್ತಿ ಸಿರಿತನಗಳು ಯಾವುದು ಇಲ್ಲ ಎನ್ನುತ್ತಾರೆ. ಕಣ್ಣಿಗೆ ಸುಂದರಿಯಾಗಿ, ಮನಕೆ ಮಂಗಳೆಯಾಗಿ ಚೆಲುವು ಒಲವುಗಳೆರಡೂ ಒಂದಾಗಿ ಬಂದ ಸತಿಯೇ ಪ್ರೇಮಸತಿ. ಆದ್ದರಿಂದ ಕವಿ ಹೃದಯದ ಭಾವವಾಗಿದ್ದಾಳೆ. ಹೆಣ್ಣು ಕವಿಯ

ಸಕಲ ಸಾಧನೆಗೆ ಸ್ಫೂರ್ತಿಯಾಗಿ, ಕವಿಜೀವನಕ್ಕೆ ದಾರಿದೀಪವಾಗಿದ್ದಾಳೆ ಎಂದು ಹೇಳುತ್ತಾರೆ. 'ಪ್ರೇಮಕ್ಕೆ' ಎನ್ನುವ ಕವಿತೆಯು ಕವಿಯ ಜೀವನ ಪ್ರೇಮದ ವಿಕಾಸದ ಹೆಜ್ಜೆಗಳನ್ನು ಗುರುತಿಸಲು ಸಹಾಯಕವಾಗಿದೆ. ಕವಿ ತನ್ನ ಭಾವೀ ಪತ್ನಿಯನ್ನು ಕುರಿತು ರಚಿಸಿರುವ ಪದ್ಯವಾಗಿದೆ. ಕಬ್ಬಿಗಗೆ ನಿನ್ನೆದೆಯೆ ಕಟ್ಟಕಡೆಯಾಶ್ರಮಂ, ಮೇಣುತ್ತಮಾಶ್ರಯಂ? ಎನ್ನುವಷ್ಟರಮಟ್ಟಗೆ ಕವಿಯ ಮೈಮನದಲ್ಲಿ ಹೆಣ್ಣು ಅವತರಿಸಿಕೊಂಡಿದ್ದಾಳೆ.

ಪ್ರೇಮಾವತಾರಿಣಿಯೆ, ಓ ನನ್ನ ಹೇಮಾಕ್ಷಿ,
ನಿನ್ನಪ್ಪುಗೆಯೆ ನನಗೆ ಸತ್ಯಸ್ಯಸತ್ಯಮಂ (ಪ್ರೇಮಕ್ಕೆ)
ತೋರ್ಪುದಾನಂದಮಂ, ಮಿಕ್ಕೆಲ್ಲ ಮಿಥ್ಯೆಯಂ

ಈ ಕವಿಗೆಗೆ ಸಂಬಂಧಿಸಿದಂತೆ ಕುವೆಂಪು ಅವರ ಮಾತು ಹೀಗಿದೆ.

"ನಲೆಯೊಬ್ಬಳ ಅವಶ್ಯಕತೆಯ ಉತ್ಕಟತೆ ಎಂತಹ ವಿಷಮ ಮಟ್ಟಕ್ಕೇರಿತು ಎಂಬುದನ್ನು ಬಹಿರಂಗಗೊಳಿಸುತ್ತದೆ ಆ ಕವನ"[೧] ಎಂದಿದ್ದಾರೆ ನಿನ್ನ ಆಲಿಂಗವೆ ನನಗೆ ಸತ್ಯವನ್ನು ತೋರಿ ಆನಂದವನ್ನು ನೀಡುತ್ತದೆ, ಅಲ್ಲದೆ ಉಳಿದ ಮಿಥ್ಯೆಗಳಿಂದಲೂ ನನ್ನನ್ನು ಪಾರುಮಾಡುತ್ತದೆ ಎಂದು ಕವಿ ಹೇಳುತ್ತಾರೆ. ಈ ಮಾತನ್ನು ನೋಡಿದರೆ ಕವಿ ಸಂಕೋಚದಿಂದ ಹಿಂಜರಿದಿಲ್ಲ ಎನ್ನುವ ಅಂಶ ತಿಳಿಯುತ್ತದೆ.' ಹೇಮಾವತಿಯವರು ಕವಿಯ ಹೆಂಡತಿಯಾಗದಿದ್ದರೂ ಕವಿ 'ಹೇಮಾಕ್ಷಿ' ಎಂದು ಕರೆಯುವುದು ಕವಿಯ ಉತ್ಸಾಹವನ್ನು ತಿಳಿಸುತ್ತದೆ. ಕಾವ್ಯ, ವಿಜ್ಞಾನ, ತತ್ವ, ಪ್ರಕೃತಿ ಸೌಂದರ್ಯ, ಬ್ರಹ್ಮಚರ್ಯ ಈ ಸರ್ವ ವಿಚಾರಗಳಿಗೆ ಸತಿಯೇ ಪ್ರೇರಕಶಕಿಯಾಗಿದ್ದಾಳೆ ಎಂದು ಕವಿ ಗುರುತಿಸುತ್ತಾರೆ.

ಕುವೆಂಪು ಅವರಿಗೆ ಹೇಮಾವತಿಯವರು ಆದರ್ಶಸತಿ, ಆದರ್ಶ ಗೃಹಿಣಿ, ಅವರಿಗೆ ಸರ್ವ ವಿಧದಲ್ಲಿಯೂ ಅನುರೂಪೆಯಾದವರು. ಅವರ ಸಾಧನೆ ಸಿದ್ಧಿಗಳಿಗೆ ಯಶಸ್ಸುಗಳಿಗೆ ಕಾರಣರಾದವರು. ಕವಿಯ ಹೃದಯಕ್ಕೆ ಮಾತ್ರವಲ್ಲ ಕಾವ್ಯಕ್ಕೂ ಸ್ಫೂರ್ತಿಯಾಗಿದ್ದಾರೆ. ೫.೪.೧೯೩೭ರಂದು ರಚಿಸಿದ 'ಗುರುವಿನ ಪ್ರಾರ್ಥನೆ' ಎಂಬ ಕವಿತೆಯು ಹಲವು ವಿಚಾರಗಳಿಂದ ಮುಖ್ಯವಾದ ಕವಿತೆ. ಕುವೆಂಪು ತಮ್ಮ ಮದುವೆ ಇನ್ನೂ ಒಂದು ತಿಂಗಳಿದ್ದಾಗ ಆ ಸಂದರ್ಭದಲ್ಲಿ ಬರೆದ ಕವಿತೆಯಾಗಿದೆ.

ವಂದಿಸುವೆ ಚರಣಾರವಿಂದಕ್ಕೆ ಮುಡಿಯಿಟ್ಟು!
ಇಂದು ಆಶೀರ್ವದಿಸು ಕಂದನನು, ಗುರುದೇವ
ಮುಂದೆ ಬರುವಂದು ಸಂಸಾರಿ ನಾನು! (ಗುರುವಿನ ಪ್ರಾರ್ಥನೆ)

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ೧೯೯೩, ಪುಟ. ೮೬೧.

ಬಿದ್ದಂದು ಮೇಲೆತ್ತಿ ಕೆಚ್ಚೊರೆದು ಸಂತವಿಸಿ
ಬ್ರಹ್ಮಚರ್ಯದೊಳೆಂತು ಕೈಹಿಡಿದು ಕಾಯ್ದಿಹೆಯೊ
ಅಂತೆ ಸಂಸಾರಿಯನು ಸಲಹು ನೀನು!

ಬ್ರಹ್ಮಚಾರಿಯನ್ನು ಕೈಹಿಡಿದು ನಡೆಸಿದಂತೆ ಸಂಸಾರಿಯಾಗುವ ನನ್ನನ್ನು ಕೈಹಿಡಿದು ಸಲಹು ಎಂದು ಗುರುವಿನಲ್ಲಿ ಪ್ರಾರ್ಥಿಸುತ್ತಾರೆ. ಇದು ರಾಮಕೃಷ್ಣ ಪರಮಹಂಸರನ್ನು ಕುರಿತು ಬರೆದ ಕವಿತೆ. ತಾನು ಕೈಹಿಡಿವ ನಲ್ಲೆಯ ಜತೆಯಲ್ಲಿ ಪ್ರೇಮನೈವೇದ್ಯ ದೊರೆಯಲು ನಿನ್ನ ಕೃಪೆ ಬೇಕೆಂದು ಗುರುವನ್ನು ಪ್ರಾರ್ಥಿಸುತ್ತಾರೆ.

ಸರಸ ಮೋಹಕೆ ಮನವ ಮಾರಿ ನಿನ್ನನು ಮರೆತು
ಜಡಹೃದಯನಾಗದಂತೆನಗೆ ಕೃಪೆಗೈ, ಗುರುವೆ
ಓ ಎನ್ನ ಜೀವನದ ಕಲ್ಪತರುವೆ!

ತನ್ನ ಸರ್ವೋದ್ಧಾರಕ್ಕೆ ಗುರುಕೃಪೆಯೇ ಕಾರಣವೆಂದು, ಅದೇ ತಮಗೆ ವಜ್ರರಕ್ಷೆಯಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಕವಿ ತಾನು ಸಂಸಾರಿಯಾಗುವ ಮೊದಲು ತನ್ನ ಮನದ ದುಗುಡವನ್ನು ಗುರುವಿನ ಮುಂದೆ ಪ್ರಾಥನೆಯ ರೂಪದಲ್ಲಿ ನಿವೇದಿಸಿಕೊಳ್ಳುತ್ತಿದ್ದಾರೆ. ಕವಿ ತಮ್ಮ ಆಂತರ್ಯದೊಳಗಿರುವ ನೋವನ್ನು ಪ್ರಾರ್ಥನೆಯ ಮುಖಾಂತರ ಗುರುವಿನ ಬಳಿ ಹೇಳಿಕೊಳ್ಳುತ್ತಿದ್ದಾರೆ. ಕವಿ ತಾನು ಸಂಸಾರ ಮೋಹಕ್ಕೆ ಎಲ್ಲಿ ಬಲಿಯಾಗಿ, ಮನಸ್ಸನ್ನು ಮಾರಿಕೊಂಡು ನಿನ್ನನು ಮರೆಯದಂತೆ, ಜಡಹೃದಯಿಯಾಗದಂತೆ ನನಗೆ ಕೃಪೆಮಾಡು ,

'ಓ ಎನ್ನ ಜೀವನದ ಕಲ್ಪತರುವೆ' ಎಂದು ಪ್ರಾರ್ಥಿಸುತ್ತಾರೆ.

ಕವಿ ತಾನು ಎಲ್ಲಿ ಸರಸಮೋಹಕೆ ಬಲಿಯಾಗಿ, ನಿನ್ನನು ಮರೆತು ಜಡಹೃದಯಿಯಾಗುವೆನೊ ಎಂದು ತಿಳಿದು ಜಡತೆಯ ಮನಸ್ಸು ಬಾರದಂತೆ ನನಗೆ ಕೃಪೆಮಾಡು ದೇವಾ ಎಂದು ಪ್ರಾರ್ಥಿಸುತ್ತಾರೆ. ಓ ಎನ್ನ ಜೀವನದ ಕಲ್ಪತರುವೆ ಎನ್ನುವ ಕವಿಯ ಮಾತು ಗುರುವಿನ ಮಹತ್ತನ್ನು ತಿಳಿಸುತ್ತದೆ.

ಕುವೆಂಪು ಅವರಲ್ಲಿ ಪ್ರೀತಿಯ ಭಾಷೆಯೂ ಧಾರ್ಮಿಕ ಪರಿಭಾಷೆಯ ರೂಪ ಪಡೆದುಕೊಳ್ಳುತ್ತದೆ. ಸರಸ ಮೋಹಕ್ಕೆ ಮನವನ್ನು ಮಾರಿಕೊಳ್ಳದೆ ಎಚ್ಚರದಿಂದಿದ್ದು, ತನ್ನ ಗುರಿ ಸಾಧಿಸಬೇಕೆಂಬ ಹಂಬಲ ಇಲ್ಲಿದೆ.

'ರಸಪೂಜೆ' ಕವಿತೆಯಲ್ಲಿ ಕವಿ ಹೆಂಡತಿಯ ಚಿತ್ರಕ್ಕೆ ಪ್ರತಿಯಾಗಿ ದೈವೀಕರಣದ ನೆಲೆಯ ಚಿತ್ರವನ್ನು ಕೊಡುತ್ತಾರೆ.

ನಿನ್ನ ಮೈ ದೇಗುಲದಿ
ನಾನು ಪೂಜಾರಿ:
ನೀನೆ ದೇವತೆ ಅಲ್ಲಿ,
ನನ್ನೆದೆಯ ನಾರಿ

ಕವಿಯ ಪ್ರಣಯ ಧಾರ್ಮಿಕ ಪರಿಭಾಷೆಯ ಒಳಗೆ ರೂಪಿತವಾಗಿರುವುದನ್ನು ಕಾಣಬಹುದು. ಈ ಕಾರಣದಿಂದಲೇ ತೀವ್ರ ವ್ಯಾಮೋಹಿಯಾಗಿ ಹೆಂಡತಿಯನ್ನು ಕುವೆಂಪು ಸ್ವೀಕರಿಸಿದಂತೆ ತೋರುವುದಿಲ್ಲ. ಅಂಥ ಕ್ಷಣಗಳೂ ಅವರ ಕಾವ್ಯದಲ್ಲಿ ಇಲ್ಲವೆಂದಲ್ಲ. ಆದರೆ ಅದನ್ನು ಮೀರಿ 'ಗೌರವ'ವೇ ಪ್ರಧಾನವಾಗಿಬಿಡುತ್ತದೆ. ಅವರೇ ಕವಿತೆಯ ಕೆಳಗೆ ಟಿಪ್ಪಣಿಯ ರೂಪದಲ್ಲಿ ಆಡಿರುವ ಮಾತುಗಳು ಉಲ್ಲೇಖಾರ್ಹವಾಗಿವೆ.

"ನಾನು ಮದುವೆಯಾದ ಮೊದಲಿನಿಂದಲೂ ನನ್ನ ಸಹಧರ್ಮಿಣಿಯ ಮೈಯನ್ನು ಆಕೆಯ ಆತ್ಮವನ್ನೆಂತೊ ಅಂತೆಯೇ ಒಲಿಯುತ್ತಾ ಬಂದಿದ್ದೇನೆ"[೧]

ಕವಿ ದೇಹ ಮತ್ತು ಆತ್ಮದ ಭೇದವಿಲ್ಲದೆ ಅದ್ವೈತಿಯಾಗಿ ವರ್ತಿಸುವುದನ್ನು ಕಾಣಬಹುದು. ಕವಿಗೆ ಹೆಂಡತಿ ಪ್ರಣಯ ಸಂಗಾತಿ ಮಾತ್ರವಲ್ಲ ದೇವತಾಶಕ್ತಿಯು ಕೂಡ 'ಹೇಮಾಸತಿಯೆ' ಎಂದು ಪತ್ನಿಯ ಹೆಸರನ್ನು ಹೇಳುವಾಗ ಕವಿ 'ಹೇಮಾ' ಹೆಸರನ್ನು ಬಿಡಿಸಿ ಬರೆಯುವ ಮೂಲಕ 'ಹೇ'ಮಾ ಸತಿಯೇ ಎಂದು ಹೇಳಿ ಆಕೆ ಸತಿ ಮಾತ್ರವಲ್ಲ, 'ಮಾತೆ'ಯೂ ಹೌದು ಎಂದು ಪೂಜ್ಯಭಾವವನ್ನು ವ್ಯಕ್ತಪಡಿಸುತ್ತಾರೆ.

ಕವಿಯ ದಾಂಪತ್ಯ ಪರಿಕಲ್ಪನೆಯಲ್ಲಿ ಅಧ್ಯಾತ್ಮದ ಸ್ಪರ್ಶವಿದೆ "ಪ್ರಥಮಮಿಲನ" ಕವಿತೆ ದಾಂಪತ್ಯದ ವಿವರಗಳನ್ನು ನೀಡುತ್ತದೆ.

ಮೊದಲನೆಯ ಮಿಲನವೇನ್?
ಅಹುದು ಈ ಜನ್ಮದಲಿ। (ಪ್ರಥಮ ಮಿಲನ)
ಇಲ್ಲದಿರೆ, ಮರೆತ ಚಿರಪರಿಚಿತೆಯ ನಿನ್ನೊಮ್ಮೆ
ಇದಿರುಗೊಂಡಂತಾದುದೇಕೆ?
ಜನ್ಮಜನ್ಮಾಂತರದ ನಲ್ಲೆಯಾಕೆ

ದಾಂಪತ್ಯದ ಆರಂಭಕಾಲದಲ್ಲಿ ಪುರುಷನ ಮನಸ್ಸಿನಲ್ಲಿ ಹುಟ್ಟುವ ಪ್ರಣಯದ ವರ್ಣರಂಜಿತ ಚಿತ್ರವನ್ನು ಕವಿತೆ ನೆನಪಿಸುತ್ತದೆ. ಕವಿಯ ಮನಸ್ಸಿನಲ್ಲಿ ದಾಂಪತ್ಯ ಕುರಿತು ಒಂದು ವಿಚಾರವಿದೆ. ಆ ವಿಚಾರವೇ ಎಲ್ಲವನ್ನು ರೂಪಿಸುತ್ತಾ ಹೋಗುತ್ತದೆ. ಯಾವ ಜನ್ಮದ ಮೈತ್ರಿ ಈ ಜನ್ಮದಲ್ಲಿ ಬಂದು ನಮ್ಮಿಬ್ಬರನು ಮತ್ತೆ ಬಂಧಿಸಿದೆ

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ೧೯೯೩, ಪುಟ. ೯೦೦.

ಎನ್ನುತ್ತಾರೆ. ಕವಿ ತಮ್ಮಿಬ್ಬರ ಸಂಬಂಧ ಜನ್ಮಜನ್ಮಾಂತರದ್ದು ಎಂದು ಸಂಬಂಧದ ಗಾಢತೆಯನ್ನು ವಿವರಿಸುತ್ತದೆ.

> ನಾ ನಿನ್ನ ನೀನೆನ್ನ ನೋಡೆ
> ಚೆಲುವೆ, ಶರಣಾದೆ ನೀನೆನ್ನನೊಪ್ಪಿ
> ಸಂಪೂರ್ಣನಾದೆ ನಿನ್ನನಪ್ಪಿ

ಕವಿ ತನ್ನ ದಾಂಪತ್ಯದ ಮೊದಲ ರಾತ್ರಿಯನ್ನು ಕುರಿತು ವಿವರಿಸುತ್ತಿದ್ದಾರೆ. ಮನುಷ್ಯನ ಮನಸ್ಸು ಹೇಗೆ ಕಾಮದ ಆಸೆಯಲ್ಲಿ ತೊಡಗುತ್ತದೆ ಎಂಬುದಕ್ಕೆ ಈ ಕವಿತೆ ಸಾಕ್ಷಿ. ನಿಸರ್ಗಸಹಜವಾದ ಕಾಮ ಪ್ರೇಮವಾಗಿ ಪರಿವರ್ತನೆಗೊಳ್ಳುವುದನ್ನು ಕವಿತೆಯಲ್ಲಿ ಕಾಣಬಹುದು.

> ಒಲುಮೆ ಒಂದು ದಿವ್ಯರಕ್ಷೆ
> ಇಹ ಸಮಸ್ಯೆಗೆ
> ಮದುವೆ ಅದಕೆ ಮಧುರ ದೀಕ್ಷೆ
> ಗೃಹ ತಪಸ್ಯೆಗೆ!

ಗಂಡು ಹೆಣ್ಣುಗಳ ಪ್ರೀತಿಸುವುದು ಒಂದು ನಿಸರ್ಗ ನಿಯಮ, ಆದ್ದರಿಂದ ಪ್ರೇಮಕ್ಕೆ ಮದುವೆ ಒಂದು ರಕ್ಷೆಯಾಗಿ, ದೀಕ್ಷೆಯಾಗಿ ಪರಿಣಮಿಸುತ್ತದೆ.

ಪ್ರೇಮವನ್ನು ನಿಕಷಕ್ಕೆ ಹಚ್ಚುವುದು ವಿರಹ. ಗಂಡ ಹೆಂಡಿರ ಬಾಳಿನಲ್ಲಿ ಅಗಲಿಕೆಯ ಸಂದರ್ಭಗಳು ಅನಿವಾರ್ಯ. ಒಲಿದ ಹೃದಯಗಳ ಬೆಸುಗೆಗೆ ವಿರಹ ಅವಶ್ಯಕವೇನೋ ಎನಿಸುತ್ತದೆ. ವಿರಹದ ಅಗ್ನಿಯಲ್ಲಿ ಬೆಂದು ಸಂಯಮದ ತಂಪಿನಲ್ಲಿ ಹದ ಹೊಂದಿದ ಪ್ರೇಮ ದೋಷರಹಿತವಾಗಿ ಹೊಳೆಯುತ್ತದೆ.

'ಪ್ರಥಮವಿರಹ' ಕವಿತೆಯಲ್ಲಿ ಕವಿ ತನ್ನ ಪತ್ನಿ ಸದಾ ತನ್ನ ಬಳಿಯಲ್ಲಿಯೇ ಇರಬೇಕೆಂದು ಅಪೇಕ್ಷಿಸುತ್ತಾರೆ. ಕವಿ ಹೆಂಡತಿ ಇರುವಾಗ ಅನುಭವಿಸುವ ಸಾಂಸಾರಿಕ ಸುಖಕ್ಕೂ, ಆಕೆ ಇಲ್ಲದಿರುವ ಸಂದರ್ಭದಲ್ಲಿ ಪಡೆಯುವ ವಿರಹಕ್ಕೂ ವ್ಯತ್ಯಾಸವಿದೆ.

> ನೀನು ಬಳಿಯಿರೆ ಹೊತ್ತು ಹರಿಯುವುದು ಹೊನಲಾಗಿ
> ಕುಣಿಕುಣಿದು ನಲಿನಲಿದು ನೊರೆನಗೆಯ ಬೀರಿ; (ಪ್ರಥಮ ವಿರಹ)
> ನೀನಿಲ್ಲದಿರೆ ಕಾಲನಿಲ್ಲುವುದು ಕಲ್ಲಾಗಿ
> ಭಾರದಿಂದೆದೆಯ ಜೀವನ ಹಿಂಡಿ ಹೀರಿ:

ಇದು ಕುವೆಂಪು ತಮ್ಮ ಪತ್ನಿ ತೌರಿಗೆ ಹೋದ ಸಂದರ್ಭದಲ್ಲಿ ಬರೆದ ಕವಿತೆ.

ಕವಿ ತಮ್ಮ ಹೆಂಡತಿ ಬಳಿಯಲ್ಲಿ ಇಲ್ಲದಿರುವಾಗ ತಮ್ಮ ಮನಸ್ಸಿನಲ್ಲಿ ಆಗುತ್ತಿದ್ದ ನೋವನ್ನು ವಿರಹದ ರೂಪವಾಗಿ ವ್ಯಕ್ತಪಡಿಸುತ್ತಾರೆ. ಆಕೆ ಬಳಿಯಲ್ಲಿ ಇಲ್ಲದಿರುವುದೇ ವಿರಹಕ್ಕೆ ಕಾರಣವಾಗಿದೆ. ತವರಿಗೆ ಹೋದ ಪ್ರಿಯೆಯ ಬಳಿ "ಇನ್ನೇನಾದರೂ ನೀ ಮಾಡು ಅಗಲುವುದೊಂದುಳಿದು" ಎಂದು ಪತಿ ನಿವೇದಿಸಿಕೊಳ್ಳುತ್ತಾರೆ. ಸತಿ ತವರಿಗೆ ಹೋದಾಗ ಕವಿಯ ಜೀವ ಚಿತೆಯಾಗುತ್ತದೆ.

ನೀನು ಬಳಿಯಿಲ್ಲದಿದ್ದರೆ, ಓ ನಲ್ಲೆ ಹೇಮಾಕ್ಷಿ
ಜಗವೆಲ್ಲ ಜಡಬಂಡೆ, ಬೇಸರದ ಬೀಡು!
ನೀನಗದೀ ಕವಿಗೆ ಇಂದು ಈ ಮಲೆನಾಡು.
ಹಿರಿ ಮರಳುಗಾಡು!

ಕವಿಗೆ ಪ್ರಕೃತಿ ಹೇಗೆ ಸ್ಫೂರ್ತಿಯಾಗಿತ್ತೋ, ಹಾಗೆಯೇ ಅದು ಬೇಸರದ ಬೀಡಾಗುತ್ತದೆ. ಕುವೆಂಪು ತಮ್ಮ ಇಡೀ ಕಾವ್ಯದ ಉದ್ದಕ್ಕೂ ನಿಸರ್ಗವನ್ನು ಆರಾಧಿಸಿದ್ದಾರೆ, ಆ ಆರಾಧನೆಯನ್ನೇ ಪರಮನಾರಾಧನೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ಯಾವವೂ ಕವಿಗೆ ಮುಖ್ಯವಾಗುವುದಿಲ್ಲ. ಕವಿಗೆ 'ಮಲೆನಾಡು' ಕಾವ್ಯಸ್ಫೂರ್ತಿಯ ತಾಣ. ಆದರೆ ತನ್ನ ಹೆಂಡತಿ ಬಳಿಯಿಲ್ಲದಿರುವ ಸಂದರ್ಭದಲ್ಲಿ ಕವಿಗೆ ಮಲೆನಾಡು 'ಹಿರಿಮರಳುಗಾಡಾಗಿ' ಕಾಣುತ್ತದೆ. ಇಲ್ಲಿ 'ಮರಳು' ಶಬ್ಧ ಕವಿಯ ವಿರಹವನ್ನು ಶಕ್ತಿಪೂರ್ಣವಾಗಿ ಹಿಡಿದಿಟ್ಟಿದೆ. ಹೆಂಡತಿ ಇಲ್ಲದ 'ಉದಯರವಿ' ಮನೆ ವಿರಹಿಕವಿಗೆ ಬಾಳ್ ಚಿತೆಯಾಗಿ, ಬೇಸರದ ಬೀಡಾಗುತ್ತದೆ. ಈ ಕವಿತೆಯಲ್ಲಿ ವಿರಹದ ತೀವ್ರತೆ ಮತ್ತು ಅದರ ರೂಪಾಂತರವನ್ನು ಕಾಣಬಹುದು.

ಕುವೆಂಪು ಮದುವೆಯಾದ ನಂತರ ಸಾಂಸಾರಿಕ ಜೀವನವನ್ನು ಅನುಭವಿಸಿ, ತನ್ನ ಸತಿಯ ವಿಚಾರದಲ್ಲಿ ಒಂದು ಖಚಿತವಾದ ನಿಲವನ್ನು ವ್ಯಕ್ತಪಡಿಸುತ್ತಾರೆ. ಸತಿಯಲ್ಲೇ ಜಗನ್ಮಾತೆಯನ್ನು ಕಾಣುತ್ತಾರೆ. ಆಗ ಬರೆದ ಕವಿತೆಯೇ 'ಗುರುಕೃಪೆ'. ಈ ಕವಿತೆಗೆ ಸಂಬಂಧಿಸಿದಂತೆ ಕವಿಯ ಟಿಪ್ಪಣಿ ರೂಪದ ಮಾತುಗಳು ಹೀಗಿವೆ. "ಸತಿಯ ವಿಚಾರದಲ್ಲಿ ಮೊದಲಿನಿಂದಲೂ ನನಗಿದ್ದ ಈ ಪವಿತ್ರ ಭಾವನೆ ಮೇಲೇರುತ್ತಾ ಹೊಗಿ, ನಾನಾ ಘಟ್ಟಗಳನ್ನು ದಾಟಿ, ತುತ್ತತುದಿಯಲ್ಲಿ ಆಕೆ ಋತ ಚಿನ್ಮಯೀ ಜಗನ್ಮಾತೆಯ ಕೋಟ್ಯಾಂತರ ಅಸಂಖ್ಯ ಆವಿರ್ಭಾವದ ಅವತರಣಗಳಲ್ಲಿ ಒಂದೆಂಬ ಬುದ್ಧಿಗೆ ನೆಲಸಿತು!. ಅದರ ಪ್ರಪ್ರಥಮ ಬೀಜಸ್ವರೂಪವನ್ನು, ಹೇಮಾವತಿ ಮೈಸೂರಿಗೆ ಬಂದು, ನಾವಿಬ್ಬರೂ ಸರ್ವ ರೀತಿಯಿಂದಲೂ ಗಂಡ ಹೆಂಡಿರಾದ ನಾಲ್ಕು ತಿಂಗಳಲ್ಲಿ ಎಂದರೆ

೧೯೩೭ರಲ್ಲಿ ನಾನು ರಚಿಸಿರುವ 'ಗುರುಕೃಪೆ' ಎಂಬ ಹೆಸರಿನ ಪ್ರೇಮಗೀತೆಯಲ್ಲಿ ಅಭಿವ್ಯಕ್ತಗೊಂಡುದನ್ನು ಗುರುತಿಸಬಹುದು." [೧]

ದೇವರ ಮನೆ ಕಡೆ ನೋಡುತ್ತಿರೆ ನಾ
ಧ್ಯಾನಾನಂದದಲಿ (ಗುರುಕೃಪೆ)
ಬಂಧಿಸಿ ಹೃದಯವ ಬಂದುದು ಗುರುಕೃಪೆ
ಸುಂದರಿಯಂದದಲ್ಲಿ!

ಕವಿಗೆ 'ಹೇಮಾವತಿ' ಎನ್ನುವ ಪದ ಪ್ರಣಯ ಮಂತ್ರವಾಗಿ, ಜೀವನತಂತ್ರವಾಗಿ, ಸಿದ್ಧಿಯ ಯಂತ್ರವಾಗಿ ಪರಿಣಮಿಸುತ್ತದೆ. ಹೇಮಾ, ಹೇಮಾಂಗಿನಿ, ಹೇಮಾಕ್ಷಿ ಮೊದಲಾದ ನುಡಿಗಳು ಅವರ ಕಾವ್ಯದಲ್ಲಿ ಮೇಲಿಂದ ಮೇಲೆ ಬರುತ್ತವೆ. ಸತಿಪತಿಗಳೊಂದಾಗಿ, ಆತ್ಮಸಾಧನೆಗಾಗಿ ನಡೆಸುವ ಪೂಜೆ ಸಂಸಾರ ಪೂಜೆಯಾಗುತ್ತದೆ. ಪೂಜೆಯ ಉದ್ದೇಶದಿಂದ ನಡೆಸುವ ಕ್ರಮ ಸಾಧನೆಯ ವಿಧಾನವಾಗುತ್ತದೆ. ಆದರ್ಶ ಸಂಸಾರದಲ್ಲಿ ರಾಗವೇ ವೈರಾಗ್ಯವಾಗುತ್ತದೆ. ಭೋಗವೇ ತ್ಯಾಗವಾಗುತ್ತದೆ. ಮೋಹವೇ ಭಕ್ತಿಯಾಗಿ, ಪ್ರೇಮವೇ ಮುಕ್ತಿಯಾಗುತ್ತದೆ. ಕವಿಗೆ ಸತಿ ಬರಿಯ ಚೆಲುವೆಯಲ್ಲ, ಗುರುವಿನ ಕೃಪೆ ಸತಿಯ ಸೌಂದರ್ಯ ಕವಿಗೆ ಶಿವಸತ್ಯಗಳ ಸಾಕ್ಷಾತ್ಕಾರವಾಗಿ ಕಾಣುತ್ತದೆ. ಅವರಿಗೆ ಸತಿಯ ದೇಹ 'ದೇವನಿತ್ತ ಸ್ವರ್ಗ'ವಾಗಿದೆ.

ನಿರಿನಿರಿ ಮೆರೆದುದು ನೀಲಿಯ ಸೀರೆ
ಶರಧಿಯನುಟ್ಟಳೆ ಭೂಮಿಯ ನೀರೆ?
ಚಂದ್ರಮುಖದಲ್ಲಿ ತಾರೆಯೆ ಬಿಂದು
ಚಂದ್ರೋದಯದಲ್ಲಿ ಮಿಂದುದೆ ಸಿಂಧು?

ಈ ಗುರುಕೃಪೆ ಭಾವನೆ ಕವಿಯಲ್ಲಿ ಪ್ರೇಮದ ದೈವೀಕರಣದ ಭಾವವಾಗಿ ಅಭಿವ್ಯಕ್ತಿಯಾಗಿದೆ. ಸತಿಯ ಸೌಂದರ್ಯ ದೈಹಿಕವಾದದ್ದಲ್ಲ, ವಿಶ್ವವ್ಯಾಪಕವೂ ಆದ ಅನಂತ ಶಕ್ತಿಯಿಂದ ಕೂಡಿದ್ದು ಎಂದು ಕುವೆಂಪು ಹೇಳುತ್ತಾರೆ. ಕವಿಗೆ ಪತ್ನಿ ಕೇವಲ ಪತ್ನಿಯಾಗಿ ಉಳಿಯದೆ, ಲೋಕರಂಗದಲ್ಲಿ ಸತಿ, ನಿತ್ಯದಲ್ಲಿ ಭಗವತಿಯಾಗಿ ಕಾಣುತ್ತಾರೆ.

ಹೀಗೆ ಅವರ ಪ್ರಣಯಗೀತೆಗಳಿಗೆ ಸಾಂಸಾರಿಕ ಜೀವನ ಕೇಂದ್ರವಾಗಿದೆ. ಇಲ್ಲಿಯ ಸತಿ ಸಾಮಾನ್ಯ ಸ್ತ್ರೀಯಲ್ಲ, ವಿಶ್ವಮಾತೆ. ಕವಿ ಬರಿಯ ರಸಿಕ ಮಾತ್ರನಲ್ಲ, ಪ್ರಣಯಿ ಮಾತ್ರವಲ್ಲ, ಸಾಧಕನೂ ಹೌದು.

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ೧೯೯೩, ಪುಟ. ೮೯೮.

ಕಾಮವೊಂದೇ ಪ್ರೇಮಕ್ಕೆ ಸರ್ವಸ್ವವಲ್ಲ. ಧರ್ಮಸೂಕ್ಷ್ಮವನ್ನರಿತು ವರ್ತಿಸುವ ಪ್ರಣಯಿಗಳ ಜೀವನದಲ್ಲಿ ಕಾಮಪ್ರೇಮಗಳ ಗಡಿರೇಖೆಯನ್ನು ಗುರುತಿಸುವುದು ಕಷ್ಟವಾಗುತ್ತದೆ. ಕಾಮವಿಲ್ಲದೆ ಪ್ರೇಮವಿಲ್ಲ; ಪ್ರೇಮವಿಲ್ಲದೆ ಕಾಮವೂ ಇಲ್ಲ. ಕಾಮದ ಕೆಸರಿನಲ್ಲಿಯೇ ಪ್ರೇಮದ ಕಮಲ ಅರಳಬೇಕಾಗುತ್ತದೆ. ವಿಕಾರ ವೈಪರೀತ್ಯಗಳು ಕಾಮದ ಲಕ್ಷಣಗಳಾದರೆ, ಸಂಯಮ ಸಾತ್ವಿಕತೆ ಮತ್ತು ಸಾಮರಸ್ಯಗಳು ಪ್ರೇಮದ ಲಕ್ಷಣಗಳಾಗುತ್ತವೆ. ಶೃಂಗಾರ ಪ್ರೇಮ ವಾತ್ಸಲ್ಯ ಭಕ್ತಿ ಇವು ಪರಸ್ಪರ ಭಿನ್ನವೇನಲ್ಲ. ಒಂದು ದೈಹಿಕವಾದರೆ ಮತ್ತೊಂದು ಆಂತರಿಕವಾದದ್ದು ಎಂದು ತಿಳಿದು ಕುವೆಂಪು ಬ್ರಹ್ಮಚರ್ಯವ್ರತವನ್ನು ಕೈಗೊಳ್ಳುತ್ತಾರೆ. ಅಂದರೆ ಹತ್ತು ವರ್ಷಗಳ ಶಾರೀರಿಕ ಸಂಬಂಧದ ನಂತರ ಕಾಮಕ್ಕೆ ವಿರಾಮ ಹಾಕಿ ಗುರುಮಾತೆಯರನ್ನು ಪೂಜಿಸುತ್ತಾರೆ. ಕವಿ ಬ್ರಹ್ಮಚರ್ಯ ಪ್ರಯತ್ನವನ್ನು ಕೈಗೊಂಡ ಸಂದರ್ಭದಲ್ಲಿ ರಚಿತವಾದ ಕವಿತೆಯೇ 'ವ್ರತಭಿಕ್ಷೆ'.

> ಇಂದು ಕೈಕೊಳ್ಳುವೆವು ನಿಮ್ಮ ಪದತಲದಲ್ಲಿ
> ಬ್ರಹ್ಮಚರ್ಯವ್ರತವ, ಗುರುವೆ, ತಾಯಿ (ವ್ರತಭಿಕ್ಷೆ)
> ಪಶು ಮಾನವರು ನಾವು; ನಿತ್ಯಮುಕ್ತರು ನೀವು;

ಕವಿ ದಂಪತಿಗಳು ಗುರುವಿನ ಬಳಿ ಬ್ರಹ್ಮಚರ್ಯವ್ರತವನ್ನು ಕೈಗೊಳ್ಳುತ್ತಾರೆ. ಗಂಡು ಹೆಣ್ಣಿನ ಆಕರ್ಷಣೆಯ ಕೇಂದ್ರವಾದ ಕಾಮ ಕ್ರಮೇಣವಾಗಿ ದಾಂಪತ್ಯದಲ್ಲಿ ಕರಗುತ್ತದೆ. ಕಾಮ ದೈಹಿಕವಾದರೆ, ಪ್ರೇಮ ಭಾವನಾತ್ಮಕವಾದದ್ದು. ದೇಹ ಕೇಂದ್ರಿತವಾದ ಕಾಮ ಸೀಮಿತವಾಗಿ ಅಪೂರ್ಣವಾಗಿರುತ್ತದೆ. ಆದರೆ ಭಾವಕೇಂದ್ರಿತವಾದ ಪ್ರೇಮ ಪರಿಪೂರ್ಣವಾಗಿರುತ್ತದೆ ಎಂದು ಕವಿ 'ವ್ರತಭೀಕ್ಷೆ' ಕವನದಲ್ಲಿ ಹೇಳುತ್ತಾರೆ. ಕವಿ ಗುರುದೇವನಾದ ರಾಮಕೃಷ್ಣ ಪರಮಹಂಸರನ್ನು ಹಾಗೂ ತಾಯಿ ಶಾರದಾದೇವಿಯವರನ್ನು ಸ್ಮರಣೆಮಾಡಿ ನೀವು 'ನಿತ್ಯಮುಕ್ತರು' ಎಂದಿದ್ದಾರೆ.

> ನಮ್ಮ ಭಕ್ತಿಗೆ ಒಲಿವ ನಿಮ್ಮ ಕೃಪೆ ತಾಂ ಶಕ್ತಿ;
> ಅದನುಳಿದರೆ ಮಗಾವ ಬೇರೆ ಬಲವಿಲ್ಲ

ಕವಿ ತಮ್ಮ ಕೃಪೆಯಿಂದಲೇ ನಾನು ಸಂಸಾರಿಯಾಗಿ ಜೀವನ ನಡೆಸಿದೆ. ದಾಂಪತ್ಯದ ದಾರಿಯಲ್ಲಿ ನೀವು ನನ್ನನ್ನು ಸಲಹಿದ್ದೀರಿ ಎಂದು ಸ್ಮರಿಸಿಕೊಳ್ಳುತ್ತಾರೆ. ಕವಿ ತಮ್ಮ ಸ್ಮರಣೆಯ ಮುಖಾಂತರ ಭಕ್ತಿಯನ್ನು ಕೈಗೊಳ್ಳುತ್ತೇವೆ. ಆ ಭಕ್ತಿಯ ದಾರಿ ಬಿಟ್ಟು ನನಗೆ ಬೇರೆ ದಾರಿಯಿಲ್ಲ ಎಂದು ಗುರುವಿನಲ್ಲಿ ಪ್ರಾರ್ಥಿಸುತ್ತಾರೆ. ಕವಿಯ ಈ ಮಾತಿನಲ್ಲಿ ಒಂದು ವಿನಯಪೂರ್ವಕ ಮನವಿಯನ್ನು ಕಾಣಬಹುದು. ಬ್ರಹ್ಮಚರ್ಯೆಯ ವ್ರತಧಾರಣೆಗೆ ಮೊದಲು ಗುರುಕೃಪೆ ಸತಿಯ ರೂಪದಲ್ಲಿ ವರವಾಗಿ, ಜಗನ್ಮಾತೆಯೇ

ಪುಣ್ಯದಿಂದ ಗೃಹಿಣಿಯಾಗಿ ಬಂದು ತಮಗೆ ರಕ್ಷೆಯಾದಳೆಂದು ನುಡಿಯುವಲ್ಲಿ ಆಧ್ಯಾತ್ಮಿಕ ದೃಷ್ಟಿಯನ್ನು ಕಾಣಬಹುದು. ಜೀವನದಲ್ಲಿ ಪರಿಪೂರ್ಣತೆಯನ್ನು ಪಡೆಯಲು ದೈಹಿಕವಾದ ಕಾಮದ ಪ್ರಭಾವವನ್ನು ಕಡಿಮೆ ಮಾಡಿಕೊಂಡು ಅದನ್ನೇ ಯೋಗವಾಗಿಸುವ ಆಶಯ ಈ ಪದ್ಯದಲ್ಲಿದೆ.

ಹೀಗೆ ಬ್ರಹ್ಮಚರ್ಯೆಯ ವ್ರತಕ್ಕೆ ಪ್ರಯತ್ನಿಸುತ್ತಾರೆ. ಆದರೆ ಆ ವ್ರತದ ಪ್ರಯತ್ನದಲ್ಲಿ ಸೋತಾಗ 'ವಿಜಯ ಸೇತು' ಎಂಬ ಕವಿತೆಯನ್ನು ರಚಿಸುತ್ತಾರೆ.

ಸಾಧನೆಯ ಕಣದಿ ಗೆಲ್ಲುವೆವು ಗುರುಕೃಪೆಯಿಂದ
ಹೆಜ್ಜೆಹೆಜ್ಜೆಗೆ ಹೋರಿ ಕೆಡೆದು ಸೋತು
ಸೋಲಿನ ಕಮಾನುಗಳೆ ಸಾಲ್ಗಟ್ಟಿ ನಿಲೆ, ಹುಟ್ಟಿ
ಬಟ್ಟೆವರಿಪುದು ನಮ್ಮ ವಿಜಯಸೇತು! (ವಿಜಯಸೇತು)

ಈ ಕವಿತೆಯಲ್ಲಿ ಕವಿ ಬ್ರಹ್ಮಚರ್ಯೆಯ ವ್ರತದ ಸಾಧನೆಯಲ್ಲಿ ಸೋಲನ್ನು ಅನುಭವಿಸಿ, ಸಾಧನೆಯ ದಾರಿಯಲ್ಲಿ ಸೋತ ವಿವರವಿದೆ. ನೂರಾರು ಸೋಲಿನ ಕಮಾನುಗಳನ್ನು ಎದುರಿಸಿ ಬ್ರಹ್ಮಚರ್ಯೆ ವ್ರತದಲ್ಲಿ ಹೇಗೆ ವಿಜಯವನ್ನು ಸಾಧಿಸಿದೆ ಎಂಬುದರ ಬಗ್ಗೆ ವಿವರಗಳನ್ನು ಕೊಡುತ್ತಾರೆ. ನಲ್ಲನಲ್ಲೆಯರ (ದಂಪತಿಗಳ) ಪ್ರೀತಿ ರತಿಸುಖದ ಮಟ್ಟದಿಂದ ವಿಕಸಿತವಾಗಿ, ಗೌರವವಾಗಿ, ಪೂಜ್ಯವಾಗಿ, ದಿವ್ಯಸಾಕ್ಷಾತ್ಕಾರಕ್ಕೆ ಒಳಪಡುತ್ತದೆ. ಮಹಾಕವಿಯಾದ ಕುವೆಂಪು ಹೆಣ್ಣು ಭೋಗದ ವಸ್ತುವಲ್ಲ. ಆಧ್ಯಾತ್ಮಿಕ ಸಿದ್ಧಿಯ ಶಿಖರಕ್ಕೊಯ್ಯುವ ಪ್ರೇಮದ ಸಂಕೇತವೆಂದು ಹೇಳುತ್ತಾರೆ. ಆದ್ದರಿಂದ ಕುವೆಂಪು ಅವರ ದಾಂಪತ್ಯ ಜೀವನದ ಕಲ್ಪನೆ ಆದರ್ಶಪ್ರಾಯವಾದುದು. ಈ ಕಾರಣಕ್ಕಾಗಿಯೇ ಅವರ ದಾಂಪತ್ಯಗೀತೆಗಳು ವಿಶಿಷ್ಟವೂ, ವಿಭಿನ್ನವೂ ಆಗಿವೆ.

ಅಧ್ಯಾಯ ೬

ಮಹಾಪುರುಷರನ್ನು ಕುರಿತ ಪದ್ಯಗಳು

ನಿಸರ್ಗದ ನಂತರ ಕುವೆಂಪು ಅವರ ಸಮಗ್ರ ಜೀವನ ಹಾಗೂ ಸಾಹಿತ್ಯದ ಮೇಲೆ ಮಹಾಪುರುಷರ ಪ್ರಭಾವವಿದೆ. ಆ ಮಹಾಪುರುಷರೆಂದರೆ ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರು ಮತ್ತು ಸ್ವಾಮಿ ಸಿದ್ಧೇಶ್ವರಾನಂದರು. ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಮೈಸೂರಿನ ಸಾರ್ವಜನಿಕ ಗ್ರಂಥಾಲಯದಲ್ಲಿ ಶ್ರೀ ರಾಮಕೃಷ್ಣ–ವಿವೇಕಾನಂದರ ಸಾಹಿತ್ಯದ ಪರಿಚಯವಾಗುತ್ತದೆ. ಇದರ ವಿಚಾರವಾಗಿ ಕುವೆಂಪು ಅವರ ಮಾತುಗಳು ಹೀಗಿವೆ:

"ಹೀಗೆ ನೋಡುತ್ತಿದ್ದಾಗಲೆ ನನಗೆ ನನ್ನ ಜೀವನದ ದಿಕ್ಕನ್ನೆ ತಿರುಗಿಸಿ, ನನ್ನ ಬದುಕನ್ನೆಲ್ಲ ಮೌಢ್ಯದಿಂದ ಅಮರ್ತ್ಯಕ್ಕೆತ್ತಿ ಬೀಸಿದ ಭಗವತ್ ಕೃಪಾಹಸ್ತರೂಪ ಶ್ರೀ ರಾಮಕೃಷ್ಣ–ವಿವೇಕಾನಂದ ವಿಷಯಕವಾದ ಕೃತಿ ಶ್ರೇಣಿಯ ದರ್ಶನವಾದದ್ದು".[೧] ಕುವೆಂಪು ಪ್ರಾರಂಭದಲ್ಲಿ ವಿವೇಕಾನಂದರ ಪ್ರಭಾವಕ್ಕೆ ಒಳಗಾಗುತ್ತಾರೆ. ಅವರ ಭಾಷಣಗಳನ್ನು ಓದಿ ವಿವೇಕಾನಂದರನ್ನು ಕುರಿತು ಕವನ ರಚಿಸುತ್ತಾರೆ. ಶ್ರೀ ರಾಮಕೃಷ್ಣಪರಮಹಂಸರನ್ನು ಕುರಿತು ಪದ್ಯರಚಿಸುವುದಕ್ಕೆ ಮೊದಲೇ ೧೯೨೪ರಲ್ಲಿ ಸ್ವಾಮಿವಿವೇಕಾನಂದರ ಮೇಲೆ ಒಂದು ಕವಿತೆ ರಚಿಸುತ್ತಾರೆ.

'ನೀನಾರು' ಕವಿತೆ ಸ್ವಾಮಿ ವಿವೇಕಾನಂದರ ಭಾಷಣಗಳ ಅಧ್ಯಯನದ ಪ್ರಭಾವದಿಂದ ರಚನೆಯಾದದ್ದು ಎಂದು ಕವಿ ಸ್ವತಃ ಹೇಳಿಕೊಂಡಿದ್ದಾರೆ. ಒಬ್ಬ ಕವಿಯಾದವನು ತನ್ನ ಮೇಲೆ ಪ್ರಭಾವ ಬೀರಿದ ವ್ಯಕ್ತಿಯ ಬಗ್ಗೆ ತನ್ನ ಭಾವವನ್ನು ಅಭಿವ್ಯಕ್ತಿಸುತ್ತಾರೆ. ಕವಿ ವಿವೇಕಾನಂದರನ್ನು ಕುರಿತು 'ನೀನಾರು' ಎಂದು ಕೇಳುತ್ತಲೇ ಅವರ ವಿಶಿಷ್ಟತೆಯನ್ನು ಗುರುತಿಸುತ್ತಾರೆ.

ನೀನಾರು? ನಾನಾರು? ನಿನಗೆನಗೆ ಸಂಬಂಧ
ಮೇನಿಹುದು? ಪೂಗಾಯಿಗಳಿಗಿರುವ ಬಂಧನಂ
ತಾನಲ್ಲವೆ! ನೀ ಬೇರೆ ನಾ ಬೇರೆ ಎಂದೇಕೆ
ಮಾನವರೆ ಕೂಗುತಿಹರರಿಯದಜ್ಞಾನದಲಿ? (ನೀನಾರು)
ಇಹೆ ನೀನು ನನ್ನೊಳಗೆ, ನಾನಿಹೆನು ನಿನ್ನೊಳಗೆ
ನಾನು ನೀನಲ್ಲದೊಡೆ ನೀನು ನಾನಲ್ಲವೇ?

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ೧೯೮೩, ಪುಟ. ೧೨೮.

ಕುವೆಂಪು ಹಾಗೂ ವಿವೇಕಾನಂದರ ನಡುವಿನ ಸಂಬಂಧದ ಸ್ವರೂಪ ಹೇಗೆ ರೂಪಿತಗೊಂಡಿದೆ ಎಂಬುದು ತಿಳಿಯುತ್ತದೆ. ನಾ ಬೇರೆಯಲ್ಲ ಎನ್ನುವ ಅದ್ವೈತ ಪರವಾದ ಮನೋಧರ್ಮವನ್ನು ಕವಿ ವ್ಯಕ್ತಪಡಿಸುತ್ತಾರೆ. ೧೯೨೪ರಲ್ಲಿ ಬರೆದ ಈ ಕವಿತೆ ಕವಿಯ ಆಗಿನ ಅದ್ವೈತ ದೃಷ್ಟಿಗೆ ಒಂದು ಸಾಕ್ಷಿಯಾಗಿದೆ. ಕವಿ ವಿವೇಕಾನಂದರನ್ನು ವಿಶ್ವಗುರುವೆಂದು, ಅಧ್ಯಾತ್ಮ ಮಹಾಚೇತನವೆಂದು ಸ್ತುತಿಸುತ್ತಾರೆ. ೧೯೨೬ರ ಪ್ರಾರಂಭದಲ್ಲಿ ರಾಮಕೃಷ್ಣಾಶ್ರಮದ ಸಾನಿಧ್ಯದ ಪ್ರಭಾವಕ್ಕೆ ಒಳಗಾಗುತ್ತಾರೆ. ಆಶ್ರಮದ ಸಂಸರ್ಗದಿಂದ ಆಧ್ಯಾತ್ಮಿಕ ಸಾಧನೆಯ ಕಡೆಗೆ ಅವರ ಗಮನ ಹರಿಯುತ್ತದೆ. ಆ ಸಂದರ್ಭದಲ್ಲಿ ಬರೆದ ಕವಿತೆಯೇ 'ಸ್ವಾಮಿ ವಿವೇಕಾನಂದ'

ತತ್ವಕಡಲನು । ಕುಡಿದಯೋಗಿಯೆ
'ತತ್ವಮಸಿ'ಯನು । ಸವಿದ ಭೋಗಿಯೆ.... ಶ್ರೀ
ಮೃತ್ಯು ಎಂಬುವ । ಮಿಥ್ಯೆ ಭಯವನು (ಸ್ವಾಮಿವಿವೇಕಾನಂದ)
ಕಿತ್ತು ಹಾಕಿದ । ನಿತ್ಯ ಬ್ರಹ್ಮನೆ.... ಶ್ರೀ

ಈ ಕವನದಲ್ಲಿ ಕವಿ ಆ ಮಹಾಪುರುಷನ ಶಕ್ತಿ ವಿಶೇಷವನ್ನು ಕೊಂಡಾಡಿದ್ದಾರೆ. ಕವಿಗೆ ವಿವೇಕಾನಂದರು ಜೀವನದ ಸಾಕ್ಷಾತ್ಕಾರ ಮೂರ್ತಿಯಾಗಿ ಕಾಣುತ್ತಾರೆ. ಕವಿಹೃದಯದಲ್ಲಿ ಸ್ಫೂರ್ತಿ ಚೈತನ್ಯವಾಗಿ ಹೊರಹೊಮ್ಮಿರುವ ಚಿತ್ರಣ ಈ ಕವಿತೆಯಿಂದ ಸ್ಪಷ್ಟವಾಗುತ್ತದೆ. ವಿವೇಕಾನಂದರ ತತ್ವ ಸಿದ್ಧಾಂತಗಳ ಶ್ರೇಷ್ಠತೆಯನ್ನು ತಿಳಿಸುವುದರ ಜೊತೆಗೆ ವಿವೇಕಾನಂದರ ಸ್ಥಾನವನ್ನು ಕವಿ ಗುರುತಿಸುತ್ತಾರೆ. ಭಾರತಾಂಬೆಯ ವೀರ ಪುತ್ರರಾಗಿ, ಭಾರತೀಯರ ಪ್ರೇಮಕ್ಕೆ ಪಾತ್ರನಾದವರು ಎಂದು ಸ್ಮರಿಸಿದ್ದಾರೆ. ಕವಿತೆಯ ಉದ್ದಕ್ಕೂ ವಿವೇಕಾನಂದರ ತತ್ವವಾಣಿಯನ್ನು ಕುರಿತು ಹೇಳುತ್ತಾರೆ. ಅವರ ಪ್ರಖರವಾದ ಚಿಂತನೆ ಯಾವ ನೆಲೆಯಲ್ಲಿ ರೂಪಿತವಾಗಿತ್ತು ಎಂಬೆಲ್ಲಾ ವಿಚಾರಗಳ ಬಗ್ಗೆ ಚರ್ಚೆ ನಡೆಸುತ್ತಾರೆ. ಕವಿ ವಿವೇಕಾನಂದರನ್ನು ಬಹು ಉನ್ನತವಾದ ನೆಲೆಯಲ್ಲಿ ಕಾಣಿಸುತ್ತಾರೆ. ದೇಶ ವಿದೇಶಗಳಲ್ಲಿ ಬ್ರಹ್ಮವಿದ್ಯೆಯನ್ನು ಸಾರಿದ ಅವರ ಮೇರು ಸದೃಶ ಮಹಿಮೆ ಧೈರ್ಯ, ಸ್ಥೈರ್ಯ, ದೃಢತೆ, ತಪಃಶಕ್ತಿಗಳನ್ನು ಅದ್ಭುತವಾಗಿ ಮುಕ್ತಕಂಠದಿಂದ ಹೊಗಳಿದ್ದಾರೆ.

ಓಂ ರಾಮಕೃಷ್ಣ, ಓಂ ವಿವೇಕಾನಂದ; ಓಂ ಶ್ರೀ ರಾಮಕೃಷ್ಣ ನನ್ನನ್ನು ರಕ್ಷಿಸು ಎಂದು ತನ್ನ ದಿನಚರಿಯ ಕೊನೆಯಲ್ಲಿ ಸ್ತುತಿಸುತ್ತಾರೆ. ಇದು ಕವಿಯ ಜೀವನದ ಮೇಲೆ ಮಹಾ ಪುರುಷರು ಬೀರಿದ ಪ್ರಭಾವವನ್ನು ಕುರಿತು ಹೇಳುತ್ತದೆ. ಕುವೆಂಪು ಅವರ ಜೀವನದರ್ಶನದಲ್ಲಿ ಈ ಮಹಾಪುರುಷರ ಪಾತ್ರ ಬಹಳ ದೊಡ್ಡದು 'ಎದ್ದೇಳು' ಕವನ ವಿವೇಕಾನಂದರನ್ನು ಕುರಿತಾಗಿದೆ. ಈ ಕವನ ಕೆಚ್ಚನ್ನು ಕೆರಳಿಸುವ ಮಾತಿನಿಂದ

ಪ್ರಾರಂಭವಾಗುತ್ತದೆ. ಈ ಕವಿತೆಯ ದಾಟಿಯನ್ನು ನೋಡಿದರೆ ಕವಿಚೇತನ ತನಗೆ ತಾನೆ ಹೇಳಿಕೊಂಡ ರೀತಿಯಾಗಿದೆ ಎಂದು ಊಹಿಸಬಹುದು.

೧೯೨೬ರ ಅಂತ್ಯದಲ್ಲಿ ರಚನೆಯಾದ 'ವಿವೇಕಾನಂದ ಬಾಲಚಾರರ ಹಾಡು' ಕವಿತೆ ಹಲವು ವಿಶೇಷತೆಯಿಂದ ಕೂಡಿರುವ ಕವಿತೆ. ಕವಿ ವಿವೇಕಾನಂದರಿಂದ ಎಷ್ಟು ಪ್ರಭಾವಿತರಾಗಿದ್ದಾರೆ ಎಂಬುದು ಕವಿತೆಯ ಓದಿನಿಂದ ಅರ್ಥವಾಗುತ್ತದೆ.

ಭಾರತೀಯ ಬಾಲಕರು ನಾವುಗಳು ಬನ್ನಿ!
ಭಾರತಿಗೆ ಸೇವೆಯೆಂಬಾರತಿಯ ತನ್ನಿ!
ಭಾರತಿಯ ಮೂರುತಿಗೆ ಮಂಗಳಂ ಎನ್ನಿ!
ಮಂಗಳಂ! ಮಂಗಳಂ ! ಮಂಗಳಂ ಮಾತೆ!
ಶ್ರೀ ವಿವೇಕರಮಲ ದಳವ ಬಾಲಚಾರರು,
ದೇವಿ, ನಾವು ನಿನ್ನ ಭಜಿಪ ತರುಣವೀರರು!
ಶ್ರೀ ವಿವೇಕರಂದದಿ
ನಿನ್ನ ಸೇವೆಗೈವೆವು (ವಿವೇಕಾನಂದ ಬಾಲಚಾರರ ಹಾಡು)
ಶ್ರೀ ವಿವೇಕ ನಮಿತಪಾದೆ ಭಾರತಾಂಬೆಯೆ!

ಈ ಕವಿತೆಯಲ್ಲಿ ಭರತಮಾತೆಯ ವೈಭವದ ವರ್ಣನೆಯಿದೆ. ಕವಿ ಭರತಮಾತೆಯನ್ನು ಕುರಿತು ಧನ್ಯತಾ ಭಾವನೆಯನ್ನು ವ್ಯಕ್ತಪಡಿಸಿ ವಿವೇಕಾನಂದರನ್ನು ಸ್ತುತಿಸುತ್ತಾರೆ. ಕವಿಗೆ ಭರತಮಾತೆಯು ದಿವದರ್ಶನ ಮೂರ್ತಿಯಾಗಿ ಕಾಣುತ್ತಾಳೆ. ಕವಿ ವಿವೇಕಾನಂದ ಹಾಗೂ ಭರತಮಾತೆ ಇಬ್ಬರನ್ನು ಪರಸ್ಪರ ಮುಖಾಮುಖಿಗೊಳಿಸಿ ತನ್ನ ಸಮರ್ಪಣಾ ಭಾವವನ್ನು ಅರ್ಪಿಸುತ್ತಾರೆ. 'ಶ್ರೀ ವಿವೇಕರಂದದಿ ನಿನ್ನ ಸೇವೆಗೈವೆವು' ಎಂದು ಹೇಳುವ ಮೂಲಕ ಕವಿ ಉದಾತ್ತ ಭಾವವನ್ನು ಅಭಿವ್ಯಕ್ತಿಸುತ್ತಾರೆ. ವಿವೇಕಾನಂದರಂತೆ ಭರತಮಾತೆಗೆ ತಾನು ಕೂಡ ಸೇವೆಯನ್ನು ಸಲ್ಲಿಸುವೆ ಎಂದು ತಮ್ಮ ಭಾವವನ್ನು ವ್ಯಕ್ತಪಡಿಸುತ್ತಾರೆ. ವಿವೇಕಾನಂದರ ನಾಮವೆ ತನಗೆ ಸ್ಫೂರ್ತಿಮಂತ್ರವಾಗಿದೆ ಎಂದು ಇಡೀ ಕವನದ ಉದ್ದಕ್ಕೂ ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಾರೆ.

ಸರ್ವದೇಶಗಳಲಿ ನಿನ್ನ ಜ್ಯೋತಿಕೇತನ
ಪ್ರೇಮಕಾಂತಿಯನ್ನು ಬೀರಿ ಬೆಳಗಲೆಂದಿಗೂ
ನೀನೆ ಭೂಮಿದೇವಿಗೆ
ಶಾಂತರಾತ್ಮವಾಗಿಹೆ;
ನೀನೆ ಸರ್ವವಿದ್ಯೆಗಳಿಗೆ ಮೂಲ ಪೀಠವು!

ಎನ್ನುವ ಭಾವನೆ ವಿಶಾಲವಾಗಿದೆ. ಕವಿಯ ಭಾವ ವಿಶಿಷ್ಟವಾಗಿ ಮೂಡಿಬರುವ ಜೊತೆಗೆ ಅರ್ಥಪೂರ್ಣವಾಗಿದೆ. ಕರ್ನಾಟಕ ಭೌಗೋಳಿಕವಾಗಿ ಭಾರತದ ಇತರ ಪ್ರದೇಶಗಳಿಗಿಂತ ಭಿನ್ನವಾಗಿ ಕಂಡರೂ ಸಾಂಸ್ಕೃತಿಕವಾಗಿ ಅಷ್ಟೇನೂ ಭಿನ್ನವಲ್ಲ. ನಮ್ಮೆಲ್ಲರ ಕನಸೂ ಒಂದೇ, ನಮ್ಮೆಲ್ಲರ ಮನಸ್ಸು ಒಂದೇ, ನಮ್ಮೆಲ್ಲರ ಗುರಿಯೂ ಒಂದೇ; ನಾವೆಲ್ಲ ಭಾರತೀಯರು ಎಂಬ ಏಕತಾ ಮನೋಭಾವನೆಯನ್ನು ಕವಿ ವ್ಯಕ್ತಪಡಿಸುತ್ತಾರೆ. ಭಾರತಾಂಬೆಯ ಸೇವೆ ಮಾಡುವುದೇ ನಿಜವಾದ ಮುಕ್ತಿ ಎಂದು ಕವಿ ತನ್ನ ದೇಶಾಭಿಮಾನ ವ್ಯಕ್ತಪಡಿಸುತ್ತಾರೆ. 'ದೇಶಕೋಟಿ ,ಉದಿಸಿ ಬೆಳೆದು ಬೆಳಗಿ ಅಳಿದುವು' ಎನ್ನುವಲ್ಲಿ ಕವಿ ಸ್ವಾತಂತ್ರ್ಯ ಪೂರ್ವದ ಪರಿಸ್ಥಿತಿಯನ್ನು ರೂಪಿಸಿದ್ದಾರೆ. ಭರತಮಾತೆ ನೀನು ನಿತ್ಯಳಾಗಿರುವೆ ಎಂದು ಅಭಿಮಾನದಿಂದ ಹರ್ಷವ್ಯಕ್ತಪಡಿಸಿದ್ದಾರೆ. ಭರತಖಂಡ, ಸೂರ್ಯ ಚಂದ್ರರ ಉದಯ ಈ ಎಲ್ಲವೂ ನಮಗೆ ನಿತ್ಯನೂತನವಾಗಿ ಕಾಣುತ್ತವೆ ಎಂದು ದರ್ಶನದ ಹಿನ್ನೆಲೆಯಲ್ಲಿ ಕವಿ ಮಾತನಾಡುತ್ತಾರೆ. ವಿವೇಕಾನಂದರೂ ಸದಾ ಕುವೆಂಪು ಅವರ ಕಣ್ಮುಂದೆ ನಿಲ್ಲುತ್ತಾರೆ. ಹೀಗೆ ಕವಿ ಭಾರತೀಯ ಸಂಸ್ಕೃತಿಯೊಳಗೆ ವಿವೇಕಾನಂದರ ಹಿರಿಮೆಯೇನು? ಎಂಬುದನ್ನು ಇಡೀ ಕವನದ ಉದ್ದಕ್ಕೂ ಚರ್ಚಿಸುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸರ ಚಿಂತನೆಗಳು ಪ್ರಭಾವ ಬೀರಿವೆ. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ರಾಮಕೃಷ್ಣಾಶ್ರಮದ ಪೋಷಣೆ ಪ್ರಭಾವಗಳಿಗೆ ಒಳಗಾದರು. ಶ್ರೀರಾಮಕೃಷ್ಣರ ಸಾಧನೆಗಳು ಅವರ ಅಂತರಂಗ ಬಹಿರಂಗಗಳನ್ನು ವ್ಯಾಪಿಸಿದವು. ಇದನ್ನು ಅವರೇ ತಮ್ಮ 'ದೀಕ್ಷಾಯಾತ್ರೆ' ಎಂಬ ಪ್ರಬಂಧದಲ್ಲಿ ಹೀಗೆ ಹೇಳುತ್ತಾರೆ. "ಸಹ್ಯಾದ್ರಿಯ ಅರಣ್ಯಮಧ್ಯದ ಕುಗ್ರಾಮ-ವೊಂದರಿಂದ ಮೈಸೂರು ನಗರಕ್ಕೆ ವಿದ್ಯಾರ್ಥಿಯಾಗಿ ಬಂದ ನನಗೆ ಅಕಸ್ಮಾತ್ತಾಗಿ ಸಾರ್ವಜನಿಕ ಗ್ರಂಥಾಲಯದಲ್ಲಿ ದೊರೆತ ಶ್ರೀರಾಮಕೃಷ್ಣ - ವಿವೇಕಾನಂದ ಸಾಹಿತ್ಯ ಪರಿಚಯದಿಂದಾಗಿ ಆ ಮಹದ್ ವ್ಯಕ್ತಿಗಳ ವೈದ್ಯುತಿಕ ಪ್ರಭಾವಕ್ಕೆ ವಶನಾಗಿ ಅಧ್ಯಾತ್ಮ ಪರವಾದ ಮನೋಧರ್ಮವನ್ನು ಪಡೆದಿದ್ದೆ"[೧] ಹೀಗೆ ಆ ಮಹಾಪುರುಷನ ಪ್ರಭಾವ ಎಷ್ಟರಮಟ್ಟಿಗೆ ಕವಿ ಮೇಲೆ ಪ್ರಭಾವ ಬೀರಿತೆಂಬುದನ್ನು ಕೆಳಗಿನ ಕವಿತೆಗಳು ತಿಳಿಸುತ್ತವೆ. ಎಂ.ಎ. ಪದವಿಯನ್ನು ಪಡೆದು, ಅಧ್ಯಾಪಕರಾದ ನಂತರ ಅವರು ಸಿದ್ಧೇಶ್ವರಾನಂದಸ್ವಾಮಿ ಅವರೊಡನೆ ದೀಕ್ಷೆಯ ಆಕಾಂಕ್ಷೆಯಿಂದ ಬೇಲೂರು ಮಠಕ್ಕೆ ಹೋಗುತ್ತಾರೆ. ೮.೧೦.೧೯೨೯ನೆಯ ಮಂಗಳವಾರ ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಸ್ವಾಮಿ ಶಿವಾನಂದಜಿಯವರಿಂದ ದೀಕ್ಷೆ ಪಡೆಯುತ್ತಾರೆ. ಗುರುದೇವ ಜೀವಂತ ಕಾಲದಲ್ಲಿ ವಾಸಿಸುತ್ತಿದ್ದ, ತಪಸ್ಸು ಮಾಡುತ್ತಿದ್ದ ಸ್ಥಳಗಳನ್ನೆಲ್ಲ ನೋಡುತ್ತಾರೆ. ಆ ಸಮಯದಲ್ಲಿ ರಚಿತವಾದ ಕವಿತೆಯೇ 'ರಾಮಕೃಷ್ಣ ಪರಮಹಂಸರ ಕುರಿತಾಗಿ'

---

೧. ಹಂಪಿ ಕನ್ನಡ ವಿಶ್ವವಿದ್ಯಾಲಯ: ಕುವೆಂಪುಸಮಗ್ರ ಗದ್ಯ, ಸಂಪುಟ೩, ಪು. ೪೨೨

ಶ್ರೀ ರಾಮಕೃಷ್ಣ ಗುರುದೇವನಂ ನೆನೆನೆನೆದು
ದೋಣಿಯಿಂದಿಳಿ ಕೆಳಗೆ, ಯಾತ್ರಿಕನೆ, ಭವರೋಗಿ,
ದಿವಿಜ ಗಂಗೆಯ ನಿರ್ಮಲ ಸುತೀರ್ಥದೊಳು ಮಿಂದು
ಪರಿಶುದ್ಧನಾಗಿ, ಪಾವನನಾಗಿ ಮೇಲೇರು
ಕೈಮುಗಿದು ತಲೆಬಾಗಿ, ಬಗೆಯ ಕೊಳೆಯನು ನೀಗಿ
ಸ್ನಾನಘಟ್ಟವನಡರು, ರಸಯೋಗಿ ಕಬ್ಬಿಗನೆ,
ಮುಂದಿಹುದು ಚಂದದಲಿ, ನೋಡು ಆನಂದದಲಿ

ಎಂದು ಈ ದೀರ್ಘಕವನ ಹರಿಯುತ್ತದೆ. ಕವಿ ರಾಮಕೃಷ್ಣ ಪರಮಹಂಸರನ್ನು ಕಲಿಯುಗದ ಮಹಾವತಾರನೆಂದು, ವಿಶ್ವಗುರುವರ್ಯನೆಂದು ಸ್ತುತಿಸುತ್ತಾರೆ. ಕವಿಯಲ್ಲಿ ಪರಮಹಂಸರು ಒಂದು ಧನ್ಯತಾಭಾವವನ್ನು ಬಿತ್ತಿದ್ದಾರೆ. ಬೇಲೂರಿನ ದಕ್ಷಿಣೇಶ್ವರದಿಂದ ಹಿಂದಿರುಗಿದ ನಂತರ ರಚಿಸಿದ 'ಧ್ರುವತಾರೆ' ಎಂಬ ಕವನ ಶ್ರೀರಾಮಕೃಷ್ಣರನ್ನೇ ಉದ್ದೇಶಿಸುತ್ತದೆ. ಕವಿಯ ಮನಸ್ಸಿನಲ್ಲಿ ಪರಮಹಂಸರು ಹೇಗೆ ನಿರೂಪಿತರಾಗಿದ್ದಾರೆ ಎಂಬುದನ್ನು ಈ ಕವಿತೆಯಿಂದ ತಿಳಿಯಬಹುದು. ಕುವೆಂಪು ದಕ್ಷಿಣೇಶ್ವರದಿಂದ ದೀಕ್ಷೆಪಡೆದು ಮೈಸೂರಿಗೆ ಮರಳಿದನಂತರ ಅವರ ಮನಸ್ಸು ದಕ್ಷಿಣೇಶ್ವರಕ್ಕೆ ನಿತ್ಯಯಾತ್ರೆ ಕೈಗೊಳ್ಳುತ್ತದೆ.

ನೀನೆನ್ನ ಜೀವನ ಚಿರಂತನ ಧ್ರುವತಾರೆ
ಸರ್ವರುಚಿ ಭಾವ ಸಂಸ್ಕಾರಗಳ ಸ್ಪರ್ಶಮಣಿ

ಪರಮಹಂಸರ ಬಗ್ಗೆ ಕವಿಯಲ್ಲಿ ಒಂದು ಧನ್ಯತಾಭಾವ ಆವರಿಸಿಕೊಂಡು ಧ್ರುವತಾರೆಯ ಹಿರಿಮೆಯನ್ನು ಈ ಕವಿತೆ ಹೊಂದಿದೆ. ಕವಿಯ ಜೀವನದಲ್ಲಿ ಪರಮಹಂಸರ ಪಾತ್ರ ಎಷ್ಟರಮಟ್ಟಿಗೆ ಸಮಾವೇಶಗೊಂಡಿದೆ ಎಂಬುದಕ್ಕೆ 'ಗುರುದೇವನಿಗೆ' ಕವಿತೆ ನಿದರ್ಶನ.

ಕುವೆಂಪು ಅವರು ಆಗಾಗ್ಗೆ ಮಲೆನಾಡಿಗೆ ಹೋಗಿ ಬರುತ್ತಿದ್ದ ಕಾಲದಲ್ಲಿ ಪ್ರತಿ ವರ್ಷವೂ ಕುಪ್ಪಳಿಯಲ್ಲಿ ಶ್ರೀ ರಾಮಕೃಷ್ಣರ ಜಯಂತ್ಯುತ್ಸವವನ್ನು ಆಚರಿಸುತ್ತಾರೆ. ಈ ರೀತಿಯ ಆಚರಣೆ ಅವರ ಅಂತರಂಗದಲ್ಲಿ ಸ್ಫೂರ್ತಿಯ ಚಿಲುಮೆ ಉಕ್ಕಲು ಕಾರಣವಾಗಿದೆ. ಕುವೆಂಪು ಅವರ ಬಾಳಿನ ಉದ್ದಕ್ಕೂ ರಾಮಕೃಷ್ಣ ಪರಮಹಂಸರ ಪಾತ್ರ ಬಹಳ ದೊಡ್ಡದು. ಕವಿ ತಾನು ದಾಂಪತ್ಯದ ಬದುಕಿಗೆ ಪ್ರವೇಶ ಮಾಡುವಾಗ ಗುರುದೇವನಲ್ಲಿ ಆಶೀರ್ವದಿಸುವಂತೆ ಮೊರೆಯಿಡುತ್ತಾರೆ. ೧೯೩೭ರಲ್ಲಿ ಕುವೆಂಪು ಮದುವೆಯಾಗಲು ತೀರ್ಮಾನಿಸಿ ಗುರುದೇವನು ತಮ್ಮನ್ನು ಮುಂದಿನ ಬದುಕಿನಲ್ಲಿ ಆಶೀರ್ವದಿಸಲೀ ಎಮದು ಪ್ರಾರ್ಥಿಸುತ್ತಾರೆ.

ವಂದಿಸುವೆ ಚರಣಾರವಿಂದಕ್ಕೆ ಮುಡಿಯಿಟ್ಟು
ಇಂದು ಆಶೀರ್ವದಿಸು ಕಂದನನು, ಗುರುದೇವ,
ಮುಂದೆ ಬರುವಂದು ಸಂಸಾರಿ ನಾನು ! (ಗುರುದೇವನಿಗೆ)
ಬ್ರಹ್ಮಚರ್ಯದೊಳೆಂತು ಕೈಹಿಡಿದು ಕಾಯ್ದಿಹೆಯಾ
ಅಂತೆ ಸಂಸಾರಿಯನು ಸಲಹು ನೀನು!

ಕುವೆಂಪು ಮದುವೆಯಾಗುವ ಒಂದು ತಿಂಗಳ ಹಿಂದೆ ಬರೆದ ಕವಿತೆಯಾಗಿದೆ. ವಿವಾಹವನ್ನು ದಿಕ್ಕರಿಸಿ ಅದರ ಪ್ರಸ್ತಾಪ ಮಾಡದೆ ಜೀವನ ನಡೆಸುತ್ತಿರುತ್ತಾರೆ. ಆದರೆ ಪ್ರಕೃತಿಯ ಒಂದು ಭಾಗ ದಾಂಪತ್ಯ ಎಂಬ ಅರಿವು ಉಂಟಾದಾಗ ಮದುವೆಯ ತೀರ್ಮಾನ ಕೈಗೊಳ್ಳುತ್ತಾರೆ. ಬ್ರಹ್ಮಚರ್ಯೆಯ ಸಮಯದಲ್ಲಿ ಸಲಹಿದ ರಿತಿಯಲ್ಲಿಯೇ ಸಂಸಾರಿಯಾದ ಮೇಲೂ ಅದೇ ರೀತಿಯ ದೈವೇಚ್ಛೆ ಇರಲಿ ಎಂದು ರಾಮಕೃಷ್ಣ ಪರಮಹಂಸರಲ್ಲಿ ಮೊರೆಯಿಡುತ್ತಾರೆ. ಹಾಗೆಯೇ ಕವಿ ಗುರುದೇವನನ್ನು 'ಓ ಎನ್ನ ಜೀವನದ ಕಲ್ಪತರುವೆ!' ಎಂದು ಹೇಳುವುದನ್ನು ನೋಡಿದರೆ ಶ್ರೀ ಕುವೆಂಪು ಅವರ ಇಡೀ ಜೀವನದ ಆಧಾರ ಶ್ರೀ ರಾಮಕೃಷ್ಣ ಪರಮಹಂಸ. ಶ್ರೀ ರಾಮಕೃಷ್ಣರು ವೈರಾಗಿಯೂ ಹೌದು ತ್ಯಾಗಿಯೂ ಹೌದು ಎಂದು ಕವಿ ಅಭಿಪ್ರಾಯಪಡುತ್ತಾರೆ.

ತಮ್ಮ ಸಕಲ ಸರ್ವೋದ್ಧಾರಕ್ಕೆ ಗುರುಕೃಪೆಯೇ ಕಾರಣವೆಂದು, ಅದು ನಾನಾರೂಪಗಳಲ್ಲಿ ಹರಿದು ಬಂದು ತನ್ನ ಅಭ್ಯುದಯಕ್ಕೆ ಎಣಿಯಾಗಿದೆ ಎಂದು ಎಷ್ಟು ಸಾರಿ ಹೇಳಿದರೂ ಅವರಿಗೆ ತೃಪ್ತಿಯಿಲ್ಲ. ಮುಖ್ಯವಾಗಿ ಶ್ರೀ ಗುರುಕೃಪೆ ತಮ್ಮ ಸತಿಯ ರೂಪದಲ್ಲಿ ಮೈದೋರಿ ತಮ್ಮನ್ನು ಸದಾ ಆಶೀರ್ವದಿಸುತ್ತಿದೆ ಎಂಬ ಅಚಲ ಶ್ರದ್ಧೆ ಅವರದು. ಗುರುದೇವನನ್ನು ಕವಿ ತನ್ನ ಸತಿಯಾಗಿ ಪರಿಭಾವಿಸಿಕೊಳ್ಳುತ್ತಾರೆ ಶ್ರೀಮತಿ ಹೇಮಾವತಿ ಅವರು ಕುವೆಂಪು ಕಣ್ಮುಂದೆ ಸುಳಿದಾಗ ಗುರುಕೃಪೆಯೇ ಪ್ರತ್ಯಕ್ಷವಾದಂತೆ ಕವಿ ಭಾವಿಸುತ್ತಾರೆ. ಶ್ರೀಮತಿ ಹೇಮಾವತಿ ಅವರು ಕುವೆಂಪು ಕಣ್ಮುಂದೆ ಸುಳಿದಾಗ ಗುರುಕೃಪೆಯೇ ಪ್ರತ್ಯಕ್ಷವಾದಂತೆ ಕವಿ ಭಾವಿಸುತ್ತಾರೆ.

ಕುವೆಂಪು ಅವರ ವ್ಯಕ್ತಿತ್ವಕ್ಕೆ ಒಂದು ಪೂರ್ಣಪ್ರಮಾಣದ ಸಿದ್ಧಿಯನ್ನು ನೀಡಿದವರು. ಸ್ವಾಮಿಸಿದ್ಧೇಶ್ವರಾನಂದರು. ಬಿ.ಎ. ಅಂತಿಮ ತರಗತಿಯಲ್ಲಿದ್ದಾಗ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ ನೆಲೆಸಿದರು. ಅಲ್ಲಿ ಸ್ವಾಮಿ ಸಿದ್ದೇಶ್ವರಾನಂದರ ಪ್ರೇಮಮಯ ಆರೈಕೆಯ ಆಶ್ರಯದಲ್ಲಿ ಬೆಳೆದರು. ಶ್ರೀ ಕುವೆಂಪು ಅವರೇ ಹೇಳುವಂತೆ:

"ಪೂಜ್ಯ ಸ್ವಾಮಿ ಸಿದ್ಧೇಶ್ವರಾನಂದರು ಶ್ರೀ ಮಹಾಪುರುಷರ ಪದತಳದಲ್ಲಿ ಕುಳಿತು ಅವರ ದೀಕ್ಷಾನುಗ್ರಹಕ್ಕೆ ನಾನು ಪಾತ್ರನಾಗಬೇಕೆಂದು ಸಲಹೆ ಇತ್ತಾಗ ನಾನು

ಹಿಗ್ಗಿನಿಂದಲೆ ಸುಮ್ಮನಿದ್ದೆ. ಆದರೆ ನಾನು ಒಪ್ಪಿದುದಕ್ಕೆ ಮುಖ್ಯಕಾರಣ ಅಥವಾ ಪ್ರೇರಣೆ ಎಷ್ಟರಮಟ್ಟಿಗೆ ಆಧ್ಯಾತ್ಮಿಕವಾಗಿತ್ತೊ ನಾನು ಹೇಳಲಾರೆ. ನಾನು ಒಪ್ಪಿದುದು ಮುಖ್ಯವಾಗಿ, ಅ ಸಲಹೆ ಗೋಪಾಲ ಮಹಾರಾಜ (ಸ್ವಾಮಿ ಸಿದ್ದೇಶ್ವರಾನಂದ) ಅವರಿಂದ ಬಂದುದರಿಂದಲೇ.." [೧] ಆದ್ದರಿಂದಲೇ ಸ್ವಾಮಿ ಸಿದ್ಧೇಶ್ವರಾನಂದರು ತಮಗೆ ಆತ್ಮವನ್ನಿತ್ತ ತಾಯಿ ಎಂಬುದಾಗಿ ಭಾವಸುತ್ತಾರೆ. ಕುವೆಂಪು ಅವರು ತಮ್ಮ ಬದುಕನ್ನು ಕತ್ತಲೆಯಿಂದ ಬೆಳಕಿಗೆ ತಂದ ಸ್ವಾಮಿ ಸಿದ್ದೇಶ್ವರಾನಂದರನ್ನು ಕುರಿತು ಕೆಲವು ಪದ್ಯಗಳನ್ನು ರಚಿಸಿದ್ದಾರೆ.

'ಬಳಿಯೊಳಿರದಿರೆ ನೀನು' ಎಂಬ ಕವಿತೆಯಲ್ಲಿ ಸಿದ್ದೇಶ್ವರಾನಂದರ ಬಗ್ಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ.

ಬಳಿಯೊಳಿರದಿರೆ ನೀನು
ಬೇಸರವು ಎನಗೆ: (ಬಳಿಯೊಳಿರದಿರೆ ನೀನು)
ಉಳಿದವರು ಬೇಡನಗೆ
ನೀನೆ ಬೇಕು!

ಆಶ್ರಮಕ್ಕೆ ಹೋದ ಸಂದರ್ಭಗಳನ್ನು ನೆನಪಿಸಿಕೊಂಡು ಕವಿ ಈ ಕವನವನ್ನು ರಚಿಸಿದಂತಿದೆ ಸಿದ್ಧೇಶ್ವರಾನಂದರ ಸಾಮಿಪ್ಯದಲ್ಲಿ ತಾನು ಹೇಗೆ ರೂಪಿತನಾದೆ ಎಂದು ಕೃತಜ್ಞತೆಯ ರೂಪದಲ್ಲಿ ಸ್ಮರಿಸಿಕೊಳ್ಳುತ್ತಿರುವುದು. ಕವಿಯ ಮನಸ್ಸು ಸದಾ ಸಿದ್ಧೇಶ್ವರಾನಂದರನ್ನು ಕುರಿತು, ಅವರ ಸಾನಿಧ್ಯದಲ್ಲಿ ಸದಾ ಇರುವುದನ್ನು ಬಯಸುತ್ತದೆ. ಕುವೆಂಪು ಹಾಗೂ ಸ್ವಾಮಿ ಸಿದ್ಧೇಶ್ವರಾನಂದರು ಅಧ್ಯಾತ್ಮಿಕ ಅಂಶಗಳ ಬಗ್ಗೆ ಚರ್ಚೆ ಮಾಡುತ್ತಾರೆ. ಆಶ್ರಮಕ್ಕೆ ಹೋದಾಗಲೆಲ್ಲ ಸಿದ್ಧೇಶ್ವರಾನಂದರ ಜತೆ ನಾನಾ ಧಾರ್ಮಿಕ ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಚರ್ಚೆ ನಡೆಸುತ್ತಾರೆ. ಅಲ್ಲದೆ ಸಿದ್ಧೇಶ್ವರಾನಂದರು ತಾವು ಓದಿದ ಗ್ರಂಥಗಳನ್ನು ನನಗೆ ಓದಲು ಕೊಟ್ಟು ನನ್ನ ಜ್ಞಾನಪರಿಧಿಯನ್ನು ವಿಸ್ತರಿಸಿದರು ಎಂದು ಗೌರವಪೂರ್ವಕವಾಗಿ ಸ್ಮರಿಸಿಕೊಳ್ಳುವುದು ಇವರಿಬ್ಬರ ನಡುವಿನ ಸಂಬಂಧವನ್ನು ತಿಳಿಸುತ್ತದೆ. ಕುವೆಂಪು ಅವರು ಸಂತೇಪೇಟೆಯ ಹೋಟೆಲ್‌ನಲ್ಲಿದ್ದಾಗ ಅವರ ಆರೋಗ್ಯ ದಿನೇ ದಿನೇ ಕೆಟ್ಟು, ಹಾಸಿಗೆ ಹಿಡಿಯುತ್ತಾರೆ.

ಆಶ್ರಮದ ಕಡೆಗೆ ಬಾರದ ಕುವೆಂಪು ಅವರನ್ನು ಸಿದ್ಧೇಶ್ವರಾನಂರು ನೆನೆಸಿಕೊಂಡು ಹೇಳಿಕಳಿಸುತ್ತಾರೆ. ಅವರ ದೇಹಸ್ಥಿತಿಯ ವಿಷಯವನ್ನು ಅರಿತು ತಮ್ಮ ಸ್ನೇಹಿತರೊಡಗೂಡಿ ಭೇಟಿಕೊಟ್ಟು ಆಸ್ಪತ್ರೆಗೆ ಸೇರಿಸಿ ಧೈರ್ಯ ಹೇಳಿಬರುತ್ತಾರೆ. ಆ ಸಂದರ್ಭದಲ್ಲಿ ರಚಿತವಾದ ಕವಿತೆಯೇ 'ಶ್ರೀ ಸಿದ್ಧೇಶ್ವರಾನಂದರು.'

---

೧. ಹಂಪಿ ಕನ್ನಡ ವಿಶ್ವವಿದ್ಯಾಲಯ: ಕುವೆಂಪುಸಮಗ್ರ ಗದ್ಯ, ಸಂಪುಟ೩, ಪು. ೪೨೧.

ದೇಹಮಂ
ಕಾಣ್ಕೆಗೈದಿರಿದೇವ ಧನ್ವಂತರಿಯ ಗುಡಿಗೆ
ಪ್ರಾಣಮಂಕೊಂಡೊಯ್ದು ಭಾಗೀರಥಿಯ ತಡಿಗೆ
ಮೀಯಿಸಿದಿರದನು ಗುರುಮಂತ್ರದಿಂ.."

ಕವಿ ತಾವು ವ್ಯಕ್ತಿತ್ವ ಪಡೆಯಲು ಕಾರಣರಾದವರ ಬಗ್ಗೆ 'ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕುವೆಂಪು ಸಿದ್ದೇಶ್ವರಾನಂದರನ್ನು ಕುರಿತು ಬರೆದಿರುವ ಕವಿತೆಗಳು ಬಹುಮಟ್ಟಿಗೆ ಕೃತಜ್ಞತೆ ರೂಪದಲ್ಲಿವೆ. ಅದಕ್ಕೆ ಈ ಕವಿತೆ ಹೊರತಾಗಿಲ್ಲ ಎನ್ನಬಹುದು. ಗುರುಸ್ಮೃತಿಯ ಆಶ್ರಯದಲ್ಲಿ ಅವರು ಗುಣವಾದ ನಂತರ ಸ್ವಾಮಿಗಳು ಅವರನ್ನು ಆಶ್ರಮಕ್ಕೆ ಕರೆತಂದು ಧನ್ವಂತರಿಯಂತೆ, ತಂದೆ ತಾಯಿಯರಿಗಿಂತ ಮಿಗಿಲಾಗಿ ಉಪಚರಿಸಿದರು ಎಂದು ಸ್ಮರಿಸುತ್ತಾರೆ. ಜೀವ, ಜಗತ್ತು, ಕರ್ಮ, ಈಶ್ವರ, ಪ್ರಾರ್ಥನೆ, ಜನ್ಮಾಂತರ, ಗುರು, ಅವತಾರ, ಸಾಧನೆ ಇತ್ಯಾದಿ ವಿಚಾರಗಳನ್ನು ಕುರಿತು ಪರಸ್ಪರ ಇಬ್ಬರೂ ಚರ್ಚಿಸುತ್ತಾರೆ. 'ಕೃತಜ್ಞತೆ' ಎಂಬ ಕವಿತೆಯು ಸಿದ್ಧೇಶ್ವರಾನಂದರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಎಂದು ಹೇಳಬಹುದು. ೧೯೬೦ ರ ಸಮಯದಲ್ಲಿ ಉದಯರವಿಯಲ್ಲಿ ಕುಳಿತು ಸಿದ್ಧೇಶ್ವರಾನಂದರು ಚೀನಾಕ್ಕೆ ಹೋಗಿದ್ದಾಗ ಅವರ ಕ್ಷೇಮಕ್ಕಾಗಿ ಪ್ರಾರ್ಥಿಸಿ ಬರೆದ ಕವನವಾಗಿದೆ.

ಗುರುವಿನಡೆಗೆ ಕರೆದ ಗುರುವೆ,
ನನ್ನ ಜೀವದೇವ ತರುವೆ,
ನಿಮ್ಮನೆಂತು, ಹೇಳಿ, ಮರೆವೆ? (ಕೃತಜ್ಞತೆ)
ನೆ ನೆ ವೆ
ಕೃತಜ್ಞತೆಯೊಳನುದಿನ !

ಕವಿ ಸದಾ ಕೃತಜ್ಞತೆಯಿಂದಲೇ ನಿಮಗೆ ವಂದಿಸುವೆ ಎಂದು ಹೇಳುತ್ತಾರೆ. ತನ್ನನ್ನು ಮಹಾಪುರುಷರ ಸಾನಿಧ್ಯಕ್ಕೆ ಕರೆದುಕೊಂಡು ಹೋದ ಗುರು ನೀವು ಎಂದು ಸ್ಮರಿಸಿಕೊಳ್ಳುತ್ತಾ ಕೃತಜ್ಞತಾ ಭಾವವನ್ನು ಅರ್ಪಿಸುತ್ತಾರೆ. ಕವಿ ತನ್ನ ಅರ್ಧಜೀವನವನ್ನು ಕಳೆದ ಮೇಲೂ ನಿಮ್ಮನ್ನು ನೆನೆಯುವುದೇ ನನ್ನ ಪಾಲಿನ ಭಾಗ್ಯವೆನ್ನುತ್ತಾರೆ.

ಮಾನ್ಯರಲ್ಲಿ ಪರಮಮಾನ್ಯ
ಸಾಮಾನ್ಯರಲಿ ಸಾಮಾನ್ಯ !
ನಿಮ್ಮ ಕೃಪೆಯೊಳಾದೆ ಧನ್ಯ
ನಿಮ್ಮ
ನೆನೆವುದೆನಗೆ ಪೂಜನ!

ಸ್ವಾಮಿ ಸಿದ್ಧೇಶ್ವರಾನಂದರು ಸ್ವತಃ ರಾಜಮನೆತನಕ್ಕೆ ಸೇರಿದವರಾಗಿದ್ದರೂ ಅವರಲ್ಲಿ ಸಾಮಾನ್ಯತೆಯ ವ್ಯಕ್ತಿತ್ವ ಹೇಗಿತ್ತು ಎಂಬುದನ್ನು ಕವಿ ಗುರುತಿಸುತ್ತಾರೆ. "ನನ್ನ ಚೇತನದ ಉದ್ಧಾರಕ್ಕೆ ಅವರಿಂದಾದ ದೈವೀ ಉಪಕಾರವನ್ನು ನೆನೆದು, ಜಗತ್ತಿನ ಜ್ಞಾನದ ಹೊಸ ಹೊಸ ಮುಖಗಳಿಗೆ ಬಾಗಿಲುಗಳನ್ನು ತೆರೆದು ನನ್ನನ್ನು ಆ ಬೆಳಕಿನ ವಲಯಗಳಿಗೆ ನೂಕುತ್ತಿದ್ದರು"[೧] ಎಂದು ಸ್ಮರಿಸಿಕೊಳ್ಳುತ್ತಾರೆ. ದಾಂಪತ್ಯ ಸಂದರ್ಭದಲ್ಲಿ ಅಂದರೆ ಹೆಂಡತಿ, ಮಕ್ಕಳನ್ನು ಸಂತೋಷಪಡಿಸಿ ನಿಮ್ಮನ್ನು ಸದಾ ನೆನೆಯುವೆ ಎನ್ನುತ್ತಾರೆ. ಕವಿ ಸಿದ್ದೇಶ್ವರಾನಂದರನ್ನು ನೆನೆಯುವುದೇ ತನಗೆ ಆತ್ಮಸಾಧನೆ' ಎಂದು ಹೇಳುತ್ತಾರೆ.

'ಇದುವರೆಗೆ ನೀನೆನ್ನ ಕೈಹಿಡಿದು ನಡೆಸಿರುವೆ' ಕವನ ಹಲವು ಮಹತ್ವದ ಸಂಗತಿಗಳನ್ನು ಕುರಿತು ಚರ್ಚಿಸುತ್ತದೆ. ಕವಿ ಸಿದ್ಧೇಶ್ವರಾನಂದರ ವ್ಯಕ್ತಿತ್ವ, ಅವರ ಆಧ್ಯಾತ್ಮಿಕತೆಯ ದಾರಿ ಹೇಗೆ ತನ್ನ ಮೇಲೆ ಪ್ರಭಾವ ಬೀರಿತ್ತು ಎಂಬುದನ್ನು ತಿಳಿಸುತ್ತಾರೆ. ಕವಿ ತನ್ನ ಪ್ರಭಾವ ಬೀರಿದ ಅಂಶಗಳ ಬಗ್ಗೆ ತಲೆಕೆಡಿಸಿಕೊಂಡು ಬರೆದಿದ್ದಾರೆ ಎಂದು ಮೇಲ್ನೋಟಕ್ಕೆ ಅನಿಸಿದರೂ, ವೈರಾಗ್ಯ ಸೌಂದರ್ಯ, ಮಾಯೆ-ಮುಕ್ತಿಗಳು ತಮ್ಮ ಮೋಹಕತೆಯನ್ನು ಹೇಗೆ ಬಿಂಬಿಸುತ್ತವೆ ಎಂದು ಕವಿ ಚಿಂತಿಸುತ್ತಾರೆ. ಕವಿ ತಾವು ಒಂದು ಸ್ವತಂತ್ರವಾದ ವ್ಯಕ್ತಿತ್ವ ರೂಪಿಸಿಕೊಳ್ಳಲು ಕಾರಣರಾದ ವ್ಯಕ್ತಿ ಹಾಗೂ ಅವರಿಂದ ಉಂಟಾದ ಆಧ್ಯಾತ್ಮಿಕ ಪರಿಸರದ ಬಗ್ಗೆ ವಿವರಗಳನ್ನು ಒದಗಿಸುತ್ತಾರೆ.

> "ಇದುವರೆಗೆ ನೀನೆನ್ನ ಕೈಹಿಡಿದು ನಡೆಸಿರುವೆ
> ಇನ್ನಾದರೂ ನನ್ನ ಕೈಬಿಡದಿರು"

ಎಂದು ಕವಿ ಹೇಳುವುದನ್ನು ಗಮನಿಸಿದಾಗ ಇದು ವ್ಯಕ್ತಿ ಸ್ಮರಣೆಯೆಂದು ಅನಿಸಿದರೂ, ವಿಶಾಲವಾಗಿ ಅರ್ಥೈಸಿಕೊಂಡಾಗ ಆಧ್ಯಾತ್ಮಿಕ ಸ್ಮರಣೆಯಾಗಿ ಕಾಣುತ್ತದೆ. ಕವಿ ತಾನು ಒಂದು ಸ್ವತಂತ್ರದಾರಿಯನ್ನು ಕಾಣಬೇಕೆಂದಾಗ ಆತನಿಗೆ ಎದುರಾಗುವ ಅಂಶಗಳ ಕುರಿತು ಹೀಗೆ ಹೇಳುತ್ತಾರೆ.

> ವೈರಾಗ್ಯವೊಂದು ಕಡೆ ತನ್ನ ಮಹಿಮೆಯ ತೋರಿ
> ಕೈಚಾಚಿ ಕರೆಯುತ್ತಿದೆ;
> ಸೌಂದರ್ಯವೊಂದು ಕಡೆ ತನ್ನ ಮೋಹವ ಬೀರಿ
> ಮೈಚಾಚಿ ಸೆಳೆಯುತ್ತಿದೆ..
> ಒಂದು ಕಡೆ ಸ್ವಾತಂತ್ರ್ಯ, ಒಂದು ಕಡೆ ಮಾಧುರ್ಯ,
> ನಡುವಿಹೆನು ಬಟ್ಟೆಗೆಟ್ಟು

---

೧. ಕುವೆಂಪು: ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ೧೯೯೩, ಪುಟ. ೯೨೧.

ಮುಕ್ತಿಯನ್ನೊಪ್ಪಲೋ!.. ಮುಕ್ತಿಯನ್ನೊಪ್ಪಲೋ?
ತಿಳಿದ ನೀನೆನ್ನನಟ್ಟು! ....

ವೈರಾಗ್ಯ ಒಂದು ಕಡೆಯಲ್ಲಿ ಮಹಿಮೆಯ ತೋರಿ ಕರೆಯುತ್ತಿದ್ದರೆ, ಮತ್ತೊಂದೆಡೆಯಲ್ಲಿ ಸೌಂದರ್ಯ ತನ್ನ ಮೋಹವನ್ನು ತೋರಿ ಮೈಚಾಚಿ ಸೆಳೆಯುತ್ತಿರುವ ದೃಶ್ಯವನ್ನು ಕವಿ ಕೊಡುತ್ತಾರೆ. ಹಾಗೆಯೇ ಮುಕ್ತಿ ಮತ್ತು ಮಾಯೆಯ ಬಗ್ಗೆ ಗಂಭೀರವಾಗಿ ಯೋಚಿಸಲು ತೊಡಗುತ್ತಾರೆ. ಕವಿ ಯಾವ ದಾರಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಗೊಂದಲದಿಂದ ದಾರಿಕಾಣದೆ ಪರಿತಪಿಸುವುದು ಒಂದು ಕಡೆಯಾದರೆ, ಈ ಗೊಂದಲವನ್ನು ನಿವಾರಣೆ ಮಾಡುವವನು ನೀನೆ ಎಂದು ಸ್ಮರಿಸುತ್ತಾರೆ. ಸೌಂದರ್ಯ, ವೈರಾಗ್ಯ, ಮಾಯೆ, ಮುಕ್ತಿ ಈ ಎಲ್ಲವನ್ನು ಬಲ್ಲ ವ್ಯಕ್ತಿ ನೀನಾದರಿಂದ ನೀನೆ ನನಗೆ ದಾರಿ ತೋರು ಎಂದು ಹೇಳುತ್ತಾರೆ. 'ತಿಳಿದ ನೀನೆನ್ನನಟ್ಟು!' ಎಂಬ ಸಾಲು ಅರ್ಥವತ್ತಾಗಿ ರೂಪುಗೊಂಡಿದೆ. ಕವಿಯ ಮನಸ್ಸು ಚಂಚಲತೆಯನ್ನು ಅನುಭವಿಸಿ ಒಂದು ಸರಿಯಾದ ದಾರಿಕಾಣದೆ ಉಯ್ಯಾಲೆ-ಯಾಡುತ್ತಿರುವ ಚಿತ್ರಣ ಒಂದು ಕಡೆಯಾದರೆ, ಆ ಎಲ್ಲದರ ದಾರಿಯನ್ನು ತಿಳಿದ ನೀನು ನನಗೆ ಸರಿಯಾದ ದಾರಿ ತೋರು ಎನ್ನುವ ಚಿತ್ರ ಮತ್ತೊಂದೆಡೆ ರೂಪುಗೊಂಡಿದೆ.

ಹೀಗೆ ಕುವೆಂಪು ತಮ್ಮ ಜೀವನವನ್ನು ರೂಪಿಸಿರುವ ಮಹಾಪುರುಷರ ಬಗ್ಗೆ ಕವಿತೆಗಳನ್ನು ರಚಿಸಿದ್ದಾರೆ. ಈ ಮೂವರು ಮಹಾಪುರುಷರನ್ನು ಕುರಿತು ತನ್ನ ಕೃತಜ್ಞತೆ ಮಾತುಗಳನ್ನು ಕವಿ ತನ್ನ ಕಾವ್ಯದ ಉದ್ದಕ್ಕೂ ಹೇಳಿಕೊಂಡಿದ್ದಾರೆ. ಕವಿಯ ಜೀವನ ಸಮಸ್ತವನ್ನು ಈ ಮಹಾಪುರುಷರು ಆಕ್ರಮಿಸಿಕೊಂಡಿದ್ದರು ಎಂದರೆ ತಪ್ಪಾಗದು. ಹೀಗೆ ಈ ಮಹಾಪುರುಷರಿಂದ ಕುವೆಂಪು ಅವರಲ್ಲಿ 'ಅಧ್ಯಾತ್ಮ' ಭಾವ ರೂಪುಗೊಳ್ಳುತ್ತದೆ. ಆದ್ದರಿಂದ ಅಧ್ಯಾತ್ಮವೇ ಬಾಳಿನ ಉಸಿರಾಗಿ ತನ್ನ ಮೇಲೆ ಪ್ರಭಾವ ಬೀರಿದೆ ಎಂದು ಹೇಳುತ್ತಾರೆ. ಕವಿ ಆತ್ಮೋದ್ಧಾರಕ್ಕಾಗಿ ಮಾತ್ರವಲ್ಲ ರಾಷ್ಟ್ರೋದ್ಧಾರಕ್ಕಾಗಿಯೂ ಆ ಮೂವರನ್ನು ಸದಾ ನೆನೆಯುತ್ತಾರೆ. ಆದ್ದರಿಂದ ರಾಮಕೃಷ್ಣ ಪರಮಹಂಸ, ಸ್ವಾಮಿವಿವೇಕಾನಂದ, ಸ್ವಾಮಿ ಸಿದ್ಧೇಶ್ವರಾನಂದರನ್ನು ಕುರಿತು ಕುವೆಂಪು ಬರೆದಿರುವ ಕವಿತೆಗಳು ಗುಣಗಾತ್ರಗಳಲ್ಲಿ ಉನ್ನತವಾಗಿವೆ.

ಅಧ್ಯಾಯ – ೭

ದೇವರ ಬಗೆಗಿನ ಕವಿತೆಗಳು

ಭಾರತೀಯ ಪರಂಪರೆಯಲ್ಲಿ ಅಧ್ಯಾತ್ಮ ಚಿಂತನೆ ಮತ್ತು ಸಾಧನೆಗೆ ವಿಶಿಷ್ಟವಾದ ಸ್ಥಾನವಿದೆ. ಪ್ರಜ್ಞಾಪೂರ್ವಕವಾದ ಅಧ್ಯಾತ್ಮಜ್ಞಾನವನ್ನು ತಿಳಿಯಲು, ಶ್ರೀಸಾಮಾನ್ಯನಿಂದ ಮೊದಲುಗೊಂಡು ಸಿದ್ಧಿಯನ್ನು ಪಡೆದ ಮಹಾಯೋಗಿಗಳವರೆಗೆ ಎಲ್ಲರಲ್ಲೂ ಅಧ್ಯಾತ್ಮದ 'ತಿಳಿವು' ಮತ್ತು ಅನುಭವ ಅದರದೇ ಆದ ಸ್ವರೂಪ ಮತ್ತು ಪ್ರಮಾಣದಲ್ಲಿ ಎಲ್ಲರನ್ನು ಆವರಿಸಿದೆ. ಅಧ್ಯಾತ್ಮವನ್ನು ಅಲ್ಲಗಳೆಯುವುದು ಬಹು ವ್ಯಾಪಕ ಅರ್ಥದಲ್ಲಿ ಅದರ ಬಗೆಗಿನ ಚಿಂತನೆಯ ಒಂದು ಪ್ರಕಿಯೆಯೇ ಸರಿ. ಇಡೀ ಸೃಷ್ಟಿಯು ಒಂದು ಶಕ್ತಿಯ ರಚನೆ. ಇದರ ಆಗುಹೋಗುಗಳೆಲ್ಲ ಆ ಶಕ್ತಿಯ ನಿಯಮಾನುಸಾರ ನಡೆಯುತ್ತವೆ. ಆ ಶಕ್ತಿ ಸರ್ವಶಕ್ತ ಸರ್ವವ್ಯಾಪ್ತ ಇಂದ್ರಿಯ ಗೋಚರವಾಗುವ ಅಥವಾ ಗೋಚರವಾಗದ ಎಲ್ಲವೂ ಆ ಶಕ್ತಿಯ ರೂಪಗಳು. 'ಅಧ್ಯಾತ್ಮ' ಎಂಬುದಕ್ಕೆ ಸಂಸ್ಕೃತದಲ್ಲಿ 'ಆತ್ಮಕ್ಕೆ ಸಂಬಂಧಿಸಿದುದು' ಎಂದೂ ಆತ್ಮ ಪರಮಾತ್ಮಗಳ ಸಂಬಂಧ ಎಂದೂ ಅರ್ಥವಿದೆ. ಶ್ರೀ ಕುವೆಂಪು ಈ ಅರ್ಥದಲ್ಲಿಯೇ ತಮ್ಮ ಗೀತೆಗಳಲ್ಲಿ ಅಧ್ಯಾತ್ಮವನ್ನು ಪ್ರತಿಪಾದಿಸಿದ್ದಾರೆ. ಸ್ಥೂಲವಾಗಿ ಹೇಳುವುದಾದರೆ ಕುವೆಂಪು ತಮ್ಮ ದೇವರ ಬಗೆಗಿನ ಕವಿತೆಗಳಲ್ಲಿ ಶಿವನನ್ನೂ ಕಾಣುತ್ತಾರೆ. ಅವರ ದೃಷ್ಟಿಯಲ್ಲಿ 'ಶಿವಕಾಣದೆ ಕವಿ ಕುರುಡನೋ, ಶಿವ ಕಾವ್ಯದ ಕಣ್ಣೊ! ಅಲ್ಲದೆ ಅವರಿಗೆ 'ಸತ್ಯಂ ಶೀವಂ ಸುಂದರಂ' ಮೂರು ಒಂದೇ. ಇಲ್ಲೇಲ್ಲ ಕುವೆಂಪು ಅದ್ವೈತಿ, ದೇವರ ವಿಚಾರದಲ್ಲಿ ಅವರು ಅನುಭವಿಸುವುದು ರಸಾನುಭೂತಿ. ಮಾನವ ಮತ್ತು ದೇವರ ನಡುವಣ ರಹಸ್ಯಾತ್ಮಕ ಸಂಬಂಧವನ್ನು ಅರಿಯುವ, ಪರಾಶಕ್ತಿಯನ್ನು ತಿಳಿಯುವ, ಆ ಶಕ್ತಿಯೊಡನೆ ಅವಿನಾಭಾವ ಸಂಬಂಧವನ್ನು ಬೆಳೆಸುವ ಪ್ರಯತ್ನವೇ ಅಧ್ಯಾತ್ಮ. ಕುವೆಂಪು ಅವರ ಅಧ್ಯಾತ್ಮಚಿಂತನೆ ಸಂಪ್ರದಾಯದಲ್ಲ, ಬದಲಿಗೆ ವೈಚಾರಿಕ ನಿಕಷಕ್ಕೆ ಒಡ್ಡಿ ಪರೀಕ್ಷಿಸಿ ಅಪ್ಪಿಕೊಂಡದ್ದಾಗಿದೆ.

ಕುವೆಂಪು ಅವರು ಅಧ್ಯಾತ್ಮ ಆರಾಧಕರು. ಅಧ್ಯಾತ್ಮವೇ ಅವರ ಕಾವ್ಯದ ಪ್ರಮುಖಧಾರೆಯಾಗಿದೆ. ನಿಸರ್ಗೋಪಾಸನೆಯ ಮೂಲಕ ಅವರ ಅಧ್ಯಾತ್ಮ ಸಾಧನೆ ಸಾಗುತ್ತದೆ. ಅಧ್ಯಾತ್ಮ ತಮ್ಮ ಜೀವನವನ್ನೇ ಆವರಿಸಿಕೊಂಡಿದೆ ಎನ್ನುವ ಕುವೆಂಪು ಅವರ ಮಾತುಗಳು ಹೀಗಿವೆ. "ನನ್ನ ಸಾಹಿತ್ಯದಲ್ಲಿ ಅಧ್ಯಾತ್ಮ ದೃಷ್ಟಿಯೇ ಸರ್ವವ್ಯಾಪಿ, ಅದು ನನ್ನ ಇಡೀ ಜೀವನವನ್ನೆಲ್ಲ ಆಕ್ರಮಿಸಿಕೊಂಡಿದೆ. ಸಾಹಿತ್ಯಕ್ಕಾಗಿ ಸಾಹಿತ್ಯರಚಿಸುವುದು ನನ್ನ ಉದ್ದೇಶ ಅಲ್ಲ, ಅಧ್ಯಾತ್ಮ ಸಾಧನೆ ನನ್ನ ಜೀವನೋದ್ದೇಶ. ಆ ಸಾಧನೆಯ ಅನುಭವವೇ ಸಾಹಿತ್ಯವಾಗಿ ಹೊರಹೊಮ್ಮುತ್ತದೆ. ನಿಸರ್ಗ ವರ್ಣನೆಯನ್ನು ತೆಗೆದುಕೊಳ್ಳಿ. ಕೇವಲ ಬೌದ್ಧಿಕವಾಗಿ ಮಾತ್ರವಲ್ಲ; ಭಾವನಾತ್ಮಕವಾಗಿ ಮಾತ್ರವಲ್ಲ, ಆಧ್ಯಾತ್ಮಿಕವಾಗಿಯೂ ಪ್ರಕೃತಿ ಸೌಂದರ್ಯವನ್ನು ಗ್ರಹಿಸಲು ಯತ್ನಿಸುತ್ತೇನೆ.

ಅದು ಅಧ್ಯಾತ್ಮ ಸಾಧನೆಯ ಸಾಧನವೂ ಆಗುತ್ತದೆ. ಅದರ ಹಿಂದಿರುವ ದಿವ್ಯತತ್ವವನ್ನು ಕುರಿತು ಗಾಢವಾಗಿ ಆಲೋಚಿಸುತ್ತೇನೆ. ಋಷಿ ಕವಿಗೆ ಕವನಗಳೆ ಮಂತ್ರಗಳು, ಕವನಗಳೆ ದೇವಾಲಯ, ಹೊರಗಣ್ಣಿಗೆ ಬಾಹ್ಯಸೌಂದರ್ಯ ಮಾತ್ರ ಗೋಚರಿಸುವಂತೆ ಅಂತಶ್ಚಕ್ಷುವಿಗೆ, ಆತ್ಮಕ್ಕೆ ಅಧ್ಯಾತ್ಮ ಸೌಂದರ್ಯದ ದರ್ಶನವಾಗುತ್ತದೆ"[೧] ಎಂದು ಹೇಳುತ್ತಾರೆ. ಕವಿಯ ಮಾತಿನಿಂದ ಹಲವಾರು ವಿಚಾರಗಳು ತಿಳಿಯುತ್ತವೆ. ಅವರ ಸಾಹಿತ್ಯ ಅಧ್ಯಾತ್ಮದ ದರ್ಶನವೆಂದು ಹೇಳಬಹುದು. ಅವರಿಗೆ ಅಧ್ಯಾತ್ಮವೇ ದಿವ್ಯಮಂತ್ರವಾಗಿದೆ.

ಕುವೆಂಪು ಅವರ 'ದೇವರಿನ ಕಲ್ಪನೆ' ಅತ್ಯಂತ ವಿಶಿಷ್ಟವಾದದ್ದು. ಪ್ರಕೃತಿಯ ಮಡಿಲಲ್ಲಿ ಕುಳಿತು ಭಗವಂತನ ಸಾಕ್ಷಾತ್ಕಾರವನ್ನು ಕಾಣಲು ಹೋಗುತ್ತಾರೆ. ಕವಿ ಭಗವಂತನ ಬರುವಿಕೆಯನ್ನು ಪ್ರಕೃತಿಯಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ಭಗವಂತನ ದರ್ಶನ ಪ್ರಕೃತಿಯ ಒಡಲಿನಲ್ಲಿಯೇ ಹುಟ್ಟುತ್ತದೆ. ಕವಿ ಭಗವಂತನ ಸ್ವರೂಪವನ್ನು ಕಾಡಿನಲ್ಲಿ, ಬಡವರೆದೆಗಳಲ್ಲಿ ಹುಡುಕಲು ಪ್ರಯತ್ನಿಸುತ್ತಾರೆ. ಕುವೆಂಪು ನಿಜವಾಗಿ ಆಸ್ತಿಕರು. ಅಂದರೆ ನಮಗೆ ತಿಳಿದಿರುವ ಜಗತ್ತಿನ ಎಲ್ಲ ಶಕ್ತಿಗಳಿಗೂ ಮೀರಿದ ಶಕ್ತಿಯೊಂದಿದೆ ಎಂಬುದು ಅವರ ದೃಢವಾದ ನಂಬಿಕೆ. ಪ್ರಾರ್ಥನೆಯ ಶಕ್ತಿಯಲ್ಲಿ ಅವರಿಗೆ ಗಾಢವಾದ ವಿಶ್ವಾಸ. ದೇವರು ಯಾವ ಲೌಕಿಕ ಪ್ರಯೋಜನಗಳನ್ನಾಗಲಿ ತಮಗೆ ನೀಡುತ್ತಾನೆ ಎಂಬ ಭಾವನೆ ಅವರಿಗಿರಲಿಲ್ಲ. ಆದರೆ ಆತ್ಮಸಾಕ್ಷಾತ್ಕಾರ ಎಂಬುದರಲ್ಲಿ ಅವರಿಗೆ ನಂಬಿಕೆಯುಂಟು. ಉಪನಿಷತ್ತುಗಳ ಆಳವಾದ ಪರಿಚಯ ಅವರಿಗಿತ್ತು. ಭಗವದ್ಗೀತೆಯನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು. ಯಾವುದೇ ಒಂದು ಧರ್ಮ ಇನ್ನೊಂದು ಧರ್ಮಕ್ಕಿಂತ ಹೆಚ್ಚಾದದ್ದು ಎಂಬ ಭಾವನೆ ಅವರಿಗೆ ಇರಲಿಲ್ಲ. ಜಗತ್ತಿನಲ್ಲಿ ಎಷ್ಟು ಕೋಟಿ ಜನರಿದ್ದಾರೆಯೋ ಅಷ್ಟು ಕೋಟಿ ಧರ್ಮಗಳಿವೆ ಎಂದು ಹೇಳುವುದನ್ನು ನೋಡಬಹುದು.

ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸರಿತೋರಿದಂತೆ, ತನ್ನ ಸಂಸ್ಕಾರಕ್ಕೆ ತಕ್ಕಂತಹ ಧರ್ಮವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ತಮ್ಮ ಆರಾಧ್ಯದೈವವಾದ ಶ್ರೀರಾಮಕೃಷ್ಣ ಪರಮಹಂಸರ ಮಾತುಕತೆಗಳ ಸಂಗ್ರಹವಾದ 'ಶ್ರೀರಾಮಕೃಷ್ಣ ವಚನವೇದ' ಎಂಬ ಗ್ರಂಥಕ್ಕೆ ಅತ್ಯಮೂಲ್ಯ ಮುನ್ನುಡಿ ಬರೆದಿದ್ದಾರೆ. ಅದು ಹೀಗಿದೆ.

"ಶ್ರೀರಾಮಕೃಷ್ಣ ವಚನವೇದ'ವೆಂದರೆ ಅದೊಂದು ಕರತಲ ದೇವಸ್ಥಾನ, ಕರತಲ ತಪೋವನ, ಕರತಲ ಪುಣ್ಯಕ್ಷೇತ್ರ. ಆದರೆ ದೇವಸ್ಥಾನ ಪುಣ್ಯಕ್ಷೇತ್ರಗಳಂತೆ ತಾನೆಂದಿಗೂ ಕಲುಷಿತನಾಗುವ ಸಂಭವವಿಲ್ಲ, ಶಿಥಿಲವಾಗುವ ಸಂಭವವಿಲ್ಲ. ಯಾವ ಮನೆಯಲ್ಲಿ ಈ

---

೧. ಹಂಪಿ ಕನ್ನಡ ವಿಶ್ವವಿದ್ಯಾಲಯ : ಕುವೆಂಪು ಸಮಗ್ರ ಗದ್ಯ, ಸಂ. ೨, ಸಂದರ್ಶನಗಳು, ಪುಟ. ೮೫೧.

'ವಚನವೇದ'ವಿರುತ್ತದೆಯೋ ಅದು ಮಂದಿರವಾಗುತ್ತದೆ. ಯಾರ ಕೈ ಇದನ್ನು ಹಿಡಿದಿರುತ್ತದೆಯೋ ಅದು ಅಮೃತವನ್ನು ಈಂಟುತ್ತಿರುತ್ತದೆ. ಇದು ಆನಂದದ ಆಗರ; ಶಾಂತಿಯ ಸಾಗರ; ದಿವ್ಯಜ್ಞಾನದ ಓಗರ. ಇದು ದಿಕ್ಕುಗೆಡದಂತೆ ಗುರಿದೋರುವ ಧ್ರುವತಾರೆ. ಇಲ್ಲಿ ವೇದವೇದಾಂತ ದರ್ಶನಾದಿ ಸರ್ವಸಾರವಿದೆ. ಓದು ಬರುವ ಅತ್ಯಂತ ಸಾಮಾನ್ಯನೂ ಇದನ್ನು ಓದಿದ ಮೇಲೆ ಯಾವ ಪಂಡಿತನಿಗೂ ಕರುಬುವ ಅವಶ್ಯಕತೆಯಿಲ್ಲ; ಯಾವ ವಿದ್ವತ್‌ಪೂರ್ಣವಾದ ತತ್ವಜ್ಞಾನಿಗೂ ಕೀಳೆಂದು ನಾಚಬೇಕಾಗಿಲ್ಲ. ಅದಕ್ಕೆ ಬದಲು ಭಗವಂತನ ಕೃಪೆಯಿಂದ ತನಗಿಂತಲೂ ಧನ್ಯರಿಲ್ಲ ಎಂತು ನಿರ್ಮಮನಾಗುತ್ತಾನೆ, ಶಾಂತನಾಗುತ್ತಾನೆ, ಪೂರ್ಣನಾಗುತ್ತಾನೆ. ಆತನಿಗೆ ಗಗನದ ವೈಶಾಲ್ಯ ಹಿಮಾಚಲದ ಔನತ್ಯ ಎಲ್ಲವೂ ಸಿದ್ಧಿಸುತ್ತದೆ. ಇಷ್ಟು ಸರ್ವಜನ ಸಾಮಾನ್ಯ ರೂಪದಲ್ಲಿ ಇಷ್ಟು ಸರ್ವಸುಲಭ ರೂಪದಲ್ಲಿ ಭಗವಂತ ಎಂದೂ ಅವತರಿಸಿರಲಿಲ್ಲ, ಭಗವದ್‌ವಾಣಿ ತಾನೆಂದೂ ಕೃತಿಗೊಂಡಿರಲಿಲ್ಲ"[೧] ಹೀಗೆ ಕುವೆಂಪು ರಾಮಕೃಷ್ಣರ ತತ್ವ ಬೋಧನೆಯಿಂದ ಪ್ರಭಾವಿತರಾಗಿ ಅಧ್ಯಾತ್ಮಸಿದ್ಧಿಯ ಮುಖಾಂತರ ಭಗವಂತನನ್ನು ಕಾಣುತ್ತಾರೆ.

ಕುವೆಂಪು ಅವರ ಕೃತಿಗಳನ್ನು ಓದಿದವರಿಗೆ ದೇವರ ಬಗೆಗೆ ಅವರ ನಿಲವೇನು ಎಂಬುದು ಖಚಿತವಾಗಿ ತಿಳಿಯುತ್ತದೆ. ಉಪನಿಷತ್ತುಗಳನ್ನು ಜೀರ್ಣಿಸಿಕೊಂಡು, ಪಾಶ್ಚಾತ್ಯ ತತ್ವಶಾಸ್ತ್ರಗಳನ್ನು ಚೆನ್ನಾಗಿ ಮೆಲುಕು ಹಾಕಿಕೊಂಡು, ನೂತನ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಅವರ ಪ್ರಕೃತಿಗೀತೆಗಳೆಲ್ಲ ದರ್ಶನಾತ್ಮಕವಾಗಿವೆ. ಭಗವಂತನ ಮುಖಕ್ಕೆ ಹಿಡಿದ ಕನ್ನಡಿಗಳಾಗಿವೆ. ಒಂದು ಕಡೆ ಪ್ರಕೃತಿಯ ಸೌಂದರ್ಯೋಪಾಸನೆ, ಮತ್ತೊಂದು ಕಡೆ ಆತ್ಮವಿಚಾರ ಬಾಲ್ಯದಿಂದ ಅವರಲ್ಲಿ ರಕ್ತಗತವಾಗಿ ಬಂದಿರುವ ಸಂಗತಿಗಳಾಗಿವೆ.

ಪುಟ್ಟಪ್ಪನವರ ಸಾಹಿತ್ಯ ಅಗೆದಷ್ಟು ಆಳ, ಮೊಗೆದಷ್ಟು ಅಪಾರ. ಅವರನ್ನು ಪ್ರಕೃತಿ ಕವಿ, ವೈಚಾರಿಕ ಕವಿ, ಕ್ರಾಂತಿಕವಿ, ಬಂಡಾಯದ ಹರಿಕಾರ ಎಂದು ಕನ್ನಡ ಸಾರಸ್ವತ ವಿಮರ್ಶೆ ಗುರುತಿಸಿದ್ದು, ಆ ಎಲ್ಲ ನಿಷ್ಟೆಗಳಿಗೂ ಅವರು 'ನ್ಯಾಯ' ಒದಗಿಸಿದ್ದಾರೆ. ಆದರೆ ಅದಕ್ಕೂ ಮೊದಲಾಗಿ ಅವರೊಬ್ಬ ಆಧ್ಯಾತ್ಮಿಕ ಕವಿ, ದಾರ್ಶನಿಕ ಕವಿ, ಅನುಭಾವಕವಿ. ಅಷ್ಟು ಮಾತ್ರವಲ್ಲದೆ ಪುಟ್ಟಪ್ಪನವರು ಮಹಾತ್ಮಗಾಂಧೀಜಿ, ಶ್ರೀ ವಿನೋಬಾಜಿ, ರವೀಂದ್ರನಾಥ ಠಾಗೋರ್, ಬುದ್ಧ ಮುಮಥದ ಭಾರತೀಯ ದಾರ್ಶನಿಕರರಿಂದಲೂ ಭಾರತೀಯ ತತ್ವಶಾಸ್ತ್ರದಿಂದಲೂ ಮತ್ತು ಉಪನಿಷತ್ತು-ಗಳಿಂದಲೂ ಹಾಗೆಯೇ ಟಾಲ್‌ಸ್ಟಾಯ್, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದ

---

೧. ಶ್ರೀ ರಾಮಕೃಷ್ಣಪರಮಹಂಸ, ಶ್ರೀರಾಮಕೃಷ್ಣಾಶ್ರಮ, ಪುಟ. ೧೮-೧೯, ಮೈಸೂರು, ೧೯೯೬.

ಪಾಶ್ಚಾತ್ಯ ಮಹಾಕವಿಗಳಿಂದಲೂ ಮತ್ತು ಪಾಶ್ಚಾತ್ಯ ತತ್ವಶಾಸ್ತ್ರದಿಂದಲೂ ಗಾಢ ಪ್ರಭಾವಕ್ಕೆ ಒಳಗಾಗಿದ್ದವರು. ತತ್ಕಾರಣವಾಗಿಯೋ ಏನೋ ಅವರ ಚಿಂತನೆ ಮತ್ತು ಸಾಹಿತ್ಯಾಭಿವ್ಯಕ್ತಿ ಅನುಭಾವದತ್ತ ವಾಲಿದುದು ಸಹಜ. ಪ್ರಕೃತಿಪ್ರಿಯತೆ, ಸೌಂದರ್ಯೋಪಾಸನೆ, ಭಾವತೀವ್ರತೆ ಮತ್ತು ಅಧ್ಯಾತ್ಮಿಕತೆಗಳು ಕುವೆಂಪು ಕಾವ್ಯದಲ್ಲಿ ಪಡಿಮೂಡಿವೆ.

ಕುವೆಂಪು ಅವರ ಅಧ್ಯಾತ್ಮ ವೈಜ್ಞಾನಿಕ ಮತ್ತು ವೈಚಾರಿಕ ಪರ. ಅವರಿಗೆ ಅವೆರಡೂ ಒಂದೇ ಮತ್ತು ಭಿನ್ನವಾಗಿದೆ. "ಕುವೆಂಪು ಅವರ ಸಾಮಾಜಿಕ ಹಾಗೂ ತಾತ್ವಿಕ ವೈಚಾರಿಕತೆಯು ರೂಪುಗೊಂಡಿರುವುದು ವಿಜ್ಞಾನ ಹಾಗೂ ವೇದಾಂತದ ಗಾಢವಾದ ತಿಳಿವಳಿಕೆಯಿಂದಲೇ"[೧] ಎಂದು ಜಿ.ಎಸ್.ಶಿವರುದ್ರಪ್ಪ ಅಭಿಪ್ರಾಯ-ಪಡುತ್ತಾರೆ. ದಾರ್ಶನಿಕ ಕವಿಗಳಲ್ಲಿ ಕಾಣಬಹುದಾದ ಮನಸ್ಸಿನ ತುಯ್ದಾಟ, ಸಂದೇಹ, ತರ್ಕ, ಜಿಜ್ಞಾಸೆಯ ಅನುಭಾವ ಈ ಎಲ್ಲವು ಅವರ ದೇವರ ಬಗೆಗಿನ ಕವಿತೆಗಳಲ್ಲಿ ಅಭಿವ್ಯಕ್ತಿಗೊಂಡಿವೆ. ಆ ದೇವರ ಬಗೆಗಿನ ಕವಿತೆಗಳು ಹೀಗಿವೆ:

'ನೀ ಬರುವೆ', 'ಎಲ್ಲಿ ನಿನ್ನನು ನೋಡಲಿ', 'ಆವದಾರಿಯೊಳು ಬರುವೆ?', 'ಯಾರೊ ಕರೆದರು', 'ಲೀಲೆ', 'ಎಂದಾದರೊಂದು ದಿನ', 'ಕಾಣಿಕೆ', 'ಪ್ರಾರ್ಥನೆ', 'ಬಲವ ನೀಡೆನಗೆ', 'ಮಾಯೆಮುಕ್ತಿ', 'ದಿನದಿನವೂ ನೀ ಬಂದಿರುವೆ', ಎಂದಿಗೂ ಮುಗಿಯದ ಹಾಡನು ಹಾಡು', 'ತಾತ್ವಿಕ ಜಿಜ್ಞಾಸೆ ಕುರಿತು', 'ಸರ್ವಮುಕ್ತಿ' ಮೊದಲಾದವು.

ಕುವೆಂಪು 'ನೀ ಬರುವೆ' ಎಂಬ ಕವಿತೆಯಲ್ಲಿ ಪ್ರಕೃತಿಯಲ್ಲಿ ದೇವರನ್ನು ಕಾಣುತ್ತಾರೆ. ಕವಿ ಭಗವಂತನ ಬರುವಿಕೆಯನ್ನು ಪ್ರಕೃತಿಯಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ಭಗವಂತನ ದರ್ಶನ ಪ್ರಕೃತಿಯ ಒಡಲಿನಲ್ಲಿಯೇ ಹುಟ್ಟುತ್ತದೆ.

ತೊರೆಗಳು ಹಾಡುವ ಗಾನವ ಕೇಳುತ
ಹರುಷದಿ ಹಸುರೊಳು ಬೀಳುತ ಏಳುತ
ನಿರ್ಜನ ದಡದೊಳು ನಡೆವಾಗ (ನೀ ಬರುವೆ)
ಮೆಲ್ಲಮೆಲ್ಲನೆ ಹೆಜ್ಜೆಯನಿಡುತ
ವಲ್ಲಭನಂದದಿ ನೀ ಬರುವೆ

ಭಗವಂತನ ಆಗಮನವಾಗುವುದು ಪ್ರಕೃತಿಯ ಮೂಲಕವೇ ಹೊರತು ಮತ್ತೆ ಯಾವುದರಿಂದಲ್ಲ. ಕಾಡಿನಲ್ಲಿ ಪಕ್ಷಿ ಹಾಗೂ ಕೂಜನಗಳು ಇರುವ ಸಂದರ್ಭದಲ್ಲಿ ಕವಿ ಮತ್ತು ಭಗವಂತ ಇಬ್ಬರು ಪರಸ್ಪರ ಎದರುಬದಿರಾಗುತ್ತಾರೆ. ಕವಿ ಹೃದಯದ

---

೧. ಹಂಪಿ ಕನ್ನಡ ವಿಶ್ವವಿದ್ಯಾಲಯ : ಕುವೆಂಪು ಸಮಗ್ರ ಕಾವ್ಯ, ಸಂ. ೧.

ಕಮಲದೊಳಗೆ ಭಗವಂತ ಹೆಜ್ಜೆಯನಿಡುತ ಬರುವುದನ್ನು ಕವಿ ವರ್ಣಿಸಿದ್ದಾರೆ. ಕುವೆಂಪು ದೃಷ್ಟಿಯಲ್ಲಿ ದೇವರು ಲೋಕಕಲ್ಯಾಣಕಾರಿಯಾದ ಒಂದು ಶಕ್ತಿ. ಅದು ಹೃದಯಸಂವಾದಿ. ಅವರು ತಮ್ಮ ಅನೇಕ ಪ್ರಾರ್ಥನಾ ಪದ್ಯಗಳಲ್ಲಿ ಇದನ್ನೆ ಹೇಳುತ್ತಾರೆ. ಕುವೆಂಪು ಅವರಿಗೆ ದೇವರ ಬಗ್ಗೆ ಸ್ಪಷ್ಟ ಕಲ್ಪನೆಯಿದೆ.

ಚಲುವೇ ದೇವರು, ಒಲವೇ ಪೂಜೆ
ಎಂಬುದೆ ರಸಜೀವನದೋಜೆ

ಪ್ರಕೃತಿ ಸೌಂದರ್ಯವೇ ದೇವರು, ಅದನ್ನು ವರ್ಣಿಸುವುದೇ ರಸಜೀವನ ಪೂಜೆ-ಯಾಗಿದೆ. ಭೂಮಿಯಲ್ಲಿ ಅನ್ಯಾಯ ಹೆಚ್ಚಿದಾಗ ದೇವರು ಅದನ್ನು ಸರಿಪಡಿಸಲು ಅವತಾರವೆತ್ತುತ್ತಾನೆ ಎಂಬುದು ಜನಸಾಮಾನ್ಯರ ನಂಬಿಕೆ. ರಾಮಕೃಷ್ಣ ಪರಮಹಂಸ, ಬುದ್ಧ, ಬಸವ, ಗಾಂಧಿ ಇವರೆಲ್ಲಾ ಹಾಗೆ ಬಂದವರೆಂಬುದು ನಂಬಿಕೆ. ದೈವಭಕ್ತಿ ಕೂಡ ಪ್ರೇಮದ ಇನ್ನೊಂದು ಮುಖ. ಕುವೆಂಪು ದೈವಪ್ರೇಮವನ್ನು ಚಿಂತನೆಯ ವಸ್ತುವನ್ನಾಗಿ ಮಾಡಿಕೊಂಡು ಕೆಲವು ಸುಂದರ ಗೀತೆಗಳನ್ನು ರಚಿಸಿದ್ದಾರೆ. 'ನೀಬರುವೆ', 'ಯಾರೊ ಕರೆದರು', 'ಲೀಲೆ', 'ಬಂದೆನ್ನಸೇರು', 'ಎಲ್ಲಿ ನಿನ್ನನು ನೋಡಲಿ' ಕವನಗಳಲ್ಲಿ ಭಕ್ತನ ಆರ್ತತೆ ಮತ್ತು ಸಮರ್ಪಣಾ ಭಾವಗಳು ವ್ಯಕ್ತವಾಗಿವೆ.

ಯಾರೊ ಕರೆದರು! ದನಿಯ ಕೇಳಿ ಬಂದೆ!
ಯಾರು ಕರೆದವರೊ ನಾನರಿಯೇ ಅರಿಯೆ!
ಒಂದು ವ್ಯಕ್ತಿಯ ಸುಳಿವು ಕಾಣಲಿಲ್ಲ,
ಒಂದು ಕಂಠದ ದನಿಯು ಕೇಳಲಿಲ್ಲ, (ಯಾರೊ ಕರೆದರು!)
ಒಂದು ಕಣ್ಣಿನ ಹೊಳಪು ಹೊಳೆಯಲಿಲ್ಲ,
ಒಂದು ಹೆಜ್ಜೆಯ ರವವು ಕೇಳಲಿಲ್ಲ
ಎಂದು ಕವಿಯದ ಮಸುಗು ಮುಸುಗುತಿತ್ತು;
ಎಂದು ಬೀಳದ ಮಂಜು ಬೀಳುತಿತ್ತು!

ಕವಿ ಈ ಕವನದಲ್ಲಿ ಭಗವಂತನ ಆಗಮನವನ್ನು ಕುರಿತು ಹೇಳುತ್ತಿದ್ದಾರೆ. ಕವಿಯನ್ನು ಒಂದು ಅಗೋಚರ ಶಕ್ತಿ ಬಂದು ಕರೆಯುತ್ತದೆ. ಯಾರು ಎಂದು ಬಾಗಿಲನ್ನು ತೆರೆದು ನೋಡುವಷ್ಟರಲ್ಲಿ ಯಾರು ಕಾಣುವುದಿಲ್ಲ. ಆಗ ಕವಿಯ ಮನಸ್ಸಿನಲ್ಲಿ ಭಯದ ವಾತಾವರಣ ಮೂಡುತ್ತದೆ. ನಡುರಾತ್ರಿಯಲ್ಲಿ ಯಾರೊ ಕರೆದಂತಾಗಿ, ಆಗ ಯಾರು ಎಂದು ನೋಡಿದಾಗ ಕವಿಯಲ್ಲಿ ಹಲವಾರು ಭಾವಗಳು ಹುಟ್ಟಿಕೊಳ್ಳುತ್ತವೆ. ಭಗವಂತ ಆಗಮಿಸುವುದನ್ನು ಕವಿ ಹೆದರಿಕೆಯಿಂದ ನೋಡುತ್ತಾರೆ. ಕರೆದ ವ್ಯಕ್ತಿಯ ಸುಳಿವು

ಕಾಣುವುದಿಲ್ಲ. ಧ್ವನಿ, ಹೊಳಪು, ಹೆಜ್ಜೆಯ ಶಬ್ಧ ಯಾವುದು ಕೇಳಲಿಲ್ಲ ಎಂದು ವರ್ಣಿಸುತ್ತಾರೆ.

ಎಂದು ಕವಿಯದ ಮಸುಗು ಮುಸುಗುತಿತ್ತು:
ಎಂದು ಬೀಳದ ಮಂಜು ಬೀಳುತಿತ್ತು!

ಕವಿ ಪ್ರಕೃತಿ ಸೌಂದರ್ಯವನ್ನು ವರ್ಣಿಸುತ್ತಿದ್ದಾರೆ. ಭಗವಂತ ಕರೆಯುವ ಮೊದಲು ಮಂಜು ಬೀಳದೆ, ನಂತರ ಭಗವಂತನ ಆಗಮನವಾದ ನಂತರ ಮಂಜಿನ ಹನಿಗಳು ಉದುರಲು ಪ್ರಾರಂಭಿಸುತ್ತವೆ. ಕವಿಯ ಈ ಕಲ್ಪನಾ ಶಕ್ತಿಯನ್ನು ನೋಡಿದಾಗ ಮನಸ್ಸಿಗೆ ಆಶ್ಚರ್ಯವಾಗುತ್ತದೆ. ಭಗವಂತ ಬಂದು ತನಗೆ ದರ್ಶನ ನೀಡುವನೆಂದು ಕವಿ ಕಾಯುತ್ತಾರೆ. ದೇವರ ಆಗಮನವಾಗದಿರುವುದನ್ನು ಕಂಡು ದುಃಖವನ್ನು ಅನುಭವಿಸುತ್ತಾರೆ. ಅವನ ಆಗಮನಕ್ಕೆ ತಂದಿದ್ದ ಹೂವಿನ ಹಾರವು ಬಾಡಿ ಹೋಗುತ್ತದೆ. ಆ ಹೂ ಮಾಲೆಯ ಮೇಲೆ ಧೂಳು ಆವರಿಸುತ್ತದೆ. ಆದ್ದರಿಂದ ನನಗೆ ದರ್ಶನ ತೋರಿ ಬಂದು ನನ್ನನ್ನು ಸಲಹುದೇವ ಎಂದು ಪ್ರಾರ್ಥಿಸುತ್ತಾರೆ. ಹೀಗೆ ಭಗವಂತನಿಗೆ ತನ್ನನ್ನೇ ಸಮರ್ಪಿಸಿಕೊಂಡಿದ್ದಾರೆ. ಕುವೆಂಪು ಅವರು ಡಾಂಬಿಕ ಪೂಜೆಯನ್ನು ವಿರೋಧಿಸುತ್ತಾರೆ. 'ನಿನ್ನೆಡೆಗೆ ಬರುವಾಗ' ಮಂತ್ರಗಳ ಬಿಂಕವನ್ನು ಬಿಟ್ಟು ಪ್ರೇಮದಾರತಿ ಹಿಡಿದು ತೇಲಿಬರುವೆ' ಎನ್ನುತ್ತಾರೆ. ಕುವೆಂಪು ಅವರು ಬಾಹ್ಯಪೂಜೆಯನ್ನು ವಿರೋಧಿಸಿದವರು. ಆದರೆ ಭಗವಂತನ ಪ್ರಾರ್ಥನೆಯಲ್ಲಿ ಅವರಿಗೆ ಅಚಲವಾದ ನಂಬಿಕೆ. ಭಕ್ತ ಮತ್ತು ಭಗವಂತನ ನಡುವೆ ಶೋಷಕನಾಗಿ ಬರುವ ಪೂಜಾರಿಯ ಬಗ್ಗೆ ಅವರ ಆಕ್ರೋಶ. ಈ ಕವನದಲ್ಲಿ ಭಕ್ತನ ಕಾತರತೆಯನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ.

'ಎಲ್ಲಿ ನಿನ್ನನ್ನು ನೋಡಲಿ' ಕವನದಲ್ಲಿ ಕವಿ ಹೂವಿನಲ್ಲೂ ಭಗವಂತನನ್ನು ಕಾಣುತ್ತಾರೆ.

ಪೂಗಳು ಬೆಳೆಯುವ ವನದಲ್ಲಿ
ಗೋಗಳು ಮೇಯುವ ಬಯಲಲ್ಲಿ॥

ಕವಿ ಪ್ರಕೃತಿಯ ಒಳಗೆ ದೇವರನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ. ಜಗತ್ತನ್ನು ಯಾವುದೋ ಕಾಣದ ಕೈಯೊಂದು ಆಳುತ್ತಿದೆ, ಅಲ್ಲದೆ ನಿರ್ದೇಶಿಸಿ, ನಿಯಂತ್ರಿಸುತ್ತಿದೆ ಎಂಬ ನಂಬಿಕೆಯಿದೆ. ಭಗವಂತನ ಶಕ್ತಿಯ ಕೈವಾಡ-ಪವಾಡಗಳನ್ನು ಕಂಡು, ಅನುಭವಿಸಿ ರಸಸಮಾಧಿಯ ಸಿದ್ಧಿಯನ್ನು ಹೊಂದುತ್ತಾರೆ. ಪುಟ್ಟಪ್ಪನವರು ಏನನ್ನೇ ಹೇಳ ಹೊರಟರೂ ಪ್ರತಿಮಾತ್ಮಕವಾಗಿ ಹೇಳುತ್ತಾರೆ.

ಕೋಗಿಲೆ ಕೂಗುವ ತಳಿರಲ್ಲಿ
ಬಡವರು ಬೇಡುವ ಕಡೆಯಲ್ಲಿ
ಹೊಟ್ಟೆಗೆ ಇಲ್ಲದ ಹೀನರೊಳು
ಬಟ್ಟೆಯ ಕಾಣದ ದೀನರೊಳು॥ (ಎಲ್ಲಿ ನಿನ್ನನು ನೋಡಲಿ)

ಕವಿಗೆ ಹಾಡುವ ಹಕ್ಕಿಯ ಇಂಚರದಲ್ಲಿ ದೈವ ಸಂದೇಶವಿದೆ. ನೀರ ಜುಳು ಜುಳು ಶಬ್ಧ ಭಗವಂತನ ಆಗಮನಕ್ಕೆ ಶುಭಸೂಚನೆಯೆಂದು ತಿಳಿಯುತ್ತಾರೆ. ಬಡವರು ಹಾಗೂ ಹೊಟ್ಟೆಗೆ ಇಲ್ಲದವರಲ್ಲಿ ದೇವರನ್ನು ಕಾಣುತ್ತಾರೆ. ಕವಿ ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಕುವೆಂಪು ಎಂದೂ ಪ್ರಕೃತಿ ಮತ್ತು ದೇವರು ಎರಡು ಬೇರೆಯೆಂದು ಹೇಳುವುದಿಲ್ಲ. ಈ ಕವಿತೆಯು ಮಹತ್ತಾದ ಭಾವವಸ್ತುವನ್ನು ಹೊಂದಿದೆ. ಕವಿಯು ಭಗವಂತನನ್ನು ಕಾಡಿನಲ್ಲಿ ಬಯಲುಕಡೆಗಳಲ್ಲಿ, ಬಡವರೆದೆಗಳಲ್ಲಿ ಹುಡುಕಲು ಬಯಸುತ್ತಾರೆ. ಆದರೆ ಈ ಕವಿತೆಯ ವಸ್ತು ಸಮಸ್ತ ಭಾಷಾಪ್ರೌಢಿಮೆ-ಯನ್ನು ಹಿಡಿಯುವಲ್ಲಿ ಎಲ್ಲೊ ಜಾರಿದೆ ಎಂದು ಅನಿಸುತ್ತದೆ. 'ಸ್ಥಿರಚಿತ್ತವೇಕಿನ್ನು ಬರಲಿಲ್ಲ' ಎಂದು ಹೇಳುವ ಮೂಲಕ ಪೂರ್ಣತೆಯನ್ನು ಪ್ರಶ್ನಿಸುತ್ತಿದ್ದಾರೆ. ಮನಸ್ಸಿನಲ್ಲಿ ಆಸೆ, ಮೋಹ ಎಲ್ಲವು ಆವರಿಸಿರುವುದರಿಂದ ಒಂದು ಶುದ್ಧವಾದ ಮನಸ್ಸನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಹೇಳುತ್ತಾರೆ.

ಕತ್ತಲೊಳು ನಡುಗುವುದು ಎದೆ ಧೈರ್ಯಗುಂದಿ
ಚಿತ್ತದೊಳು ಸುಳಿಯುವುದು ಸಂದೇಹವು; (ಸ್ಥಿರಚಿತ್ತವೇಕಿನ್ನು ಬರಲಿಲ್ಲ)
ಮತ್ತೆ ಬೆಳಕಾಗೆ ನಲಿವುದು ಧೈರ್ಯಹೊಂದಿ
ಸುತ್ತ ನೀನಿಹೆ ಎಂಬ ಭರವಸೆಯಲಿ

ಕವಿಯ ಮನಸ್ಸು ಹಲವು ಸಂದೇಹಗಳಿಂದ ಕೂಡಿದೆ. ಒಂಟಿಯಾಗಿ ಕತ್ತಲೆಯಲ್ಲಿ ನಡೆಯುವಾಗ ಹೃದಯ ತನ್ನ ಧೈರ್ಯಕಳೆದುಕೊಳ್ಳುತ್ತದೆ. ಆಗ ಮನದಲ್ಲಿ ಸಂದೇಹದ ಛಾಯೆ ಸುಳಿಯುವುದು, ನಂತರ ಬೆಳಕಾದಾಗ ಮನದಲ್ಲಿ ,ಧೈರ್ಯಬಂದು ನೀನು ಸದಾ ನನ್ನ ಬಳಿಯಿರುವೆ ಎಂಬ ಭರವಸೆ ಮೂಡುತ್ತದೆ. ಹೀಗೆ ದೇವರನ್ನು ಕುರಿತು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾರೆ.

'ದಿನದಿನವೂ ನೀ ಬಂದಿರುವೆ' ಕವಿತೆ ದೇವರ ಶ್ರೇಷ್ಟತೆಯನ್ನು ತಿಳಿಸುತ್ತದೆ. ಕವಿಗೆ ಭಗವಂತ ಒಲುಮೆಯನ್ನು ನೀಡಿ ಕೃಪೆಯನ್ನು ನೀಡುತ್ತಾನೆ. ದೇವರ ಸನ್ನಿಧಿಯಲ್ಲಿ ಕವಿ ಕೃಪೆಯನ್ನು ಪಡೆದು ಅದರ ಸಾರವನ್ನು ಹೀರಿದ್ದಾರೆ. ಭಗವಂತನನ್ನು ಆರಂಭದಲ್ಲಿ ತಿರಸ್ಕರಿಸಿ ನಂತರ ಆತನ ಮಹಿಮೆಯನ್ನು ಒಪ್ಪಿಕೊಂಡು ದೇವರನ್ನು ಪುರಸ್ಕರಿಸುವ ಚಿತ್ರವನ್ನು ಈ ಕವನದಲ್ಲಿ ಕಾಣಬಹುದು. ಭಕ್ತನು ದೇವರನ್ನು ಎಷ್ಟು

ದೂರಿದರೂ ಸಹಿಸಿಕೊಂಡು ಕರುಣೆಯ ಕೃಪೆಯನ್ನು ತೋರುತ್ತದೆ. ಆದ್ದರಿಂದ ದೇವರ ಸ್ಥಾನ ಬಹಳ ದೊಡ್ಡದು ಎಂದು ಸ್ಮರಿಸುತ್ತಾರೆ. ದೇವರು ದಿನನಿತ್ಯ ತನ್ನ ಸಲಹುತ್ತಿದ್ದಾನೆ. ಆದ್ದರಿಂದ ಅವನ ಕೃಪೆ ತನ್ನ ಮೇಲೆ ಸದಾ ಇರುತ್ತದೆ ಎನ್ನುತ್ತಾರೆ. ಕವಿಯ ಬಾಳಿನಲ್ಲಿ ದೇವರು ತನ್ನ ಕೃಪೆತೋರಿ, ಅವನ ಜೀವನವನ್ನು ರೂಪಿಸಿದ್ದಾನೆ ಎಂಬ ಭಾವ ಈ ಕವಿತೆಯಿಂದ ತಿಳಿಯುತ್ತದೆ. ಕವಿ ಚೇತನಕ್ಕೆ ಆಸರೆಯಾಗಿ ಜೀವದ ಜೀವವಾಗಿರುವೆ ನೀನು ಎಂದು ಕೃತಜ್ಞತೆ ಸಲ್ಲಿಸುತ್ತಾರೆ. ಆದ್ದರಿಂದ ಕುವೆಂಪು ದೃಷ್ಟಿಯಲ್ಲಿ ದೇವರು ಕೇವಲ ದೇವಾಲಯದ ಅಥವಾ ದೇವಸ್ಥಾನದ ದೇವರಲ್ಲ. ಅದನ್ನು ಮೀರಿದ ಅತೀಂದ್ರಿಯ ಶಕ್ತಿ ಎಂಬುದು ತಿಳಿಯುತ್ತದೆ.

'ಎಂದಾದರೊಂದು ದಿನ!' ಎಂಬ ಕವಿತೆಯಲ್ಲಿ ದೇವರ ಜೊತೆ ಪರಸ್ಪರ ಸಂಭಾಷಣೆ ನಡೆಸುತ್ತಾರೆ. ಕವಿ ಭವಿಷ್ಯದ ಕಾಲ ಸಂದರ್ಭದಲ್ಲಿ ಭಗವಂತನನ್ನು ಭೇಟಿಯಾಗುವೆ ಎಂದು ಹೇಳುತ್ತಾರೆ. ಸದಾ ದೇವರ ಧ್ಯಾನದಲ್ಲಿದ್ದು ಮುಂದಿನ ದಿನಗಳಲ್ಲಿ ಯಾವುದಾದರೂ ಒಂದು ದಿನ ನಿನ್ನ ಎದುರಿಗೆ ಬರುವೆ ಎಂದು ಹೇಳುತ್ತಾರೆ. ಕವಿ ನಿನ್ನ ಜೊತೆ ತಿಳಿಯದೆ ಅನುಚಿತವಾಗಿ ವರ್ತಿಸಿದೆ. ಎಲ್ಲವನ್ನು ಮರೆತು ಸತ್ಕರಿಸು ಎಂದು ಪ್ರಾರ್ಥಿಸುತ್ತಾರೆ. ದೇವರ ವಿಚಾರದಲ್ಲಿ ನಾನು ತಟಸ್ಥವಾಗಿ ವರ್ತಿಸಿದ್ದೆ. ಆಗ ದೇವರನ್ನು ನಿಂದಿಸಿ ಅತಿ ಗರ್ವದಿಂದ ನಿನ್ನ ನಾನು ಮರೆತಿದ್ದೆ. ಆದ್ದರಿಂದ ಕ್ಷಮೆ ಇರಲಿ ಎನ್ನುತ್ತಾರೆ.

> ನಿನ್ನ ನಾನರಿಯದೇ ನಿಂದಿಸಿದುದನು ಮರೆವೆ:
> ನಿನ್ನ ನಾನತಿಗರ್ವದಿಂ ಮರೆತುದನು, ಮರೆವೆ; (ಎಂದಾದರೊಂದು ದಿನ)
> ನಿನ್ನಿರವೆ ಸುಳ್ಳೆಂದುದನು ಮರೆವೆ, ಮರೆವೆ;
> ಎಂದಾದರೊಂದು ದಿನವು!

ದೇವರಿರುವುದೇ ಸುಳ್ಳು, ಆತ ಅಸ್ಪಷ್ಟ ಎಂದು ವಾದಿಸಿದ್ದೆ. ಆದರೆ ಈ ಎಲ್ಲಾವನ್ನು ಮರೆತು ಸತ್ಕರಿಸು ಎನ್ನುತ್ತಾರೆ. ಕವಿಗೆ ದೇವರ ಅಸ್ತಿತ್ವದಲ್ಲಿ ಬಾಲ್ಯದ ಸಂದರ್ಭದಲ್ಲಿ ನಿರ್ಲಕ್ಷ್ಯ ಭಾವನೆಯಿತ್ತು ಎಂಬುದು ತಿಳಿಯುತ್ತದೆ. ನಿನ್ನ ಕುರಿತು ಅತಿಗರ್ವದಿಂದ ನೀನಿಲ್ಲ ಎಂದು ಹಿಂದೆ ಹೇಳಿದ್ದೆ, ಆದರೆ ಎಲ್ಲವನ್ನು ಮರೆತು ಕೃಪೆತೋರು ಎಂದು ವಿನಂತಿಸುತ್ತಾರೆ.

> ಬಲ್ಲೆ ನಾ ನೀನೆಲ್ಲ ಎನಗೆ ವಹಿಸುವೆ ಎಂದು;
> ಬಲ್ಲೆ ನಾ ನೀ ನೆನ್ನದೊರೆಯ ಮಾಡುವೆ ಎಂದು;

ದೇವರ ಕೃಪೆ, ಆಶೀರ್ವಾದ ಈ ಎಲ್ಲ ತನ್ನ ಮೇಲೆ ಪ್ರಭಾವಬೀರಿ ಸತ್ಕಾರ ಉಂಟುಮಾಡಿದವು. ನಿನ್ನ ಕೃಪೆಯಿಂದ ನೀನು ನನ್ನನು ದೊರೆಯಮಾಡುವೆ ಎಂದು

ಹೇಳಿಕೊಳ್ಳುತ್ತಾರೆ. ಎಂದಾದರೊಂದು ದಿನ ನಿನ್ನನು ಭೇಟಿಯಾಗಿ ಆಶೀರ್ವಾದ ಪಡೆಯುವೆ ಎನ್ನುತ್ತಾರೆ. ಈ ಕವನದ ಪ್ರಾರಂಭದಲ್ಲಿ ದೇವರ ವಿಚಾರವಾಗಿ ನಿರ್ಲಕ್ಷ್ಯಭಾವವನ್ನು ತಳೆದಿದ್ದು, ನಂತರ ಅದೇ ಕವಿ ಭಕ್ತನಾಗಿ ರೂಪುಗೊಂಡಿದ್ದನ್ನು ಕಾಣಬಹುದು. ಕವಿ ದೇವರ ವಿಚಾರದಲ್ಲಿ ತಳೆದಿದ್ದ ನಿರ್ಲಕ್ಷ್ಯವೇ ಮುಂದೆ ಪ್ರಾರ್ಥನೆಯಾಗಿ ರೂಪುಗೊಳ್ಳುತ್ತದೆ.

ಕವಿ ಭಗವಂತನನ್ನು ಕುರಿತು 'ಎಂದಿಗು ಮುಗಿಯದ ಹಾಡನ್ನು ಹಾಡು' ಎಂದು ಪ್ರಾರ್ಥಿಸುತ್ತಾರೆ. ಕವಿ ದೇವರ ಭಕ್ತಿಯಲ್ಲಿ ಅನುರಕ್ತರಾಗಿ, ತಲ್ಲೀನರಾಗಿದ್ದಾರೆ. ಆ ತಲ್ಲಿನತೆಯ ಸಂದರ್ಭದಲ್ಲಿ ಮುಗಿಯದ ಹಾಡನ್ನು ಹಾಡು ದೇವ ಎಂದು ವಿನಂತಿಸುತ್ತಾರೆ. ಒಂದು ಗೀತೆ ಹಾಡಾಗಬೇಕಾದರೆ ಅಲ್ಲಿ ತಾಳ ಲಯ ಅವಶ್ಯಕ. ಅದೇ ರೀತಿ ನೀನು ಎಂದಿಗೂ ಕೊನೆಯಿಲ್ಲದ ಹಾಡಿಗೆ ನೃತ್ಯಮಾಡು ಎಂದು ಪ್ರಾರ್ಥಿಸುತ್ತಾರೆ. ನಿನ್ನ ಹಾಡಿನ ರಾಗದಿಂದ ಸುಖ, ದುಃಖಗಳು ಮರೆಯಾಗುತ್ತವೆ. ದೇವರು ಎಂದಿಗೂ ಮುಗಿಯದ ಹಾಡನ್ನು ಹಾಡಿ ನರ್ತಿಸಿದಾಗ ಒಂದು ಪಾದ ಸೃಷ್ಟಿ, ಮತ್ತೊಂದು ಪಾದ ಲಯವಾಗುತ್ತದೆ ಎಂದು ಕವಿ ವರ್ಣಿಸುತ್ತಾರೆ. 'ಬಲವ ನೀಡೆನಗೆ' ಕವಿತೆಯಲ್ಲಿ ಕವಿ ದೇವರನ್ನು ಕುರಿತು ಪ್ರಾರ್ಥನೆಯ ರೂಪದಲ್ಲಿ ತನ್ನ ಭಕ್ತಿಯನ್ನು ಅರ್ಪಿಸುತ್ತಿದ್ದಾರೆ. 'ಬಲವ ನೀಡೆನಗೆ, ಗುರುವೆ' ಎನ್ನುವ ಮೂಲಕ ಕವಿ ದೇವರನ್ನು ಸ್ಮರಿಸಿಕೊಳ್ಳುತ್ತಿದ್ದಾರೆ. ಕವಿ ತನ್ನ ಚಿತ್ತಶುದ್ಧಿಗಾಗಿ ಭಗವಂತನನ್ನು ಪ್ರಾರ್ಥಿಸುತ್ತಾರೆ.

ಜಗದ ಮೋಹವು ಮನವ ಮೋಹಿಸಿ
ಮಾಯಜಾಲವ ಬೀಸಿ ಬರುತಿರೆ (ಬಲವ ನೀಡೆನಗೆ)
ಮತ್ತನಾಗದೆ ಕುರುಡನಾಗದೆ
ಚಿತ್ತಶುದ್ಧಿಯೊಳಿರುವ ತೆರದೊಳು _. ಬಲವ_.

ಬದುಕಿನ ಯಾತ್ರೆಯಲ್ಲಿ ಸಮಸ್ಯೆಗಳು ಎದುರಾದಾಗ ಎಲ್ಲವನ್ನು ಎದುರಿಸುವ ಬಲವನ್ನು ನೀಡು, ಅಲ್ಲದೆ ಜೀವನದಲ್ಲಿ ಎಡವಿ ಬಿದ್ದರೂ ಮತ್ತೆ ಎದ್ದು ನಡೆಯುವ ಚೈತನ್ಯವನ್ನು ನೀಡು ಎನ್ನುತ್ತಾರೆ. ಆಸೆಯ ಮೋಹ ಮನಸ್ಸನ್ನು ಆವರಿಸಿ ತನ್ನ ಮಾಯಾಜಾಲವನ್ನು ಬೀರುತಿದೆ. ಆಗ ಮನಸ್ಸು ಕುರುಡಾಗಿ ವರ್ತಿಸದಂತೆ ಕಾಪಾಡು ಎಂದು ಕೇಳಿಕೊಳ್ಳುತ್ತಾರೆ. ಆದ್ದರಿಂದ ಕುವೆಂಪು ಅವರಿಗೆ "ದೇವರು" ಬಾಳಿನ ದಾರಿದೀಪವಾಗಿದೆ. 'ಆವ ದಾರಿಯೊಳು ನೀ ಬರುವೆ?' ಎಂಬ ಕವಿತೆಯಲ್ಲಿ ಕವಿ ಭಗವಂತನ ರೂಪವನ್ನು ವರ್ಣಿಸುವುದರ ಜತೆಗೆ, ಆತ ಬರುವಾಗ ಪ್ರಕೃತಿಯಲ್ಲಿ ಆದ ಬದಲಾವಣೆಯನ್ನು ಕುರಿತು ಹೇಳುತ್ತಾರೆ. ಕವಿ ತನ್ನ ಬಾಳಿಗೆ ನೀನು ಯಾವ ದಾರಿಯಲ್ಲಿ ಬರುವೆ ಎಂದು ಪ್ರಶ್ನಿಸುತ್ತಾರೆ. ಕವಿಯ ಬದುಕಿನಲ್ಲಿ ದೇವರ ಆಗಮನವಾಗುವುದೇ ದಿವ್ಯಕಾರ್ಯ. ಕವಿ ದೇವರ ಆಗಮನಕ್ಕಾಗಿ ಮನಸ್ಸಿನಲ್ಲಿ

ಪ್ರಾರ್ಥನೆ ಮಾಡಿ ಬಂದೆ ಬರುವನು ಎಂಬ ನಂಬಿಕೆಯಿಂದ ಇರುತ್ತಾರೆ. ದನ ಕಾಯುವ ಹುಡುಗ ಬಹಳ ದಣಿದು ಕಾಡಿನ ನೆರಳನ್ನು ಬಯಸಿ ತನ್ನ ಕೊಳಲನೂದುತ್ತಾನೆ. ಆಗ ದಣಿದ ದನಕರುಗಳೆಲ್ಲವೂ ಕಿವಿಗೊಟ್ಟು ಕೇಳಿ ತಮ್ಮ ಮನದ ತಾಪವನ್ನು ಕಡಿಮೆಮಾಡಿಕೊಂಡವು. ಅಲ್ಲದೆ ತಮ್ಮ ಸಂತೋಷವನ್ನು ಹರುಷದಿಂದ ವ್ಯಕ್ತಿಪಡಿಸಿ ಮೆಲುಕು ಹಾಕಿದವು. ಆಗ ಕಾಡಿನ ದಾರಿಯಲ್ಲಿ ಗಾಳಿಯ ರೂಪವಾಗಿ ಬಂದು ಸತ್ಕರಿಸಿದೆ ಎಂದು ವರ್ಣಿಸುತ್ತಾರೆ.

ದೇವರ ಕುರಿತು ಕವಿಯಲ್ಲಿ ಒಂದು ತಾತ್ವಿಕ ಹೋರಾಟವಿತ್ತು ಎಂಬುದನ್ನು 'ತಾತ್ಮಿಕ ಜಿಜ್ಞಾಸೆ' ಎಂದು ಕವಿತೆಯ ಓದಿನಿಂದ ತಿಳಿಯಬಹುದು.

ದೇವನಂ ಕಂಡಿಹೆಯ ನೀನೆಂದು ಕೇಳುವರು
ಏನ ಹೇಳಲಿ ನಾನು, ದೇವ ದೇವ?
ಕಂಡಿಹೆನು ಎಂದುಸುರೆ ಖಂಡಿಪರು ತರ್ಕದಿಂ (ತಾತ್ವಿಕ ಜಿಜ್ಞಾಸೆ)
ಕಂಡಿಲ್ಲವೆನಲೆನಗೆ ಮನಬಾರದು

ಈ ಕವನ ದೇವರ ಅಸ್ತಿತ್ವ, ದೇವರ ಸ್ವರೂಪ ಕುರಿತು ಚರ್ಚಿಸುತ್ತದೆ. ದೇವರು ಇದ್ದಾನೆಯೇ, ಇಲ್ಲವೆ ಎಂಬ ಅಸ್ತಿತ್ವದ ರೂಪದ ಪ್ರಶ್ನೆಗಳಿಗೆ ಕುವೆಂಪು ಉತ್ತರಕೊಟ್ಟಿದ್ದಾರೆ. ಈ ಕವಿತೆಯಲ್ಲಿ ಕವಿಯ ಆಧ್ಯಾತ್ಮಿಕ ಭಾವ ಹೊಮ್ಮಿದೆ. ದೇವರು ಇರುವನು ಅವನ ಲೀಲೆ ಪ್ರಕೃತಿ ಎಂದು ಹೇಳುತ್ತಾರೆ. ದೇವರು ಯಾವ ರೂಪದಲ್ಲಿ ನೆಲೆಸಿದ್ದಾನೆ ಎಂದು ಮನಬಂದಂತೆ ಪ್ರಶ್ನೆ ಕೇಳಿದಾಗ ಕವಿ ಭಗವಂತ ಅಗೋಚರ, ಸರ್ವವ್ಯಾಪಿ ಎನ್ನುತ್ತಾರೆ. ದೇವರು ಇದ್ದರೆ ಅವನನ್ನು ತೋರಿಸು ಎಂದು ಮನಬಂದಂತೆ ಲೇವಡಿಮಾಡುತ್ತಾರೆ. ಆದರೆ ನಿನ್ನ ಮಹಿಮೆಯನ್ನು ಅವರು ತಿಳಿಯದೆ ಮಾತನಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಕವಿಗೆ ದೇವರು ಪ್ರಕೃತಿಯ ಒಳಗೆ ಕಾಣುತ್ತಿರುವ ಚೈತನ್ಯಶಕ್ತಿ. ನಿಸರ್ಗ ಸೌಂದರ್ಯದಲ್ಲಿರುವ ಭಗವಂತನನ್ನು ಪ್ರಾರ್ಥನೆಯ ಮೂಲಕ ಕಂಡುಕೊಳ್ಳುತ್ತಾರೆ. ದೇವರು ಸರ್ವಸೃಷ್ಟಿಗೆ ಕಾರಣಕರ್ತನೆಂದು ಕವಿ ಹೇಳುತ್ತಾರೆ. ದೇವರು ಸರ್ವಶ್ರೇಷ್ಠ ಎಂದಾಗ ಸಾಮಾನ್ಯ ಜನ ಅವನನ್ನು ನೋಡಿರುವೆಯ ಎಂದು ಪ್ರಶ್ನೆ ಕೇಳುತ್ತಾರೆ. ಆಗ ತಾನು ಕಂಡಿರುವೆನು ಎಂದರೆ ತರ್ಕ, ಚರ್ಚೆಯ ಮೂಲಕ ಖಂಡಿಸುತ್ತಾರೆ. ಆದರೆ ದೇವರನ್ನು ನೋಡಿಲ್ಲ ಎನ್ನಲು ತನ್ನ ಮನಸ್ಸು ಒಪ್ಪದು ಎನ್ನುತ್ತಾರೆ. ಕುವೆಂಪು ನಾಸ್ತಿಕರೊ ಆಸ್ತಿಕರೊ ಎಂಬುದನ್ನು ಈಗ ವಾಡಿಕೆಯಲ್ಲಿರುವ ಆ ಮಾತುಗಳ ಅರ್ಥದಲ್ಲಿ ನಿರ್ಧರಿಸುವುದು ಸರಿಯಲ್ಲ. ಕಲ್ಲು, ಮಣ್ಣು, ಮರ, ಲೋಹದಲ್ಲಿ ನಿರ್ಮಿಸಿದ ವಿಗ್ರಹಗಳು, ಮೂರ್ತಿಗಳು ದೇವರು ಎಂಬುದಾಗಿ ಭಾವಿಸಿದರೆ ಅವುಗಳಲ್ಲಿ ಕುವೆಂಪು ಅವರಿಗೆ ಕಿಂಚಿತ್ತು ನಂಬಿಕೆ ಇರಲಿಲ್ಲ. ಕುವೆಂಪು ನಿಜವಾದ ಅರ್ಥದಲ್ಲಿ

ವೇದಾಂತಿ; ತತ್ವಜ್ಞಾನಿ. ಕುವೆಂಪು ದೇವಾಲಯಗಳಿಗೆ ಹೋಗುವುದು ನಿರರ್ಥಕ, ದೇಗುಲದಲ್ಲಿ ದೇವರಿಲ್ಲ ಎಂಬುದನ್ನು ಸಾರಿದ್ದರು. ಆದ್ದರಿಂದ ಈ ಕವನದಲ್ಲಿ ದೇವರ ಕುರಿತು ಶ್ರದ್ಧೆ, ದೇವರ ಬಗೆಗಿನ ಸಂದೇಹ, ಅಲ್ಲದೆ ದೇವರು ತನ್ನ ಕೃಪೆಯ ಮೂಲಕ ಸಲಹುತ್ತಾನೆ ಎನ್ನುವ ಭಾವ ಈ ಎಲ್ಲವೂ ಪ್ರಕಟಗೊಂಡಿವೆ.

ಕುವೆಂಪು ಅವರ ದೇವರ ಬಗೆಗಿನ ಕವಿತೆಗಳಲ್ಲಿ 'ಲೀಲೆ' ಎನ್ನುವ ಪದ್ಯ ತನ್ನದೇ ವಿಶಿಷ್ಟತೆಯಿಂದ ಕೂಡಿದೆ. ಕವಿ ನಸು ಬೆಳಕಿನ ಮುಂಜಾನೆ ಸಮಯದಲ್ಲಿ ಹೂ ಅರಳುವುದು ನಿನ್ನ ಲೀಲೆ ಎನ್ನುತ್ತಾರೆ. ಕವಿ ಇಡೀ ಸೃಷ್ಟಿಯನ್ನು ಸೃಷ್ಟಿಸಿದ ಭಗವಂತನನ್ನು ಕುರಿತು ಪ್ರಾರ್ಥಿಸುತ್ತಾರೆ. ಇಡೀ ಪ್ರಕೃತಿಯೇ ಭಗವಂತನ ಲೀಲೆಯಾಗಿದೆ ಎನ್ನುತ್ತಾರೆ.

ಎಳನಗೆಯ ಬೀರಿ ನಲಿನಲಿದು ನಸುನಗುವ ಕೆಂ
ಬೆಳಗಿನಿಂ ಮೆರೆವ ಹೂ ನಿನ್ನ ಲೀಲೆ;
ಪೊಳೆವೊಳೆವ ಪನಿಗಳಿಂ ತಳತಳಿಸಿ ನಳನಳಿಪ (ಲೀಲೆ)
ತಳಿರ ಪೊಸ ಪೊಂಬಣ್ಣ ನಿನ್ನ ಲೀಲೆ; .... ಸಕಲವೂ

ಕವಿ ಪ್ರಕೃತಿಯಲ್ಲಿನ ಹೂವು, ಹಸುರು, ಭೂಮಿ, ಹೊಳೆ ಈ ಎಲ್ಲವನ್ನು ನೋಡಿ ಅವುಗಳ ಸೌಂದರ್ಯದ ಸೊಬಗನ್ನು ವರ್ಣಿಸುತ್ತಾರೆ. ಅಲ್ಲದೆ ಪ್ರಕೃತಿ ತನ್ನ ಸೊಬಗನ್ನು ಹೊಂದಲು ದೇವರ ಕೃಪೆಯೇ ಕಾರಣ ಎಂದು ಕವಿ ಹೇಳುತ್ತಾರೆ. ಕವಿ ಹೂವು ಅರಳುವ ಕ್ರಿಯೆಯನ್ನು ನೋಡಿ ತನ್ಮಯರಾಗುತ್ತಾರೆ. ಸೃಷ್ಟಿ ಚೈತನ್ಯದಲ್ಲೇ ದೇವರ ಲೀಲೆಯನ್ನು ಕಾಣುತ್ತಾರೆ. ಪಕ್ಷಿ, ತೊರೆ, ಹೊಳೆ, ಹೂವು, ಸೂರ್ಯೋದಯದ ಕಿರಣಗಳು ಈ ಎಲ್ಲವೂ ದೇವರ ಶಕ್ತಿಯಿಂದ ಉದಯಿಸಿ ಮಾನವ ಜೀವನಕ್ಕೆ ಉಲ್ಲಾಸವನ್ನು ನೀಡುತ್ತವೆ ಎನ್ನುತ್ತಾರೆ.

ಹೊಳೆಗಳಲಿ ಸುಳಿಸುಳಿದು ಸಲೆ ನರ್ತನವ ಮಾಡಿ
ಚೆಲುವಾಗಿ ಹರಿವ ಜಲ ನಿನ್ನ ಲೀಲೆ;

ಹೊಳೆಯಲ್ಲಿ ಸುರುಳಿ ಆಕಾರದಲ್ಲಿ ಸುತ್ತಿ ನರ್ತನವ ಮಾಡುವ, ತನ್ನ ಚೆಲುವಾದ ಸೌಂದರ್ಯದಲ್ಲಿ ಹರಿಯುವ ನೀರು ನಿನ್ನ ಲೀಲೆ ಎಂದು ವರ್ಣಿಸುತ್ತಾರೆ. ಭೂಮಿಗೆ ಮಳೆಯ ರೂಪದಲ್ಲಿ ಪಟಪಟನೆ ಬಿದ್ದು, ತನ್ನ ಹೊಳೆಯುವ ಜಲಬಿಂದುಗಳಾಗಿ ಕಾಣುವ ಜಲ ನಿನ್ನ ಲೀಲೆ ಎನ್ನುತ್ತಾರೆ. ಭೂಮಿಯನ್ನು ತನ್ನ ಪ್ರಖರಕಾಂತಿಯಿಂದ ತೊಳೆಯುವ ಸೂರ್ಯನ ಕಿರಣಗಳು ಆ ಕಿರಣದೊಳಗಿನ ಬೆಳಕೆ ದೇವರ ಲೀಲೆ ಎಂದು ಕವಿ ವರ್ಣಿಸುತ್ತಾರೆ.

'ಸನಾತನ ಕವಿ' ಎಂಬ ಕವಿತೆ ಬಹಳ ಪುಟ್ಟದಾಗಿದೆ. ಭಗವಂತನ ಕವನವೇ ಈ ಸೃಷ್ಟಿ ಕವಿ ದೇವರನ್ನು ಕವಿಯಾಗಿ ಪರಿಭಾವಿಸಿಕೊಂಡು, ಆತನ ಸೃಷ್ಟಿಯೇ ಕಾವ್ಯ ಎನ್ನುತ್ತಾರೆ. ಕುವೆಂಪು ಅವರಲ್ಲಿ ದೇವರು ಕವಿಯಾಗಿರುವುದನ್ನು ಕಾಣಬಹುದು. ಕವಿ ದೇವರ ವಿಚಾರದಲ್ಲಿ ಉನ್ನತವಾಗಿ ಆಲೋಚಿಸಿದ್ದಾರೆ ಎನ್ನುವುದಕ್ಕೆ ಕವಿತೆ ಸಾಕ್ಷಿಯಾಗಿದೆ.

ಕವಿ ತನ್ನ ಆರೋಗ್ಯ ತೀರಾ ಕೆಟ್ಟಿರುವ ಸಂದರ್ಭದಲ್ಲಿ ಎಲ್ಲಿ ತಾನು ಸತ್ತು ಹೋಗುವೆನು ಎಂಬ ಆತಂಕದಲ್ಲಿ ಬರೆದಿರುವ ಕವಿತೆಯೇ 'ಭಗವಂತನಿಗೆ ಹೇಳಿಕೊಂಡಿರುವುದು'. 'ಮನೆಯ ಬಿಡುವ ಕಾಲ ಬರಲು' ಎನ್ನುವ ಮೂಲಕ ನಿಸರ್ಗದಿಂದ ದೂರವಾಗಿ ಸಾವಿನ ಮನೆಯನ್ನು ಹೊಕ್ಕುವೆ ಎಂದು ಹೇಳುತ್ತಾರೆ. ಜೀವನವೆಂಬ ಮನೆಯನ್ನು ಬಿಡುವ ಕಾಲ ಬಂದಿದೆ. ಆಗ ನಿನ್ನ ಮನೆಯನ್ನು ತನ್ನ ಸಮಸ್ತ ಎಲ್ಲಾ ಸಿರಿವಂತಿಕೆಯನ್ನು ತೊರೆದು ನಿನ್ನ ಮನೆಯ ಬಾಗಿಲ ಮುಂದೆ ಬರುವೆ ಎನ್ನುತ್ತಾರೆ. ಕವಿ ಈ ಪದ್ಯದಲ್ಲಿ ಮನುಷ್ಯ ಸತ್ತ ನಂತರ ಲೋಕ ಅವರಿಗೆ ವಿಧಿಸುವ ಕ್ರಮಗಳನ್ನು ಕುರಿತು ಚರ್ಚಿಸುತ್ತಾರೆ. ನಿನ್ನ ಮನೆಯೊಳಗೆ ಎಲ್ಲವೂ ಇರುವುದರಿಂದ ತಾನು ಬೆತ್ತಲಾಗಿ ಬಡವನಾಗಿ ನಿನ್ನ ಮನೆಗೆ ಪ್ರೀತಿಯಿಂದ ಬರುವೆನೆಂದು ಹೇಳುತ್ತಾರೆ. ಆಗ ನಿನ್ನ ಬಳಿಗೆ ಬಂದ ನಂತರ ನಾನು ನಿನ್ನ ಪಾದಚರಣದಲ್ಲಿರುವ ಕಮಲಗಳಿಗೆ ಪೂಜೆಮಾಡಿ, ನಿನ್ನ ಮನದ ತೋಟದಲ್ಲಿರುವ ಹೂವನ್ನು ತರುವೆನು ಎಂದು ದೇವರ ಜತೆ ಸಂಭಾಷಿಸುತ್ತಾರೆ.

ಕುವೆಂಪು ಅವರ ದೇವರ ಬಗ್ಗೆ ಯಾವ ದೃಷ್ಟಿಯನ್ನು ಹೊಂದಿದ್ದರು ಎಂಬುದು 'ಸರ್ವಮುಕ್ತಿ' ಕವಿತೆಯಿಂದ ತಿಳಿಯುತ್ತದೆ. ದೇವರ ಬಗೆಗಿನ ಕವಿತೆಗಳಲ್ಲಿ ಭಕ್ತ ಭಗವಂತನ ಆಗಮನಕ್ಕಾಗಿ ಪ್ರಾರ್ಥಿಸುವುದನ್ನು ಕಾಣುತ್ತೇವೆ. ದೇವರ ಬಗ್ಗೆ ಜನಸಾಮಾನ್ಯರು ಹೊಂದಿರುವ ದೃಷ್ಟಿಯನ್ನು ಕುರಿತು ಕವಿ ವಿಡಂಬಿಸುತ್ತಾರೆ.

ಕಾಣಿಸದ ಮೂಲೆಯೊಳು ಬೆರಗಾಗಿ ನಿಂತೆ
ಕಾಣುತಿದೆ ನರರ ಮರುಳಾಟದಾ ಸಂತೆ:
ಗುರಿಯಿಲ್ಲ : ಬೇಕಾವುದೆಂಬ ಅರಿವಿಲ್ಲ; (ಸರ್ವಮುಕ್ತಿ)
ಬರಿದೆ ಮೇಲಾಡಿದರು ಯಾವುದಕೊ ಕಾಣೆ!
ನುಗ್ಗಿದರು ನಾ ಮೇಲೆ ತಾ ಮೇಲೆ ಎಂದು
ಹಿಗ್ಗಿದರು ಸುಳಿದಾಡೆ ಸಂತಸದ ಛಾಯೆ:
ಸಾಗಿದರು ಹಂಗಿಸುತ ಕೆಲರೆನ್ನ ನೋಡಿ,

ಸಾಮಾನ್ಯ ಜನರು ತಾವು ಏತಕ್ಕಾಗಿ ಪ್ರಾರ್ಥಿಸುತ್ತಿದ್ದೀವಿ ಎಂಬ ಅರಿವಿಲ್ಲದೆ ಕೇವಲ ಮರುಳುತನದ ಸಂತೆಯ ರೀತಿ ದೇವಾಲಯವನ್ನು ಆರಾಧಿಸುತ್ತಾರೆ ಎಂದು ವಿಡಂಬಿಸುತ್ತಾರೆ. ಕವಿ ಪರದೆಯ ಹಿಂದೆ ನಿಂತುಕೊಂಡು ಮನುಷ್ಯರ ಮರುಳಾಟವನ್ನು ನೊಡಿ ಟೀಕಿಸುವ ದೃಶ್ಯವಿದೆ.

'ಕಾಣಿಸದ ಮೂಲೆಯೊಳು' ಎನ್ನುವ ಮೂಲಕ ಕವಿ ತನ್ನ ಆಕೃತಿಯನ್ನು ಅಗೋಚರವಾಗಿಟ್ಟುಕೊಂಡು ಸಾಮಾನ್ಯಜನರ ರೀತಿ, ನೀತಿ ನಡವಳಿಕೆಗಳನ್ನು ಸೂಕ್ಷ್ಮಗಣ್ಣಿನಿಂದ ನೋಡುತ್ತಿದ್ದಾರೆ. ಒಂದು ಖಚಿತವಾದ ಗುರಿಯಿಲ್ಲದೆ, ಕೇವಲ ಮಾತಿನ ಸೊಗಡಿನಿಂದಲೇ ಆನಂದಿಸಿ ಭ್ರಮಿಸುತ್ತಾರೆ. ಒಂದು ಸಂತೆಯ ವಾತಾವರಣವನ್ನು ಸೃಷ್ಟಿಸಿ ಅದರ ಒಳಗೆ ದೇವರ ದರ್ಶನ ಕಂಡೆವು ಎನ್ನುತ್ತಾರೆ. ದೇವರ ದರ್ಶನ ಪಡೆಯಲು ನಾ ಮುಂದೆ, ತಾ ಮುಂದೆ ಎಂದು ಪೈಪೋಟಿ ನಡೆಸಿ ದರ್ಶಿಸಿದೆವು ಎಂದು ಸಂತೋಷಪಟ್ಟು ದರ್ಶನ ಪಡೆಯದವರನ್ನು ನೋಡಿ ಹಂಗಿಸುತ್ತಾರೆ ಎನ್ನುತ್ತಾರೆ.

ಕೂಗಿದರು ಕೆಲರೆನಗೆ ಕೈಸನ್ನೆಮಾಡಿ:
ಕೆಲರನ್ನ ದೂರಿದರು 'ಸೋಮಾರಿ' ಎಂದು
ಕೆಲರೆನ್ನ ಬೈದರ್ರೈ 'ಬಲುಹೇಡಿ' ಎಂದು
ನರರೂಪವೆತ್ತಿಳೆಯ ಮರುಳಾಟದಂತೆ
ಸರಿದುದಾ ಗಲಿಬಿಲಿಯ ಸಂತೆ; ನಾ ನಿಂತೆ
ಮಸುಗಾದ ದೂರದೊಳು ಮರೆಯಾದರೆಲ್ಲ,
ತುಸುಹೊತ್ತಿನಾ ಮೇಲೆ ರವ ಕೇಳಲಿಲ್ಲ

ಕೆಲವು ಜನರು ನನಗೆ ಕೈಸನ್ನೆ ಮಾಡಿ, ದೂರಿ 'ಸೋಮಾರಿ' ಎಂದು ಹೇಳಿದರು ಎಂದು ಕವಿ ತನ್ನ ಮನದಲ್ಲಿ ಉಂಟಾದ ವಿಷಾದ ನೋವನ್ನು ವ್ಯಕ್ತಪಡಿಸುತ್ತಾರೆ. ಅಷ್ಟೆ ಅಲ್ಲ ನನ್ನನು ಅವಾಚ್ಯ ಶಬ್ದಗಳಿಂದ ನಿಂದಿಸಿದರು ಎಂದು ನೋವನ್ನು ವ್ಯಕ್ತಪಡಿಸುತ್ತಾರೆ. ಇವರ ಮರುಳಾಟದ ಮತುಗಳನ್ನು ಕೇಳಿ ಏನೂ ಮಾತಾಡದೆ ಮೌನಿಯಾಗಿ ನಿಂತೆ ಆಗ ಜನರು ಮರೆಯಾದರು. ಅವರ ಶಬ್ದದ ಮಾತುಗಳಿಂದ ದೂರದೆ ಎನ್ನುತ್ತಾರೆ. ಅವರ ನಿಂದನೆ ಮಾತುಗಳನ್ನು ಕೇಳಿ ಮನೆಯ ಕಡೆಗೆ ಹೋದೆ. ಆಗ ಆಕಾಶದಿಂದ ಒಂದು ಶಕ್ತಿಯ ಅವತಾರ ಭೂಮಿಗೆ ಇಳಿದಂತೆ ಭಾಸವಾಯಿತು ಎಂದು ಹೇಳುತ್ತಾರೆ. ನಾನು ಕಣ್ತೆರೆದು ನೋಡಿದಾಗ ಸರ್ವಸಕ್ತ, ಸರ್ವವ್ಯಾಪಿಯಾದ ಭಗವಂತನ ದರ್ಶನವಾಯಿತು ಎನ್ನುತ್ತಾರೆ.

ನಿನ್ನೊಲುಮೆ ಲಾಂದ್ರವನು ಕೈಯಲಿ ಹಿಡಿದೆ:
ನಿನ್ನ ಶ್ರೀನಾಮವನು ಬಾಯಲ್ಲಿ ನುಡಿದೆ;
ನಿನ್ನನೇ ನಂಬಿ ನಾ ಹಿಂತಿರುಗಿ ನಡೆದೆ;
ನಿನ್ನವರನೆನ್ನವರನರಸಿದೆನು ಬಿಡದೆ;
ಕಡೆಗೆಲ್ಲರನು ನಿನ್ನ ಬಳಿಗೆ ಕರೆತಂದೆ!
ಕಡೆಗೆ ಧೈರ್ಯದಿ ನಿಂತೆ ನಾ ನಿನ್ನ ಮುಂದೆ!
ಆಗ ನೀನೆನ್ನನಾಲಿಂಗಿಸಿದೆ, ದೇವಾ
ಆಗ ನಿನಗಾನಂದ! ಮೊದಲಲ್ಲ, ದೇವ!

ಕವಿತೆ ಇಷ್ಟಕ್ಕೆ ನಿಲ್ಲದೆ ಮುಂದೆ ಸಾಗಿ ಒಂದು ಮಹತ್ತಾದ ನೋಟವನ್ನು ವ್ಯಕ್ತಪಡಿಸುತ್ತದೆ. ತನಗಿರುವ ದೈವ ಪ್ರೀತಿಯನ್ನು ನಿನ್ನ ಮುಂದೆ ತಿಳಿಸಿ, ನಿನ್ನ ಶ್ರೀನಾಮವನ್ನು ಬಾಯಲ್ಲಿ ನುಡಿದರೆ ಅದೇ ನನಗೆ ದಿವ್ಯದರ್ಶನವೆಂದು ಹೇಳುತ್ತಾರೆ.

'ನಿನ್ನ ಶ್ರೀನಾಮವನು ಬಾಯಲ್ಲಿ ನುಡಿದೆ' ಎನ್ನುವ ಸಾಲನ್ನು ನೋಡಿದರೆ ಕವಿಯ ದೇವರ ಬಗೆಗಿನ ನಿಲುವು ತಿಳಿಯುತ್ತದೆ. ಕುವೆಂಪು ಅವರ ದೃಷ್ಟಿಯಲ್ಲಿ ಭಗವಂತ ನಾಲ್ಕು ಗೋಡೆಗಳ ಮಧ್ಯೆ ಪೂಜೆ ಆರತಿಗಳಿಂದ, ಕೂಡಿ ವಿಜೃಂಬಿಸುವ ಅವತಾರವಲ್ಲ. ಬದಲಾಗಿ ಕೇವಲ ಪ್ರಾರ್ಥನಾ ರೂಪದಲ್ಲಿ ದೇವರ ದರ್ಶನವನ್ನು ಪಡೆಯಲು ಬಯಸುತ್ತಾರೆ. ವಿಭೂತಿ ಪುರುಷರಾದ ವಿವೇಕಾನಂದ, ಶ್ರೀರಾಮಕೃಷ್ಣ ಪರಮಹಂಸರ ನಾಮವನ್ನು ತನ್ನ ಬಾಳಿನ ಉದ್ದಕ್ಕೂ ನೆನೆದಿರುವುದನ್ನು ನೊಡಿದರೆ ಅವರ ಶ್ರೀನಾಮ ದೇವಾಲಯದ ದೇವರನ್ನು ಕುರಿತು ಅಲ್ಲ, ಮಹಾಪುರುಷರನ್ನು ಕುರಿತು ಎಂಬ ವಿಚಾರ ತಿಳಿಯುತ್ತದೆ. ಕವಿ ನಿನ್ನ ನಾಮವನು ನುಡಿದ ನಂತರ ನಿನ್ನನ್ನೆ ದಿನನಿತ್ಯ ಪ್ರಾರ್ಥಿಸಿದೆ ಎನ್ನುತ್ತಾರೆ. ನನ್ನನು ನಿಂದಿಸಿದ ಜನರನ್ನು ಕರೆತಂದು ನಿನ್ನ ಮೂರ್ತಿಯೆದುರು ಧೈರ್ಯವಾಗಿ ನಿಲ್ಲಿಸಿದೆ. ಆಗ ನೀನು ಎನ್ನನು ಪ್ರೀತಿಯಿಂದ ಸತ್ಕರಿಸಿ ಆಲಿಂಗಿಸಿದೆ ದೇವಾ ಎಂದು ಹೇಳುತ್ತಾರೆ.

ಕವಿ ತನ್ನನು ನಿಂದಿಸಿದವರ ಬಗ್ಗೆಯೂ ಪ್ರೀತಿಯಿಂದ ನಡೆದುಕೊಳ್ಳುವ ಮೂಲಕ ಸರ್ವರ ಪ್ರೀತಿಯನ್ನು ಸಾಧಿಸಿದರೆ ಮಾತ್ರ ಸಂಪೂರ್ಣ ಮುಕ್ತಿ ಸಾಧ್ಯ ಎಂಬ ನೀತಿಯನ್ನು ತಿಳಿಸುತ್ತಾರೆ. ಆದ್ದರಿಂದ ಕುವೆಂಪು ಅವರಲ್ಲಿ ದೇವಾಲಯದಲ್ಲಿರುವ ದೇವರ ಕುರಿತು ಯಾವ ನಿರಾಕರಣದ ನಿಲುವಿತ್ತು ಎಂಬುದು ತಿಳಿಯುತ್ತದೆ.

ಕುವೆಂಪು 'ಕಾಣಿಕೆ' ಕವಿತೆಯ ಮೂಲಕ ಒಂದು ಕರೆಯನ್ನು ಕೊಡುತ್ತಾರೆ.

ಕಾಣಿಕೆ ಕೊಡಲೇನು ಎನಗಿಲ್ಲ, ದೇವ;
ಕಾಣಿಕೆಯು ಇಹುದೊಂದೆ ಅದು ಎನ್ನಜೀವ!

ತನ್ನೆಲ್ಲಾ ಜೀವ ಸಂಪತ್ತು ನಿನ್ನದು ಎಂಬ ಸಮರ್ಪಣಾ ಭಾವವನ್ನು ವ್ಯಕ್ತಪಡಿಸುತ್ತಾರೆ. ದೇವರಿಗೆ ತಾನು ಏನಾದರೂ ಕಾಣಿಕೆ ಕೊಡಬೇಕು. ಆದರೆ ತನ್ನ ಹತ್ತಿರ ಜೀವಬಿಟ್ಟು ಮತ್ತೇನು ಇಲ್ಲವಾದ್ದರಿಂದ ತನ್ನ ಜೀವವನ್ನೆ ನಿನಗೆ ಕಾಣಿಕೆಯಾಗಿ ನೀಡುವೆ ಎಂದು ಕುವೆಂಪು ಹೇಳುತ್ತಾರೆ.

ನಿನ್ನಡಿಯ ಧೂಳ ಪಣೆಯೊಳು ಧರಿಸಿ ನಾನು
ನಿನ್ನ ಕೃಪೆಯನು ಗೆಲುವೆ, ಹೇ ಕಾಮಧೇನು!

ಕವಿ 'ಕಾಮಧೇನು' ಎನ್ನುವ ಮೂಲಕ ಮಾತೃಸ್ವರೂಪದ ಗುಣವನ್ನು ದೇವರಲ್ಲಿ ಕಾಣುತ್ತಾರೆ. ನಿನ್ನ ಪಾದದ ಅಡಿಯಲ್ಲಿರುವ ಧೂಳನ್ನು ಹಣೆಯಲ್ಲಿ ಧರಿಸಿಕೊಂಡು ನಿನ್ನ ಕೃಪೆಯಿಂದ ಸರ್ವಜಗತ್ತನ್ನೇ ಗೆಲ್ಲುವೆ ಎಂದು ಹೇಳುತ್ತಾರೆ. ನಿನ್ನ ಕೃಪೆಯಿಂದ ಉದಯಿಸಿದ ಸಮಸ್ತ ಸೃಷ್ಟಿಯನ್ನು ನೋಡಿ ಆಹ್ಲಾದಗೊಂಡು ನಿನ್ನ ಸೇವೆಗೆಯ್ಯುವೆ ಎಂದು ಪ್ರಾರ್ಥಿಸುತ್ತಾರೆ. ತನ್ನೆಲ್ಲಾ ಸಂಪತ್ತು ಕೆಲಸ ಕಾರ್ಯಗಳನ್ನೆಲ್ಲ ತ್ಯಜಿಸಿ ನಿನ್ನ ಗುಣ ಮಹಿಮೆಯನ್ನು ಲೋಕಕ್ಕೆ ತಲುಪಿಸುವೆ ಎನ್ನುತ್ತಾರೆ. ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಾಗ ದೇವರ ದರ್ಶನವಾಗುತ್ತದೆ ಎಂದು ಕುವೆಂಪು ಹೇಳುತ್ತಾರೆ.

ಹೀಗೆ ಕುವೆಂಪು ಅವರ 'ದೇವರ' ಬಗೆಗಿನ ಕಲ್ಪನೆ ವಿಶಿಷ್ಟವಾದದ್ದು. ಅವರು ಎಂದೂ ದೇವಸ್ಥಾನದ ಒಳಗಿರುವ ದೇವರನ್ನು ಕುರಿತು ಸ್ಮರಿಸುವುದಿಲ್ಲ. ಬದಲಾಗಿ ಪ್ರಕೃತಿಯ ಒಳಗಿರುವ ಸೃಷ್ಟಿ ಚೈತನ್ಯವನ್ನೇ ದೇವರೆಂದು ಕರೆದು, ಆರಾಧಿಸುತ್ತಾರೆ. ದೇವರನ್ನು ನಿರ್ಲಕ್ಷ್ಯಮಾಡಿ ಆಸೆಯ ಮೋಹಕ್ಕೆ ಬಲಿಯಾಗುತ್ತದೆ ಎಂದು ಎಚ್ಚರಗೊಂಡು ಕುವೆಂಪು ಎಂದೂ ಒಳಗಾಗುವುದಿಲ್ಲ. ತನ್ನ ಮನಸ್ಸು ಎಲ್ಲಿ ಆಸೆಯೆಂಬ ಮೋಹಕ್ಕೆ ಬೇಡುತ್ತಾರೆ. ಆದ್ದರಿಂದ ಕುವೆಂಪು ಅವರಲ್ಲಿ ಭಗವಂತ ಕೇವಲ ನಾಲ್ಕುಗೋಡೆಗಳ ಒಳಗೆ ಕೂತಿರುವ ಮೂರ್ತಿಯಾಗದೆ ನಿಸರ್ಗದ ಜತೆಗೆ ಒಂದು ತಾದಾತ್ಮ್ಯದ ಸಂಬಂಧವನ್ನು ಹೊಂದಿರುವ ಸಾಕಾರಮೂರ್ತಿಯಾಗಿದ್ದಾನೆ.

ಆದ್ದರಿಂದ ಕುವೆಂಪು ಪ್ರಕೃತಿ, ದೇವರು, ಆತ್ಮ ಪರಮಾತ್ಮ ಇವುಗಳ ನಡುವೆ ಬೇಧವನ್ನು ಕಾಣಲಾರದ ಅದ್ವೈತವಾದಿ. ದೇವರೊಬ್ಬನೇ ನಾಮಹಲವು ಎನ್ನುವಂತೆಯೇ 'ದೇವರೊಬ್ಬನೇ' 'ರೂಪ' ಹಲವು ಎನ್ನುವ ದರ್ಶನ ಕವಿಯದು. ಹಾಗಾಗಿ ಕವಿಗೆ ಭಗವಂತ ಪ್ರಕೃತಿಯ ಸರ್ವಾಂಗಗಳಲ್ಲೂ ಮೈದೋರಬಲ್ಲ, ಕರುಣಿಸಬಲ್ಲವನಾಗಿದ್ದಾನೆ. ಕುವೆಂಪು ದೇವರ ಶಕ್ತಿಯನ್ನು ಸರಿಯಾಗಿ ಅರ್ಥಮಾಡಿಕೊಂಡವರು. ಅವರು 'ಸೂರ್ಯೋದಯ ಚಂದ್ರೋದಯ ದೇವರ ದಯೆ' ಎಂದವರು. ಬೆಟ್ಟದ ದೇವತೆಗೆ ಪೂಜೆಗೆ ಹೊರಟಿದ್ದ ಪತ್ನಿಗೆ ಮನೆಗೆ ಭಿಕ್ಷೆಗೆ ಬಂದ ಮುದುಕಿಯನ್ನು ತೋರಿಸಿ "ಮೊದಲನೆ ದೇವರು ಈ ಹೆಣ್ಮುದುಕಿ" ಎಂದು

ಹೇಳಿ ಆ ದೇವತೆಗೆಂದು ಮೀಸಲಾಗಿದ್ದ ಹಣ್ಣುಕಾಯಿಯನ್ನು ಆ ಮುದುಕಿಗೆ ಕೊಡಿಸುತ್ತಾರೆ. ಅಂದರೆ ಕುವೆಂಪು ಅವರಲ್ಲಿ ದೇವರು ಗುಡಿಯಲ್ಲಿ ಕೂತಿರುವ ವಿಗ್ರಹವಲ್ಲ. ದೇವರನ್ನು ಅರ್ಚಿಸುವುದು ಅವರು ಪ್ರಾರ್ಥನೆಯಿಂದಲೇ. ಪ್ರಕೃತಿಯಲ್ಲೆ ದೇವರನ್ನು ಕಾಣುವ ದೃಷ್ಟಿ ಕುವೆಂಪು ಅವರದು. ದೇವರನ್ನು ಕುರಿತು ಕುವೆಂಪು ಹೀಗೆ ಹೇಳುತ್ತಾರೆ. ದೇವರು ದೇವಸ್ಥಾನದ ಒಳಗೆ ಸೆರೆಯಾಳಾಗಿದ್ದಾನೆ, ಆತನಿಗೆ ದೇವಾಲಯ ಒಂದು ಬಂಧಿಯಾಗಿದೆ. ಈ ದೇವರು ಮತ್ತು ದೇವಸ್ಥಾನವನ್ನು ಕಾಯುವವನೇ ಪೂಜಾರಿ ಎಂದು ಹೇಳುತ್ತಾರೆ. ಹೀಗೆ ಹೇಳಿರುವ ಕವಿಯ ಮಾತುಗಳನ್ನು ನೋಡಿದರೆ ದೇವರು ಕೇವಲ ವಿಗ್ರಹವಲ್ಲ, ಪ್ರಾರ್ಥನೆಯ ಮೂಲಕವೇ ದೇವರ ನಿಜವಾದ ದರ್ಶನವಾಗುತ್ತದೆ ಎಂಬ ವಿಚಾರ ತಿಳಿಯುತ್ತದೆ. ದೇವರು ಹೃದಯಮಂದಿರದಲ್ಲಿರಬೇಕೆಂದು ಋಷಿಗಳು, ಸಂತರು ಸಾರಿದರು. ಆದರೆ ನಮ್ಮ ಪುರೋಹಿತರು ದೇವರನ್ನು ತಮ್ಮ ಜೀವನಯಾಪನೆಯ ಸಾಧನೆಗಾಗಿ ಮಾಡಿಕೊಂಡರು. ಆದಾಯ ಕಂಡ ಈ ಜನ ಹಾದಿ ಬೀದಿಯಲ್ಲೆಲ್ಲಾ ನೂರಾರು ದೇವರುಗಳನ್ನು ಹುಟ್ಟಿಹಾಕಿದರು. ಅಮಾಯಕ ಜನರನ್ನು ಸುಲಿಗೆ ಮಾಡಿದರು. ಆದ್ದರಿಂದಲೇ ಕುವೆಂಪು ನೂರು ದೇವರುಗಳನ್ನು ನೂಕಿ ಭಾರತಾಂಬೆಯನ್ನು ಪೂಜಿಸಬೇಕೆಂದು ಕರೆಕೊಡುತ್ತಾರೆ.

ಉಪಸಂಹಾರ

ಕುವೆಂಪು ೨೦ನೇ ಶತಮಾನದ ಕನ್ನಡದ ಪ್ರಮುಖ ಲೇಖಕರು. ಇವರ ಬಗ್ಗೆ ಅಧ್ಯಯನ ಮಾಡುವಾಗ ಅವರ ಸಾಹಿತ್ಯದಂತೆ ಸಾಹಿತ್ಯೇತರ ಚಟುವಟಿಕೆಗಳೂ ಮುಖ್ಯವಾಗುತ್ತವೆ. ಕುವೆಂಪು ಕಾವ್ಯವನ್ನು ಅಭ್ಯಸಿಸುವಾಗ ಅವರ ಪರಿಸರ, ಬಾಲ್ಯ, ಪ್ರಭಾವ ಹಾಗೂ ಸಾಂಸ್ಕೃತಿಕ ಘಟನೆಗಳು ಎಲ್ಲವೂ ಅಧ್ಯಯನಕ್ಕೆ ಯೋಗ್ಯವಾಗುತ್ತವೆ. ಮಲೆನಾಡಿನ ಮಡಿಲಿನಲ್ಲಿ ಜನಿಸಿದವರು ಕವಿ ಕುವೆಂಪು. ಆದ್ದರಿಂದಲೇ ಅವರ ಕವಿತೆಗಳಲ್ಲಿ ಪ್ರಕೃತಿಯ ಆರಾಧನೆಯಿದೆ. ಪ್ರಕೃತಿಯ ಅಸಾಧಾರಣವಾದ ವೈಭವವನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ. ಅವರು ನಿಸರ್ಗದೊಡನೆ ಕಳೆದ ಘಳಿಗೆಗಳನ್ನು, ಪಡೆದ ಸ್ಫೂರ್ತಿಯನ್ನು, ಮನದಲ್ಲಿ ಗ್ರಹಿಸಿದ ಪ್ರಕೃತಿ ಅನುಭಾವವನ್ನು ಪೃಕೃತಿಗೀತೆಗಳಾಗಿ ಪುನರ್‌ಸೃಷ್ಟಿಸಿದ್ದಾರೆ. ಕೇವಲ ಭೌಗೋಳಿಕ ವಸ್ತುವಾಗದೆ ಭಗವಂತನ ದರ್ಶನವಾಗಿ ಕಾಣುತ್ತದೆ. ಅವರಿಗೆ ಪ್ರಕೃತಿಯಾರಾಧಾನೆಯೆ ಪರಮನಾರಾಧನೆ-ಯಾಗುತ್ತದೆ. ಆದ್ದರಿಂದ ಕುವೆಂಪು ಅವರು ನಿಸರ್ಗಕವಿ, ಪ್ರಕೃತಿ ಕವಿಯಾಗಿದ್ದಾರೆ. ನಮ್ಮ ಸುತ್ತಣ ನಿಸರ್ಗವನ್ನು ಪ್ರೀತಿಸುವುದು ನಮಗೆ ಕೇವಲ ಭೌತಿಕವಾದ ಅಗತ್ಯ ಮಾತ್ರವಲ್ಲ – ಒಂದು ಆಧ್ಯಾತ್ಮಿಕ ಅವಶ್ಯಕತೆಯಾಗಿದೆ ಎಂದು ಹೇಳುತ್ತಾರೆ.

ಕುವೆಂಪು ಹೆಣ್ಣನ್ನು ತಾಯಿಯಂತೆ, ಜಗನ್ಮಾತೆಯಂತೆ ಕಂಡು ತಾನು ಶಿಶುವಿನ ಸ್ಥಾನದಲ್ಲಿ ನಿಂತು ಅವಳನ್ನು ಪೂಜಿಸುತ್ತಾರೆ. ಕವಿ ಹೆಣ್ಣಿನ ಸರ್ವತ್ವವನ್ನೂ ಅವಳ ವಿಶ್ವರೂಪತೆಯನ್ನು ಕೊಂಡಾಡುತ್ತಾರೆ. ಹೆಣ್ಣು ಅವರ ದೃಷ್ಟಿಯಲ್ಲಿ ಶಕ್ತಿಮುಕ್ತಿಗಳ ಸಂಕೇತವಾಗಿದ್ದಾಳೆ. ಪ್ರಕೃತಿ ಮತ್ತು ಅಧ್ಯಾತ್ಮಗಳನ್ನು ಹೊರತುಪಡಿಸಿದರೆ ಕುವೆಂಪು ಅವರ ಕಾವ್ಯದಲ್ಲಿ ಪ್ರೇಮತತ್ವವೇ ಪ್ರಧಾನ ಆಶಯವಾಗಿದೆ. ಕುವೆಂಪು ಅವರನ್ನು ರಸಋಷಿ ಎಂದು ಕರೆದರೂ ಅವರು ಸಂಸಾರದಿಂದ ಎಂದು ವಿಮುಖರಾದವರಲ್ಲ. 'ಕವಿಗೀ ಸಂಸಾರವೆ ಪೂಜೆ' ಎಂದು ಭಾವಿಸಿ ಸಂಸಾರ ಸುಖವನ್ನು ಭಗವಂತನ ಪ್ರಸಾದವಾಗಿ ಸ್ವೀಕರಿಸಲು ಸಿದ್ಧರಾಗುತ್ತಾರೆ. ಆದ್ದರಿಂದಲೇ 'ಸ್ತ್ರೀ'ತ್ವದ ಬಗ್ಗೆ ಅವರಿಗೆ ಅಪಾರಗೌರವವಿದೆ. ನಿಸರ್ಗದ ನಂತರ ಶ್ರೀ ಕುವೆಂಪು ಅವರ ಬದುಕಿನ ಮೇಲೆ ವಿಭೂತಿಪುರುಷರ ಪ್ರಭಾವವಿದೆ. ಕುವೆಂಪು ಅವರು ಇನ್ನೂ ವಿದ್ಯಾರ್ಥಿ-ದೆಸೆಯಲ್ಲಿರುವಾಗಲೇ ರಾಮಕೃಷ್ಣಾಶ್ರಮದ ಪೋಷಣೆ ಪ್ರಭಾವಗಳಿಗೆ ಒಳಗಾದರು. ರಾಮಕೃಷ್ಣ ಪರಮಹಂಸ, ಸ್ವಾಮಿವಿವೇಕಾನಂದರ ಸಾಧನೆಗಳು ಅವರ ಅಂತರಂಗ ಬಹಿರಂಗಗಳನ್ನು ವ್ಯಾಪಿಸಿದ್ದನ್ನು ಕುರಿತು ಕೆಲವು ಪದ್ಯಗಳನ್ನು ರಚಿಸಿದ್ದಾರೆ. ಕುವೆಂಪು ಅವರ 'ದೇವರಿನಕಲ್ಪನೆ' ಅತ್ಯಂತ ವಿಶಿಷ್ಟವಾದದ್ದು. ಪ್ರಕೃತಿಯ ಮಡಿಲಲ್ಲಿ ಕುಳಿತು ಭಗವಂತನ ಸಾಕ್ಷಾತ್ಕಾರವನ್ನು ಕಾಣುತ್ತಾರೆ. ಕವಿ ಭಗವಂತನ ಬರುವಿಕೆಯನ್ನು ಪ್ರಕೃತಿಯಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ಕುವೆಂಪು ಭಗವಂತನ ಸ್ವರೂಪವನ್ನು

ಕಾಡಿನಲ್ಲಿ, ಬಯಲುಕಡೆಗಳಲ್ಲಿ, ಬಡವರೆದೆಗಳಲ್ಲಿ ಹುಡುಕಲು ಪ್ರಯತ್ನಿಸುತ್ತಾರೆ. ಕುವೆಂಪು ಅವರು ದೇವರನ್ನು ಸಂಸ್ಕಾರಯುತವಾದ ಸೃಷ್ಟಿ ಚೈತನ್ಯವಾಗಿ ಕಾಣುತ್ತಾರೆ.

ಹೀಗೆ ಪ್ರಕೃತಿ, ಸ್ತ್ರೀಕೇಂದ್ರಿತ, ದೇವರು, ವಿಭೂತಿ ಪುರುಷರಿಗೆ ಸಂಬಂಧಿಸಿದ ಕವಿತೆಗಳನ್ನು ಇಡೀಯಾಗಿ ಅಧ್ಯಯನ ಮಾಡಲಾಗಿದೆ.

ಗ್ರಂಥಋಣ

೧. ಅನಂತನಾರಾಯಣ ಎಸ್., ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಗಂಗಾತರಂಗ ಪ್ರಕಾಶನ, ಮೈಸೂರು, ೨೦೦೦.

೨. ಕುವೆಂಪು., ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩.

೩. ಕುವೆಂಪು., ಪಕ್ಷಿಕಾಶಿ, ಉದಯರವಿ ಪ್ರಕಾಶನ, ಮೈಸೂರು-೩, ೨೦೦೬.

೪. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಕುವೆಂಪು ಕೃತಿ ವಿಮರ್ಶೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರೊ. ಅರವಿಂದ ಮಾಲಗತ್ತಿ(ಸಂ.)

೫. ಕೃಷ್ಣಕುಮಾರ್ ಸಿ.ಪಿ, ಆಯ್ದ ಕುವೆಂಪು ಕವನಗಳು, ಚೇತನಬುಕ್ ಹೌಸ್, ಮೈಸೂರು, ೧೯೯೬.

೬. ಕೃಷ್ಣಕುಮಾರ್ ಸಿ.ಪಿ, ಕುವೆಂಪು ಸಾಹಿತ್ಯಾಲೋಕ, ಚೇತನಬುಕ್ ಹೌಸ್, ಮೈಸೂರು, ೨೦೦೪.

೭. ಚಂದ್ರಶೇಖರ ನಂಗಲಿ.ವಿ, ಆಲಿಸಯ್ಯ ಮಲೆಯ ಕವಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫.

೮. ಚನ್ನಪ್ಪ.ಎಸ್(ಸಂ.), ಕುವೆಂಪು ಸಾಹಿತ್ಯ ಸಪ್ತಾಹ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೯೬.

೯. ಜವರೇಗೌಡ.ದೇ, ಕುವೆಂಪು ಸಾಹಿತ್ಯ : ಕೆಲವು ಅಧ್ಯಯನಗಳು, ಸಂಪುಟ ೨, ಶ್ರೀ ಕುವೆಂಪು ವಿದ್ಯಾಪರಿಷತ್, ಮೈಸೂರು, ೧೯೮೨.

೧೦. ಜವರೇಗೌಡ.ದೇ, ಕುವೆಂಪು ಸಾಹಿತ್ಯ : ಕೆಲವು ಅಧ್ಯಯನಗಳು, ಸಂಪುಟ ೩, ಶ್ರೀ ಕುವೆಂಪು ವಿದ್ಯಾಪರಿಷತ್, ಮೈಸೂರು, ೧೯೮೯.

೧೧. ಜವರೇಗೌಡ.ದೇ, ಕುವೆಂಪು ದರ್ಶನ ಮತ್ತು ಸಂದೇಶ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾಪರಿಷತ್, ಮೈಸೂರು, ೧೯೮೫.

೧೨. ಜವರೇಗೌಡ.ದೇ, (ಸಂ.), ಸಹ್ಯಾದ್ರಿ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೧೯೭೫.

೧೩. ಜವರೇಗೌಡ ದೇ(ಸಂ.), ನೆನಪಿನ ದೋಣಿಯಲ್ಲಿ ಯಾತ್ರೆ, ಪ್ರಕಾಶಕರು, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೧೯೮೧.

೧೪. ತಿರುಮಲೇಶ್ ಕೆ.ವಿ., ಕಾವ್ಯಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೫. ತಿಪ್ಪೇರುದ್ರಸ್ವಾಮಿ.ಎಚ್, ಕುವೆಂಪು ಅವರ ವೈಚಾರಿಕತೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೩.

೧೬. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಾವ್ಯ, ಅಂಕಿತ ಪುಸ್ತಕ, ಬೆಂಗಳೂರು ೦೪, ೨೦೦೪.

೧೭. ನಾಗರಾಜ್ ಡಿ.ಆರ್., ಶಕ್ತಿ ಶಾರದೇಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ), ೨೦೦೨.

೧೮. ಪರಮೇಶ್ವರ ಭಟ್ಟ ಎಸ್.ವಿ., ರಸಋಷಿ ಕುವೆಂಪು ೧, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೧೯೯೫.

೧೯. ಪ್ರಸಾರಾಂಗ, ಕುವೆಂಪು ಸಮಗ್ರಗದ್ಯ ಸಂಪುಟ ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಡಾ.ಕೆ.ಸಿ.ಶಿವಾರೆಡ್ಡಿ (ಸಂ)

೨೦. ಪೂರ್ಣಚಂದ್ರತೇಜಸ್ವಿ ಕೆ.ಪಿ, ಅಣ್ಣನ ನೆನಪು, ಪುಸ್ತಕ ಪ್ರಕಾಶನ, ಮೈಸೂರು, ೨೦೦೮.

೨೧. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ.ಮೂರ್ತಿ, ಮೈಸೂರುಳ, ೨೦೦೦

೨೨. ಪ್ರಭುಶಂಕರ, ರಾಷ್ಟ್ರಕವಿ ಕುವೆಂಪು, ಸಾಹಿತ್ಯ ಅಕಾಡೆಮಿ, ೨೦೦೮

೨೩. ರಹಮತ್ ತರೀಕೆರೆ, ಇಲ್ಲಿ ಯಾರೂ ಮುಖ್ಯರಲ್ಲ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೨೪. ರಾಜಪ್ಪ ದಳವಾಯಿ, ಕನ್ನಡ ಸಾಹಿತ್ಯ ಕೋಶ, ಶ್ರೀರಾಘವೇಂದ್ರ ಪ್ರಕಾಶನ, ಬೆಂಗಳೂರು-೫೩, ೨೦೦೬

೨೫. ರಾಜೇಗೌಡ ಹ.ಕ(ಸಂ), ಕುವೆಂಪು ಸಾಹಿತ್ಯಲೋಕ-೧, ಪ್ರಕಾಶಕರು, ಕುವೆಂಪು ಅಧ್ಯಯನ ಕೇಂದ್ರ, ಬೆಂಗಳೂರು-೧೦, ೧೯೮೩

೨೬. ಲತಾರಾಜಶೇಖರ್, ಕುವೆಂಪು ಕಾವ್ಯದಲ್ಲಿ ಪ್ರಕೃತಿ – ಒಂದು ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾಪರಿಷತ್, ಮೈಸೂರು, ೨೦೦೩.

೨೭. ಲಕ್ಕಪ್ಪಗೌಡ ಎಚ್.ಕೆ., ಶ್ರೀ ರಾಮಾಯಣ ದರ್ಶನಂ-ಒಂದು ವಿಮರ್ಶಾತ್ಮಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಮೈಸೂರು.

೨೮. ಲೋಹಿಯಾ ಪ್ರಕಾಶನ, ಕುವೆಂಪು ಒಂದು ಪುನರನ್ವೇಷಣೆ, ಬಳ್ಳಾರಿ, ಡಿ.ಎಸ್.ನಾಗಭೂಷಣ(ಸಂ), ೨೦೦೫.

೨೯. ಶಿವರುದ್ರ ಜಿ.ಎಸ್. ಸೌಂದರ್ಯ ಸಮೀಕ್ಷೆ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೦.

೩೦. ಶಿರೂರ.ಬಿ.ವ್ಹಿ, ಸಂಶೋಧನ ಸ್ವರೂಪ, ಅನ್ನಪೂರ್ಣಪ್ರಕಾಶನ, ಹುಬ್ಬಳ್ಳಿ, ೨೦೦೦.

ಲೇಖನಗಳು:

೧. ಕುವೆಂಪು, 'ಪ್ರಕೃತಿಸೌಂದರ್ಯ', ಇತ್ಯಾದಿ, ಉದಯರವಿ ಪ್ರಕಾಶನ, ಮೈಸೂರು-೨, ೧೯೮೭

೨. ಕೀರ್ತಿನಾಥ ಕುರ್ತಕೋಟಿ, 'ಕಾವ್ಯ', ಯುಗಧರ್ಮ ಹಾಗೂ ಸಾಹಿತ್ಯದರ್ಶನ, ಮನೋಹರ ಗ್ರಂಥಮಾಲಾ, ಧಾರಾವಾಡ, ೨೦೦೨.

೩. ಕಾಳೇಗೌಡ ನಾಗವಾರ, 'ಕುವೆಂಪು', ಪ್ರೀತಿ ಮತ್ತು ನಿರ್ಭೀತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೬.

೪. ದೇವಂಗಿ ಚಂದ್ರಶೇಖರ್.ಟಿ, 'ಕುವೆಂಪು ಮತ್ತು ಮಲೆನಾಡು' ಸಹ್ಯಾದ್ರಿ, ದೇಜಗೌ(ಸಂ) ೧೯೭೫.

೫. ನಾಗಭೂಷಣ ಡಿ.ಎಸ್. 'ಕುವೆಂಪು ಚಿಂತನೆಗಳು, ಅನೇಕ, ಲೋಹಿಯಾ ಪ್ರಕಾಶನ, ಬಳ್ಳಾರಿ.

೬. ಪ್ರಭುಶಂಕರ, ಕನ್ನಡಕ್ಕೆ ಶ್ರೀ ಕುವೆಂಪು ನೀಡಿದ ಕಾಣಿಕೆ, ಕೃತಿಶೀಲ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೭. ಬುದ್ದಣ್ಣ ಹಿಂಗಮಿರೆ, 'ಪಕ್ಷಿಕಾಶಿ, ಸಹ್ಯಾದ್ರಿ, ದೇಜಗೌ (ಸಂ)

೮. ರಾಮಚಂದ್ರಪ್ಪ ಬರಗೂರು, 'ಕುವೆಂಪು ಕಾವ್ಯ: ಚಿಂತನೆಯ ಶಿಖರ' ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ, ಬೆಂಗಳೂರು, ೨೦೦೧

೯. ಲಂಕೇಶ್.ಪಿ. ಕುವೆಂಪು ಪತ್ರಗಳು, ಕಂಡದ್ದು ಕಂಡ ಹಾಗೆ, ಲಂಕೇಶ್ ಪ್ರಕಾಶನ, ಬೆಂಗಳೂರು ೦೪, ೨೦೦೪.

೧೦. ಶಿವರುದ್ರಪ್ಪ. ಜಿ.ಎಸ್. 'ಕಾಡಿನಕವಿ-ಕುವೆಂಪು', ಚದುರಿದ ಚಿಂತನೆಗಳು, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು ೨.

೧೧. ಸುಮತೀಂದ್ರ ನಾಡಿಗ, ಕುವೆಂಪು ಕವಿತೆಗಳಲ್ಲಿ ರಮ್ಯತೆ, ವಿಮರ್ಶೆಯ ದಾರಿಯಲ್ಲಿ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೭.

*****